# ಅಪರಂಜಿ

ತಿಳಿನಗೆಯ ಕಾರಂಜಿ

ನವೆಂಬರ್ -2020




ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 38
ಸಂಚಿಕೆ - 2
ನವೆಂಬರ್-2020


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಅವರೆ ಬಗೆ,ಬಗೆ | ವಿದ್ಯಾ ಮೂರ್ತಿ | 3 |
| ಸುಪ್ತಾಕ್ಷರೀ ಮಂತ್ರ | ಗೌತಮ | 7 |
| ವೈವಸ್ವತ ಮನ್ವಂತರೇ... | ಗಣೇಶ ಹೆಗಡೆ | 10 |
| ಕಾಲಿಗ್ರಾಮ್ ತ್ಯಾಗ್ಲಿ | ಸಹನಾ ಪ್ರಸಾದ್ | 14 |
| ತುಂತುರು | ದಂನಆ | 19 |
| ಜಡೆಮುನಿ ಪ್ರಸಂಗವು | ಶಾಂತಾ ನಾಗಮಂಗಲ | 18 |
| ಹೆಸರಿನಲ್ಲೇನಿದೆ? | ಓಂಪ್ರಕಾಶ್ | 21 |
| ಕ್ರಿಕೆಟ್ ಅಂಗಳದಲ್ಲಿ ಕಚಕುಳಿ | ಎಚ್. ಶಾಂತರಾಜ ಐತಾಳ್ | 23 |
| ತುಲಾ ಸಂಕ್ರಮಣ ಪೂಜಾ ಪ್ರಕರಣ | ವತ್ಸನ | 24 |
| ಬದಲಾದ ಬದುಕು | ಎಂ.ಎಸ್.ನರಸಿಂಹಮೂರ್ತಿ | 28 |
| ಸಂಗೀತಗಾರರು - ಹಾಸ್ಯಪ್ರಸಂಗಗಳು | ಎಸ್. ಶಶಿಧರ್ | 31 |
| ನಾಟಕಗಳ ಪಕ್ಷಿನೋಟ | ಡಾ.ಎಂ.ಎಸ್. ವಿದ್ಯಾ | 33 |
| ಹೀಂಗ್ ಮರೆತರೆ ಹ್ಯಾಂಗಾ... | ಜಿ.ವಿ. ಅರುಣ | 37 |


ಮುಖಪುಟ ವ್ಯಂಗ್ಯಚಿತ್ರ :
ಸುನಿಲ್ ಅಗರ್‌ವಾಲ್ ಮತ್ತು ಇಯಾನ್ ಬೇಕರ್


**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್



**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

For Online payment of subscription: KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
**Please mention your subscription number.**

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

ಅಧಿಕಾರಕ್ಕಾಗಿ ಕಾದಾಡುವ ರಣಹದ್ದುಗಳು! – *ಶೀರ್ಷಿಕೆ*

**ರಣಹದ್ದುಗಳು ಪ್ರತಿಭಟಿಸಿದವಂತೆ.**

***

ಸೈಟ್ ಆಮಿಷ. ರೇಲ್ವೇ ಅಧಿಕಾರಿಗೆ ಮೋಸ – ಪತ್ರಿಕೆ.

**ಏಕೋ, ಹಳಿ ತಪ್ಪಿದಂತಿದೆ.**

***

ಮ್ಯೂಚುವಲ್ ಫಂಡ್ ಸರಿ ಇದೆ.

– *ಕ್ರಿಕೆಟ್ ಪಟುಗಳಿಂದ ಭಾರಿ ಜಾಹಿರಾತು*

**ಅಬ್ಬ, ಗೂಗ್ಲಿ ಹಾಕದಿದ್ದರೆ ಸಾಕು!!**

***

ಆರೋಗ್ಯ ಖಾತೆಗೆ ಬಿ.ಎಸ್.ವೈ. ಸರ್ಜರಿ – ಸುದ್ದಿ

**ಖಾತೆಗೆ ಅಪರಂಜಿಯ ಶುಭಾಶಯಗಳು!!**

***

ಲಸಿಕೆ ನೀಲಿನಕ್ಷೆ – **ಪತ್ರಿಕೆ**

**ಕೋವಿಡ್ ಪಾರ್ಕಲಾಂ ಎಂದಿತಂತೆ!!**

***

ಪ್ರವಾಸಿ ತಾಣ – ಜನವೋ ಜನ – **ಪತ್ರಿಕೆ**

**ಎಲ್ಲಾ ದೈವೇಚ್ಛೆ!!**

***

ಬರಲಿದೆ ಫೇಕ್ ನ್ಯೂಸ್ ಆ್ಯಪ್ – **ಸುದ್ದಿ**

**ಅದೇ ಫೇಕ್ ಆಗದಿದ್ದರೆ ವಾಸಿ!!**

***

ರಾಘವೇಂದ್ರ ಬ್ಯಾಂಕ್ ಅವ್ಯವಹಾರ, ಸಿಕ್ಕಿಬಿದ್ದ ಅಧ್ಯಕ್ಷ – **ಸುದ್ದಿ**

**ಹೇ ರಾಘವಾ!!**

***

ಮೈತ್ರಿಕೂಟ ತೊರೆದ ಅಕಾಲಿ ದಳ – **ಸುದ್ದಿ.**

**ಅವರು ಇದೇ ಸಕಾಲ ಎಂದು ಭಾವಿಸಿರಬಹುದಲ್ಲವೇ?**

# ಅವರೆ ಬಗೆ, ಬಗೆ

● ವಿದ್ಯಾ ಮೂರ್ತಿ

ನನ್ನ ಚಿಕ್ಕಂದಿನ ಅವರೆಕಾಲದ ಅನುಭವವನ್ನು ನಿಮ್ಮೊಡನೆ ಹಂಚಿಕೊಳ್ಳಲು ಖುಷಿಯಾಗುತ್ತದೆ.  ನನ್ನ ಹೆತ್ತವರಿಗೆ ನಾವು ಆರು ಮಕ್ಕಳು, ಐದು ಗಂಡುಗಳು ನಂತರ ನಾನೊಬ್ಬಳೇ ಅವಿವೇಕಿ ಪುತ್ರಿ. ನಾನು, ಅವಿವೇಕಿ ಏಕೆಂದರೆ ನನ್ನ ಅಂದಿನ ತಿಳುವಳಿಕೆಯ ಪ್ರಕಾರ, ಅವಿವೇಕಿ ಎಂದರೆ, ಮೈಗಳ್ಳತನ, ಓದಿನಲ್ಲಿ ಹಿಂದೆ, ವಿತ್ತಂಡವಾದಿ, ಕಾಲಹರಣೆ.... ಇತ್ಯಾದಿ... ಈ ವಿಶೇಷಣಗಳಲ್ಲಿ ಒಂದೆರಡು ನನಗೆ ಹೇಗೆ ಅನ್ವಯ ಎಂದು ಮುಂದೆ, ನಿಮಗೇ ಅರಿವಾಗುತ್ತದೆ. ನಮ್ಮ ಚಿಕ್ಕಪ್ಪಂದಿರ ದೆಸೆಯಿಂದ, ನಾವು ಅಪ್ಪನನ್ನು ಅಣ್ಣ, ಅಮ್ಮನನ್ನು ಮನ್ನಿ, (ನಮ್ಮ ಹೆಬ್ಬಾರ್ ಅಯ್ಯಂಗಾರ್ ತಮಿಳಿನಲ್ಲಿ ಮನ್ನಿ ಎಂದರೆ ಅತ್ತಿಗೆ) ಎಂದೂ ಕರೆಯುತ್ತಿದ್ದೆವು. ಇದಿಷ್ಟೂ ಮುನ್ನುಡಿ.

ಇನ್ನು ಮುಂದೆ ತವರಿನ ಅವರೆ ವೈಖರಿ. ಅಣ್ಣ, ಊಟ, ಬಟ್ಟೆ, ಕೆಲಸದ ವಿಷಯದಲ್ಲಿ ಭಾರೀ ಅಚ್ಚುಕಟ್ಟು. ಅಡುಗೆಗೆ ಚಿಟಿಕೆ ಉಪ್ಪು ಹೆಚ್ಚು ಕಮ್ಮಿಯಾದರೂ, ಬಡಿಸುವಾಗ, ಚಮಚೆ ಹೆಚ್ಚು ಬಡಿಸಿದರೂ, ಮನ್ನಿ, ಮನೆ, ದಿಗಂತದಂಚಿಗೆ. ಸೋ, ಮನ್ನಿ ಅಡುಗೆಯೂ ಬಹಳ ಅಚ್ಚುಕಟ್ಟು, ರುಚಿಕಟ್ಟು. ಮನ್ನಿ ಕೈ ರುಚಿ ಸವಿಯಲೆಂದೇ, ನೆಪ ಮಾಡಿಕೊಂಡು, ನಮ್ಮ ಮನೆಗೆ ಬರುವ ನೆಂಟರಿಷ್ಟರೂ ಹೆಚ್ಚು. ಡಿ.ಪಿ.ಐ.ಆಗಿದ್ದ ಅಣ್ಣನಿಗೆ, ಈ ಪಾಟಿ ಮಕ್ಕಳಿದ್ದರೂ, ಮಕ್ಕಳಿಗಾಗಲೀ, ಅತಿಥಿಗಳಿಗಾಗಲೀ, ಉಂಬುವಲ್ಲಿ ಕುಂದಾಗದಂತೆ ತಂದು ಹಾಕುತ್ತಿದ್ದರು, ಮನ್ನಿ ಮಾಡಿ ಬಡಿಸುತ್ತಿದ್ದರು. ಅವರೆಕಾಯಿ ಕಾಲ ಬಂದರಂತೂ, ಮನೆಯಲ್ಲಿ ಸಡಗರ ಹೇಳತೀರದು, ಏಕೆಂದರೆ ಮನೆಯ ಅಷ್ಟೂ ಮಂದಿ, ಅವರೆ ಕಾಯಿಯ ಪಂಚಪ್ರಾಣಿಗಳೇ, ಹದವಾದ, ಹಸಿರು ಅವರೆ ಕಾಳಿನ ಸಾಲಿನಿಂದ ಮೊದಲುಗೊಂಡು, ಬಲಿತ ಅವರೆಕಾಳಿಗೆ, ವಾಂಗಿಬಾತ್ ಪುಡಿ ಹಾಕಿ, ಕಾಳಿಗೆ ದೊಣ್ಣೆ ಮೆಣಸಿನಕಾಯಿ ಜೊತೆಯಾಗಿಸಿ, ಬಾತ್ ಮಾಡುವ ಸಮಯ ಬರುವವರೆಗೂ ತವರಿನಲ್ಲಿ ಅವರೆ ಕಾಯಿ ಬಗೆಬಗೆ. ಸಾರು, ಪಚ್ಚೆ ಕೊಳಂಬು, ಪೊರಚಕೂಟು, ಹುಳಿತೊವ್ವೆ, ನಳಗರಿ, ರೊಟ್ಟಿ, ಉಸುಳಿ, ಪೊಂಗಲ್, ದೋಸೆ, ಇಡ್ಲಿ, ರವೆ ಉಪ್ಪಿಟ್ಟು, ಅಕ್ಕಿ ತರಿ ಉಪ್ಪಿಟ್ಟು, ಮುಟಗೆ, ಅಬ್ಬಬ್ಬಾ, ಪಟ್ಟಿ ಮಾಡಿ ಬೆಟ್ಟು ನೋವು. ನಮ್ಮ ಮನೆಯ ಮತ್ತೊಂದು ವಿಶೇಷವೆಂದರೆ,ಈ ಯಾವ ಬಗೆಗಳಿಗೂ, ಅವರೆಕಾಳಿನ ತೊಗಟೆ ತೆಗೆಯುವಂತಿಲ್ಲ, ಅರ್ಥಾತ್ ಹಿದಕವರೆಗೆ ಸ್ಥಾನವಿಲ್ಲ, ಏಕೆಂದರೆ ಅವರೆ, ವಾಯು ದೇವನ ಮತ್ತೊಂದು ಆವಾಸ ಸ್ಥಾನ, ತೊಗಟೆ ತೆಗೆದು ತಿಂದಿರೋ, ಕೀಲು ನೋವಿಗೆ, ಅಪಾನ ವಾಯುವಿಗೆ, ಅನಪೇಕ್ಷಿತ ಆಹ್ವಾನ. ಇಲ್ಲಿ, ಇಂ, ತೆಂ, ಕೊ, ಕೊ, ಕ. (ಇಂಗು, ತೆಂಗು, ಕೊಬ್ಬರಿ, ಕೊತ್ತಂಬರಿ, ಕರಿಬೇವು) ಗಷ್ಟೇ ಸನ್ಮಾನ. ಈರುಳ್ಳಿ, ಬೆಳ್ಳುಳ್ಳಿ, ಸೊಲ್ಲೆತ್ತುವಂತಿಲ್ಲ.

ಇಂಥ ಅವರೆ ಬಗೆಗೆ, ಆ ಕಾಯಾದರೂ ಎಂತಿರಬೇಕು!!!!!? ಮಾಗಿಯ ನಸುಕಿನ ಇಬ್ಬನಿ ಮುತ್ತಲ್ಲಿ ಸಿಂಗಾರಗೊಂಡ, ಎಳಸೂ ಅಲ್ಲದ, ತೀರಾ ಬಲಿತಿರದ, ಹದವಾದ ಹಚ್ಚಹಸಿರು, ಉಸಿರೆಳೆದುಕೊಳ್ಳಲಿ, ಬಿಡಲಿ, ಪರಿಸರದ ತುಂಬೆಲ್ಲ ಪಸರಿಸುವ ಸೊಗಡಿನ, ಕೊತ್ತುಕೊತ್ತಾಗಿ, ಆಗತಾನೇ ಗಿಡದಿಂದ, ಬಿಡಿಸಿ ತಂದ ಅನುಭೂತಿಯುಂಟು ಮಾಡುವ, ವರ್ತನೆಯವಳ ಹತ್ತಿರ,ತಪ್ಪದೆ ಚೌಕಾಸಿ ಮಾಡಿ, ಅವಳು ಅದರ ಗುಣಗಾನ,

ಹುಟ್ಟೂರು, ಎಲ್ಲದರ ಪ್ರವರ ಹೇಳಿಯಾದ ಮೇಲೆ, ಕೊಂಡು ತರುವ, ಮಾರ್ಕೆಟ್ಟಿನಿಂದ ಮನೆಗೆ ಬರುವ ದಾರಿಯುದ್ದಕ್ಕೂ ಆ  ಸೊಗಡನ್ನು ಆಸ್ವಾದಿಸುತ್ತಾ, ಮನೆಯ ವರಾಂಡದೊಳಗೆ ಕಾಲಿಡಿಸುವಂಥ ಅವರೆಕಾಯಿ ಆಗಿರಬೇಕು. ಮನೆಯಲ್ಲಿರುವ ಎಲ್ಲರೂ  ಕೈ ತೊಳೆದು ಅವರೆಕಾಯಿ ಬಿಡಿಸಲು ಕೂರಬೇಕು, ಮನ್ನಿಯನ್ನು ಬಿಟ್ಟು. ಎಲ್ಲರ ಮುಂದೂ ಒಂದೊಂದು ಗುಡ್ಡೆ, ಆಗ ಸುಲಿದು, ಆಗ ಮಾಡಬೇಕು, ಇವತ್ತು ಬಿಡಿಸಿ, ನಾಳೆ ಮಾಡುವ ಪ್ರಶ್ನೆಯೇ ಇಲ್ಲ. ಯಾರು ಎಷ್ಟು ಕಾಳು ಬಿಡಿಸುತ್ತಾರೋ, ಅವರಿಗೆ ಅಷ್ಟು ಕಾಳಿನ ಮೇಲೆ ಅರ್ಧ ಹಿಡಿ ಬೋನಸ್ ಕಾಳು, ಯಾವುದೇ ಬಗೆ ಮಾಡಿದ್ದರೂ. ಇಲ್ಲಿ ನೋಡಿ ನನಗೆ ಬಂದ, ಮೈಗಳ್ಳಿ ಹೆಸರಿನ ಸಾರ್ಥಕ್ಯ. ನನಗೆ ಅವರೆಕಾಯಿ ಎಂದರೆ ಷಟ್ ಪ್ರಾಣವೇ ಆದರೂ, ಅದನ್ನು ಬಿಡಿಸುವುದೆಂದರೆ ಎಲ್ಲಿಲ್ಲದ ಅಸಹ್ಯ. ನನ್ನ ಮುದ್ದು ಬೆರಳಿನ ಉಗುರೆಲ್ಲಾ, ಕಪ್ಪಾಗಿ, ನೋವಾಗಿ, ಅಪ್ಪಿತಪ್ಪಿ ಅದರಲ್ಲಿ ವಿಲವಿಲ ಗುಟ್ಟುವ ಹುಳುವಿದ್ದರಂತೂ, ಬೆಚ್ಚಿ ಬೀಳುವಂತಾಗುತ್ತಿದ್ದುದರಿಂದ, ನನಗೆ ಅವರೆಕಾಯಿ ಬಿಡಿಸುವುದೆಂದರೆ ಅಲರ್ಜಿ. ಅದಕ್ಕೆ ನಾನು ಬಲೇ ಬುದ್ಧಿ ಉಪಯೋಗಿಸಿ, ಅವರೆಕಾಯಿ ಕಾಲ ಜಾರಿಯಲ್ಲಿರುವವರೆಗೂ, ನನ್ನ ಕೈ ಉಗುರುಗಳನ್ನು, ಪೂರ್ತಿ, ಉಗುರು ಕಣ್ಣಿನ ವರೆಗೂ ಕತ್ತರಿಸಿಕೊಂಡು ಬಿಡುತ್ತಿದ್ದೆ, ಉಗುರಿಲ್ಲದೆ, ಶೂರ್ಪನಖಿಗೂ ಏನನ್ನೂ ಬಗೆಯಲು ಸಾಧ್ಯವಿರದಾಗ, ಹುಲುಮಾನವಳಾದ ನನಗೆ ಅ.ಕಾ. ಬಿಡಿಸಲು ಸಾಧ್ಯವೇ? ಆದರೆ ಅ.ಕಾ.ಯ ಪಾಲು ಮಾತ್ರ ನನಗೆ ಬೇಕು,ಈ ಸಂದರ್ಭದಲ್ಲೇ ಅಣ್ಣ ನನಗೆ ಮೈಗಳ್ಳಿ, ಸೋಮಾರಿ ಎಂದು ಬಿರುದಿತ್ತದ್ದು. ಪರವಾಗಿಲ್ಲ, ಕೈ ಕೆಸರಾಗದೆಯೇ ಬಾಯ್ ಅವರೆ ಆಗುತ್ತಿಲ್ಲವೇ,ಅದರ ಮುಂದೆ ಇದೆಲ್ಲಾ ಏನು ಮಹಾ??? ಒಂದು ದಡಿಯಾ ಅವರೆಕಾಯಿ ಅಂದರೆ ಎರಡೂವರೆ ಕೆ.ಜಿ, ಒಳ್ಳೆಯ, ಸೊಗಡವರೆಯಾದರೆ ಒಂದು ಕೆ.ಜಿ.ಗೆ, ಎರಡುವರೆ ಪಾವು ಕಾಳು ಬರಬೇಕು, ಅಲ್ಲಿಗೆ ದಡಿಯಾಗೆ ಹೆಚ್ಚು ಕಮ್ಮಿ, ಆರು ಪಾವು ಕಾಳು. ಕಾಳಿನ ಜೊತೆಗೆ ಬೇಳೆ ಸೇರಿಸಿ, ಸಾರು ಮಾಡಿದರೆ, ಎಂಟು ಮಂದಿಗೆ ಧಾರಾಳವಾಗಿ, ಒಂದು ಹೊತ್ತಿಗೆ ಸಾಕು, ಇಷ್ಟಾದರೂ ನನಗೆ ಕಮ್ಮಿ ಆಯ್ತು, ಅವನಿಗೆ ಜಾಸ್ತಿ ಆಯ್ತು ಎಂಬ ನನ್ನ ವಿತ್ತಂಡವಾದ, ನನಗೆ ಮತ್ತೊಂದು ವಿಶೇಷಣ ಜಾರಿ. ನನ್ನ ಈ ಅಸಮಾಧಾನವನ್ನು ಪರಿಹರಿಸಲು ಅಣ್ಣ ಒಂದು ಉಪಾಯ ಕಂಡುಹಿಡಿದಿದ್ದರು,  ಮನ್ನಿಯಿಂದ ಹದವಾಗಿ ತಯಾರಿಸಲ್ಪಟ್ಟ, ಮೆಣಸಿನ ಪುಡಿ, ಒಳ್ಳೆ ಕೆಂಪು ಹುಣಸೇಹಣ್ಣಿನ ರಸ, ರುಚಿಗೆ ತಕ್ಕಷ್ಟು ಉಪ್ಪು,ಚೂರು ಬೆಲ್ಲ ಹಾಕಿ,ಗದರಿಲ್ಲದಂತೆ ಕುದಿಸಿ, ಕುದಿಯುವಾಗ ಖಾರವಿಲ್ಲದ ಒಂದು ಉದ್ದ ಹಸಿರು ಮೆಣಸಿನ ಕಾಯಿ ಮುರಿದು ಹಾಕಿ, ಹೊಸದಾದ, ವೆರ್ಜಿ ನಾಟಿ, ಕೊತ್ತಂಬರಿ ಸೊಪ್ಪು ಕತ್ತರಿಸಿ ಹಾಕಿ, ತುಪ್ಪದಲ್ಲಿ ಸಾಸಿವೆ,ಇಂಗಿನ ಒಗ್ಗರಣೆ, ಮಾಡಿದ,ಇಡೀ ಮನೆಯಂಗಳವನ್ನು ದಾಟಿ, ಗೇಟಿನ ವರೆಗೂ ಪಸರಿಸುತ್ತಿದ್ದ ಪರಿಮಳದ ಘಮಘಮ, ಬಿಸಿ ಬಿಸಿ, ಅವರೆಕಾಳು ಸಾರನ್ನು, ಒಂದು ಅಗಲವಾದ ಪಾತ್ರೆಯ ಮೇಲೆ, ಅಷ್ಟೇ ಅಗಲದ, ಅರುಗುಳ್ಳ, ನೂರಾರು ರಂಧ್ರಗುಳುಳ್ಳ  ತಟ್ಟೆಯನ್ನು ಇರಿಸಿ, ಸುರಿದು, ಕಾಳು ಬೇರೆ, ರಸ ಬೇರೆ ಮಾಡಿ ಕಾಳನ್ನು ಏಳು ಸಮಪಾಲು ಮಾಡಿ, ನಾನು ಚಿಕ್ಕವಳಾದ್ದರಿಂದ, ದೊಡ್ಡವರ ಜೊತೆಗೆ ಸೆಣಸಲು ಸಾಧ್ಯವಿಲ್ಲವೆಂಬ, ಭ್ರಮೆಯಲ್ಲಿ ಮತ್ತು ನಾನು ಕಾಳು ಬಿಡಿಸಿಲ್ಲವೆಂಬ ಕ್ಷುಲ್ಲಕ ಕಾರಣ ಮುಂದಿಟ್ಟು, ನನಗೆ ಮಿಕ್ಕವರಿಗಿಂತ ಕಡಿಮೆ ಪಾಲು,  ಮಾಡಿ ಹಂಚುತ್ತಿದ್ದರು. ಎಲ್ಲರನ್ನೂ, ಸಾರಲ್ಲಿ ಅನ್ನ ಕಲೆಸುವಾಗಲೇ

ಅವರವರ ಪಾಲಿನ ಕಾಳು ಬಡಿಸಬೇಕೋ, ಅಥವಾ ಮೊಸರನ್ನದ ಜೊತೆಗೋ, ಇಲ್ಲ ಮೊದಲೇ ಕಾಳು ಬಡಿಸಿದರೆ ಅವರವರಿಗೆ ಬೇಕಾದಂತೆ ತಿನ್ನುವರೋ ಕೇಳಿ, ನಂತರ ಬಡಿಸುತ್ತಿದ್ದರು ಮನ್ನಿ. ಬಿಸಿಬಿಸಿ ಅನ್ನ ಸಾರಿನ ಮೇಲೆ, ನಾನು, ನನ್ನಣ್ಣ ವೇಣು, ಮೊದಲೆಲ್ಲಾ ಕಡೆಗೋಲಲ್ಲಿ ಕಡೆದು ತೆಗೆಯುತ್ತಿದ್ದ, ಆಮೇಲಾಮೇಲೆ ಗಾಜಿನ ಬಾಟಲಿಯಲ್ಲಿ, ಕೆನೆ ಸಂಗ್ರಹಣೆ ಹಾಕಿ, ನಾವಿಬ್ಬರೂ, ಸರದಿಯಲ್ಲಿ, ಇಡೀ ಮೈಯನ್ನು ಬಾಟಲಿಯ ಜೊತೆಯಲ್ಲೇ ಕುಲುಕಿ, ತೆಗೆದ ಬೆಣ್ಣೆಯನ್ನು ಕಾಸಿ ಬಂದ ತುಪ್ಪ ಹಾಕಿ ಎಲ್ಲರೂ ಸಾರನ್ನು ಸುರಿಯಲು ಆರಂಭಿಸಿದೆವೆಂದರೆ ಆ ದಿವ್ಯ ಮೌನದಲ್ಲಿ ಸಾರು ಸವಿದು ಸುರಿಯುವ ಸದ್ದು ಮಾಆಆಆಆತ್ರ. ಒಮ್ಮೆ ಅಲ್ಲಿ ಸುರ್ರ್ ರ್ ಒಮ್ಮೆ ಇಲ್ಲಿ ಸುರ್ರ್ ರ್, ಮತ್ತೊಮ್ಮೆ ಒಟ್ಟೊಟ್ಟಿಗೆ ಸುರ್ರ್, ಒಂದು ಲಯದಲ್ಲಿ, ತಾಳ ವಾದ್ಯ ಕಚೇರಿಯಂತೆ. ನಾವು ಕಡೆಯ ಮೂರು ಕಪಿಗಳೂ ಬೇಕೆಂದೇ ಎಲ್ಲರ ಗಮನವನ್ನೂ ಈ ಲಯದತ್ತ ಸೆಳೆದು, ಊಟ ಮಾಡುವಾಗ, ಮಾತು ನಗು, ಏನೂ ಇರಬಾರದೆಂದು ಕಟ್ಟಪ್ಪಣೆ ಹೊರಡಿಸಿದ್ದ ಅಣ್ಣನೂ ನಗುವಂತೆ ಮಾಡಿಬಿಡುತ್ತಿದ್ದೆವು. ಶಿಸ್ತಿನ ಅಣ್ಣ ನಗು ತಡೆಯಲು ಹೋಗಿ ನೆತ್ತಿಗೇರಿಸಿಕೊಂಡು, ಕೆಮ್ಮು ಶುರುವಾಗಿ ಅವಾಂತರ. ನಂತರ ಎಲ್ಲರೂ ಪ್ರಯತ್ನಪೂರ್ವಕವಾಗಿ, ಸುರಿಯುವ ಸದ್ದನ್ನು ಕಡಿಮೆ ಮಾಡಿ, ಸಾರನ್ನ ತಿಂದು ಮುಗಿಸಿ, ನಂತರ ಮೊಸರನ್ನದ ಜೊತೆ ಕಾಳನ್ನು ನೆಂಚಿಕೊಂಡು ತಿಂದರೆ ಸ್ವರ್ಗ ಕಾಲಬುಡದಲ್ಲಿ. ಇಷ್ಟೆಲ್ಲಾ ರುಚಿಸಿಕೊಂಡು ತಿಂದಮೇಲೂ, ನನಗೆ, ಕಾಳು ಕಡಿಮೆಯಾಯಿತೆಂಬ ಅತೃಪ್ತಿ, ಅಳು. ಪಾಪ ಮನ್ನಿಗೂ, ಮಗಳಿಗೆ ಕಾಳು ಕಡಿಮೆಯಾಯಿತೆಂಬ ಕನಿಕರ. ಅದಕ್ಕೆ ಎಲ್ಲರ ಊಟವಾದ ಮೇಲೆ ಊಟ ಮಾಡುತ್ತಿದ್ದ ಮನ್ನಿ ತನ್ನ ಪಾಲಿನ ಕಾಳಲ್ಲಿ, ಮತ್ತೆ ನನಗೂ ಸ್ವಲ್ಪ ತಿನ್ನಿಸಿ ಸಂತೈಸುತ್ತಿದ್ದರು. ನನ್ನ ಮುದ್ದು ಮನ್ನಿ. ಉಮ್ ಮ್ ಮ್ ಮ್ಮ. ಹೆಚ್ಚು ಕಡಿಮೆ ಎಲ್ಲಾ ಅ.ಕಾ. ಬಗೆಗಳಿಗೂ ಇದೇ ರೀತಿಯ ಹಂಚಿಕೆ.

ಹೀಗಿರುವಾಗ, ಈ ಅ.ಕಾ. ಕಾಲದಲ್ಲಿ ನಮ್ಮ ಮನೆಗೆ ಪರ್ಮನೆಂಟ್ ಗಿರಾಕಿ ಒಬ್ಬರು ಬರುತ್ತಿದ್ದರು. ಅವರು ಬಂದರೆ ಮಕ್ಕಳಾರಿಗೂ ಇಷ್ಟ ವಾಗುತ್ತಿರಲಿಲ್ಲ. ಏಕೆಂದರೆ ಆತ ಮಹಾ ಜುಗ್ಗ, ಮಕ್ಕಳಿರುವ ಮನೆಗೆ ಖಾಲಿ ಕೈಯಲ್ಲಿ ಬರುತ್ತಿದ್ದರು. ಅಪ್ಪಿತಪ್ಪಿ ಏನಾದರೂ ಕೊಟ್ಟರೂ, ಸದಾ ಅವರ ಬಗಲಲ್ಲಿ ನೇತಾಡುತ್ತಿದ್ದ, ಕಮಟು ಹಿಡಿದ ಜೋಳಿಗೆಯ ಒಳಭಾಗದ ಮೂಲೆಗಳಿಗೆ ಕೈ ಹಾಕಿ,ಅವರು ಎಂದೋ, ಯಾವುದೋ ಸಮಾರಂಭದ ಊಟದಲ್ಲಿ, ಎಡಗೈ ಗೆ ಇಸಿದು ಕೊಂಡಿದ್ದ, ಯಾವುದೋ ಮುಗ್ಗು ಹಿಡಿದ ಉಂಡೆಯನ್ನು, ತಮ್ಮ ಜೋಳಿಗೆಯ ಸ್ವಚ್ಛತಾ ಆಂದೋಳನಕ್ಕಾಗಿ, ನಮ್ಮ ಕೈಯಲ್ಲಿರಿಸುತ್ತಿದ್ದರು, ನಮಗೇನು ಬರವೇ, ಹುಚ್ಚೇ, ಬೆಪ್ಪೇ ಅದನ್ನು ತಿನ್ನಲು!!!?. ನಾನಂತೂ,ಅವರಿಗೇ ನೇರ, ಮಾಮ, ಇದು ವಾಸನೆ, ಎಂದು ಹೇಳಿ,ಅವರೆದುರೇ ಅದನ್ನು ಕ.ಬು.ಗೆ ಹಾಕಿ, ಮನ್ನಿ ಕೈಲಿ ಬೈಸಿಕೊಳ್ಳುತ್ತಿದ್ದೆ. ಅವರು ಅಂತದ್ದನ್ನು ಕೊಟ್ಟಾಗ ನಾವು ಹಾಗೆ ಮಾಡಿದರೆ, ಇನ್ನೊಮ್ಮೆ ಅವರು ನಮ್ಮ ತಂಟೆಗೆ ಬರುವುದಿಲ್ಲ ಎಂದು ನನ್ನ ವಾದ. ಮುಂದೆ ಅದೇ ನಿಜವಾಯಿತು ಕೂಡ. ಇಂಥ ವ್ಯಕ್ತಿ, ಮಧ್ಯಾಹ್ನ ಒಂದು ಗಂಟೆ ಆಗುತ್ತಿದ್ದಂತೆ, "ಕಮಲಮ್ಮ, ನಂಗೆ ಊಟಕ್ಕೆ ಬಡಿಸಿಬಿಡುತ್ತೀರಾ, ಔಷಧಿ ತೊಗೋಬೇಕು," ಎಂದು ಹೇಳಿ ಎಲ್ಲರಿಗಿಂತ ಒಂದು ಗಂಟೆ ಮೊದಲೇ ಊಟಕ್ಕೆ ಕೂರುತ್ತಿದ್ದರು. ಅದು ಸಾಲದೆಂಬಂತೆ, ಅವರೆಕಾಯಿಯ ಮೇಲೋಗರ ಯಾವುದೇ ಇರಲಿ, "ಹಾಕಿ,ಇನ್ನೂ ಸ್ವಲ್ಪ ತಳದಿಂದ ಹಾಕಿ, ಬರೀ ಕಾಳೇ ಹಾಕಿ"


ಎಂದು ಹಾಕಿಸಿಕೊಂಡು ಬಿಡುತ್ತಿದ್ದರು, ಇನ್ನೂ ಊಟಕ್ಕೆ ಜನರಿದ್ದಾರೆ ಎಂಬ ಯೋಚನೆಯನ್ನು ಬೇಕಾಗಿಯೇ ಮಾಡದೆ. ತಮಗೆ ತೃಪ್ತಿ ಆದಮೇಲೆ, "ಕಮಲಮ್ಮ,ಪಾಪ ಇನ್ನೂ ಅವರಿಗೆಲ್ಲ ಊಟ ಆಗಿಲ್ಲ, ತುಂಬಾ ರುಚಿಯಾಗಿತ್ತು ಅಂತ ಸ್ವಲ್ಪ ಹೆಚ್ಚೇ ತಿಂದು ಬಿಟ್ಟೆ, ಮಿಕ್ಕವರಿಗೆ ಸಾಲುತ್ತೋ ಇಲ್ಲವೋ, ತೊಟ್ಟು ನೀರು ಕುದಿಸಿ ಹಾಕಿ ಒದಗಿಸಿಬಿಡಿ" ಎಂದು ಅಪ್ಪಣೆ ಕೊಡಿಸಾಟ ಬೇರೆ. ನಾವು ಮಕ್ಕಳಿಗೆಲ್ಲಾ.. ಊಂ ಊಂ....ಎಷ್ಟು ಕೋಪ ಬರುತ್ತಿತ್ತು ಅಂದರೆ.....,!!!! ಇದು ಒಂದು, ಅ. ಕಾ. ಋತುವಿನ ಕತೆಯಲ್ಲ, ಪ್ರತಿವರ್ಷವೂ ಇದೇ ಗೋಳು. ಪಾಪ ಮನ್ನಿ, ಏನೋ ಮಾಡಿ ನಮ್ಮನ್ನು ಸುಮ್ಮನಾಗಿಸುತ್ತಿದ್ದರು. ನಾವು ಕಡೆಯ ಮೂರು ಮಕ್ಕಳೂ, ಮುಂದಿನ ಅವರೆಕಾಯಿ ಕಾಲಕ್ಕೆ ಈ ಮನುಷ್ಯ ಬಾರದಂತೆ ಮಾಡಪ್ಪ ದೇವರೇ, ಎಂದು ಬಹಳ ಭಕ್ತಿ ಪೂರ್ವಕ ವಾಗಿ ಬೇಡಿಕೊಳ್ಳುತ್ತಿದ್ದೆವು.ಯಾಕೋ, ಆ ದೇವರಿಗೆ ನಮ್ಮ ದೀನಮೊರೆ ಕೇಳಿಸಲಿಲ್ಲವೋ, ಇಲ್ಲಾ ಆ ಮನುಷ್ಯನ ಹಣೆಯಲ್ಲಿ ಆತ, ಅಥವಾ ನಮ್ಮ ಅಣ್ಣ ಮನ್ನಿ ಬದುಕಿರುವವರೆಗೂ, ಮನ್ನಿ ಕೈ ಅವರೆಕಾಯಿ ಬಗೆಗಳನ್ನು ಸವಿಯುವ ಪುಣ್ಯ ಕೇಳಿಕೊಂಡು ಬಂದಿದ್ದರೋ, ಒಟ್ಟಿನಲ್ಲಿ ಅ.ಕಾ. ಕಾಲದಲ್ಲಿ ಅವರು ನಮ್ಮ ಮನೆಗೆ ಬರುವುದೂ ತಪ್ಪಲಿಲ್ಲ, ನಾವು ಅವರನ್ನು ಬೈದುಕೊಳ್ಳುವುದೂ ತಪ್ಪಲಿಲ್ಲ. ■

**ಓದುಗರಿಗೆ ಆಹ್ವಾನ**

## ವಿಷಯ: ದೇಹ ಹೀಗಿರಬೇಕಿತ್ತು ...

ನಮ್ಮ ದೇಹ ರಚನೆ ಹೇಗಿರಬೇಕಿತ್ತು? ಹೀಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ನಿಮಗೆ ಅನೇಕ ವೇಳೆ ಅನಿಸಿರಬೇಕಲ್ಲವೆ? ಬ್ರಹ್ಮ ನಿಮ್ಮನ್ನು ಕರೆದು 'ಮನುಷ್ಯನ ದೇಹ ರಚನೆಯನ್ನು ರಿಡಿಸೈನ್ ಮಾಡು' ಎಂದು ನಿಮಗೆ ಒಂದು ಅಸೈನ್‌ಮೆಂಟ್ ಕೊಟ್ಟರೆ ನೀವು ಹೇಗೆ ಅದನ್ನು ನಿಭಾಯಿಸುವಿರಿ? ಎರಡೆರಡು ಕಣ್ಣು, ಕಿವಿ, ಕಾಲು ಕೈಗಳು ಸಾಕೆ? ಅವು ಈಗಿರುವ ಜಾಗದಲ್ಲೇ ಇರಬೇಕೆ? ಒಂದು ಸ್ಪೇರ್ ಹೃದಯ ಇದ್ದಿದ್ದರೆ... ಹೀಗೆ ಹಲವಾರು ಐಡಿಯಾಗಳು ಹೊರಹೊಮ್ಮಲು ಸಾಧ್ಯ. ನಿಮ್ಮ ಸಲಹೆಗಳೇನು? 50 ಪದಗಳಲ್ಲಿ ನಮಗೆ ಬರೆದು ಅಪರಂಜಿ ವಿಳಾಸಕ್ಕೆ ಮೈಲ್ ಮಾಡಿ. ಉತ್ತಮವಾದದ್ದನ್ನು ಬ್ರಹ್ಮನಿಗೆ ಕಳಿಸಲು ಆಗದಿದ್ದರೂ ಅಪರಂಜಿಯಲ್ಲಿ ಪ್ರಕಟಿಸುತ್ತೇವೆ.

**ಕೊನೆಯ ದಿನಾಂಕ; 30.11.2020**



**ಅಪರಂಜಿಗೆ ಆನ್‌ಲೈನ್ ಮೂಲಕ ಚಂದಾ ಕಳಿಸುವ ಬಗೆಗಿನ ವಿವರಗಳನ್ನು ಅಪರಂಜಿ ಮೊದಲ ಪುಟದಲ್ಲಿ ಕೊಡಲಾಗಿದೆ**

# ಸುಪ್ತಾಕ್ಷರೀ ಮಂತ್ರ

● **'ಗೌತಮ'**

ತ್ರಿಚಕ್ರ ಕಟಕಟ ವಾಹನವನ್ನು (ಮಡಿವಂತ ಮಹಾನುಭಾವರೊಬ್ಬರು ಆಟೋರಿಕ್ಷಾವನ್ನು ಕನ್ನಡಕ್ಕೆ ಅನುವಾದಿಸಿದ ಪರಿ) ಅಪಾರ್ಟ್‌ಮೆಂಟ್ ಮುಂದೇನೇ ನಿಲ್ಲಿಸಿದ. ಮೀಟರ್ ನೋಡಿದೆ. ಎಪ್ಪತ್ತನಾಲ್ಕು ರುಪಾಯಿ ತೋರಿಸುತ್ತಿತ್ತು. ಎಂಭತ್ತು ರುಪಾಯಿ ಕೊಟ್ಟೆ. ಪರ್ಸನ್ನು ಮುಚ್ಚಿ ಜೇಬಿನಲ್ಲಿಟ್ಟುಕೊಳ್ಳುವಷ್ಟರಲ್ಲಿ ಪುರ್ ಅಂತ ಸ್ಟಾರ್ಟ್ ಮಾಡೇಬಿಟ್ಟ. ಕೈ ಎತ್ತಿ ಕೂಗಿ ನಿಲ್ಲಿಸಬೇಕೆನ್ನುವಷ್ಟರಲ್ಲಿ ಚಿಲ್ಲರೆ ಕೇಳಿದರೆ ನಾನು 'ಚಿಲ್ಲರೆ' ಅನ್ನಿಸಿಕೊಳ್ಳುವ ಥಾಟು ತಲೆಗೆ ಬಂದು. ಕೈ ಕೆಳಗಿಳಿಸಿದೆ. 'ಹೋಗಲಿ ಬಿಡು. ಆರು ರುಪಾಯಿ ಟಿಪ್ಸ್ ಕೊಟ್ಟೆ ಅಂತ ಖುಷಿ ಪಟ್ಟುಕೋ' ಅಂತ ಒಳ ಮನಸ್ಸು ಹೇಳಿತು. ಇದನ್ನೇ ಅಲ್ಲವೇ ವಿಷಾದ ಯೋಗ ಅನ್ನೋದು?

ಪದ್ದಿಯೊಡನೆ ಅಪಾರ್ಟ್‌ಮೆಂಟ್ ಹೊಕ್ಕೆ. ದೊಡ್ಡ ದೊಡ್ಡ ಬೋರ್ಡುಗಳು. ಎಣಿಸಿದೆ. ಏಳು. ಒಂದೊಂದರಲ್ಲಿ ಹನ್ನೆರಡು ಹನ್ನೆರಡು ಹೆಸರುಗಳು. ಒಟ್ಟು ಎಂಭತ್ನಾಲಕ್ಕು. ಮೊದಲಿಂದ ಕೊನೇವರೆಗಿನ ಹೆಸರುಗಳ ಮೇಲೆ ಕಣ್ಣಾಡಿಸಿದೆ. ಇದ್ದಕ್ಕಿದ್ದಂತೆ ನನಗೆ ನಾನೇ ಕೇಳಿಕೊಂಡೆ 'ನಾನೇನು ಮಾಡ್ತಾ ಇದ್ದೀನಿ?' ಅಂತ. ನಾನು ಬಂದಿರೋದು ನನ್ನ ಹಳೆಯ ಗೆಳೆಯ 'ಟೋಪಿ'ಯನ್ನು ಭೇಟಿ ಆಗೋಕೆ. ಅವನನ್ನ ನೋಡಿ ಮುವ್ವತ್ತೈದು ವರ್ಷದ ಮೇಲಾಯಿತು. ಹೈಸ್ಕೂಲಿನಲ್ಲಿದ್ದಾಗ ನೋಡಿದ್ದಷ್ಟೆ. ಆಮೇಲೇ . . . . ಒಬ್ಬೊಬ್ಬರದು ಒಂದೊಂದು ದಾರಿ, ಜೀವನೋಪಾಯಕ್ಕೆ. ಮೊನ್ನೆ, ಯಾವುದೋ ಮದುವೆ ಸಮಾರಂಭದಲ್ಲಿ ಸಿಕ್ಕ ಇನ್ನೊಬ್ಬ ಸ್ನೇಹಿತನ ಮೂಲಕ 'ಟೋಪಿ ಬೆಂಗಳೂರಲ್ಲೇ ಇದ್ದಾನೆ. ನೈಂತ್ ಬ್ಲಾಕಲ್ಲಿ ಗುಲ್ಜೋರಿಯಾ ಅಪಾರ್ಟ್‌ಮೆಂಟಲ್ಲಿ ಒಂದು ಫ್ಲಾಟ್ ತೊಗೊಂಡು ಆರಾಮಕ್ಕಿದ್ದಾನೆ. ಇಬ್ಬರು ಮಕ್ಕಳು. ಮಗ ಯುಎಸ್‌ಎನಲ್ಲಿ, ಮಗಳು ಯುಕೇಲಿ' ಅಂಬೋ ವಿಷಯ ಕಿವೀಗೆ ಬಿತ್ತು. ಬಿದ್ದ ತಕ್ಷಣ ಟೋಪಿಯನ್ನ ನೋಡೋ ಆಸೆ ಚಿಗುರಿ,ಬಲಿತು, ಹೆಮ್ಮರವಾಗಿ, 2 ತಿಂಗಳ ಸತತ ಪ್ರಯತ್ನದ ನಂತರ ಗಳಿಗೆ ಕೂಡಿಬಂದು ಪತ್ನೀಸಮೇತ ಹೊರಟು ಬಂದೇಬಿಟ್ಟಿದ್ದೆ ಇಲ್ಲಿಗೆ.

ಸರಿಯೇ. ಬಂದದ್ದೇನೋ ಆಯಿತು. ಆದರೆ, ಅವನ ಹೆಸರು? ಮರೆವೇ ಮೆದುಳಿನ ತುಂಬ ಮೆರೀತಿರುವಾಗ ನೆನಪುಗಳಿಗೆಲ್ಲಿಯ ನೆಲೆ? 'ಟೋಪಿ'ಯ ಹೆಸರನ್ನು ಜ್ಞಾಪಿಸಿಕೊಳ್ಳೋ ನೆಪದಲ್ಲಿ ತಲೆ ಕೆರಕೊಂಡೆ. ಬೋರ್ಡಿನಲ್ಲಿದ್ದ ಹೆಸರುಗಳನ್ನು ಇನ್ನೊಂದು ಸಲ ಓದಿದೆ. ಅಷ್ಟುಹೊತ್ತಿಗೆ ಸೆಕ್ಯುರಿಟಿಯವನು ಬಂದ. 'ಟೋಪಿ' ಸಿಕ್ಕೇಬಿಟ್ಟ ಅನ್ನೋಷ್ಟು ಖುಷಿಯಾಗಿ ಅವನ ಕಡೆ ತಿರುಗಿದೆ. 'ಕ್ಯಾ ಸಾಬ್?' ಅಂದ. 'ಇಲ್ಲಿ ಟೋಪಿ ಅನ್ನೋರು ಎಲ್ಲಿದ್ದಾರೆ?' ಅಂತ ಕೇಳಬೇಕೂನ್ನೋಷ್ಟರಲ್ಲಿ ನನ್ನ ಪೆದ್ದುತನದ ಅರಿವಾಗಿ, ಅದರ ಅರಿವು ಅವನಿಗಾಕೋಕೆ ಮುಂಚೆ ಆ ಪ್ರಶ್ನೆಯನ್ನು ಕೇಳದೇ, ಬಚಾವಾಗಿದ್ದೆ.ಆದರೆ ಮಿತ್ರನ ಜೊತೆ ಸೇರುವ ಖುಷಿಯೆಲ್ಲಾ ಜರ್ರಂತ ಇಳಿದುಹೋಯಿತು. ಅಷ್ಟರಲ್ಲಿ ಅವನೇ ಹಿಂದಿಯಲ್ಲಿ ಹೇಳಿದ್ದನ್ನು ಹೀಗೆ ಅರ್ಥೈಸಿಕೊಂಡೆ: ಇದನ್ನ ಚೇಂಜ್ ಮಾಡಿ ಹತ್ತು ವರ್ಷದ ಮೇಲಾಯಿತು.

ಇಂಥ ಸಮಯಗಳಲ್ಲಿ ನನಗೆ ನೆನಪಿಗೆ ಬರುವುದೆಂದರೆ 'ಸುಪ್ತಾಕ್ಷರೀ ಮಂತ್ರ'. ಮುದ್ದಣನದು ಸಪ್ತಾಕ್ಷರೀ ಮಂತ್ರವಾದರೆ, ಪೆದ್ದಣನದು, ಅಂದರೆ ನನ್ನದು 'ಸುಪ್ತಾಕ್ಷರೀ ಮಂತ್ರ'. ಇದರ ಮೂಲ ಉದ್ದೇಶವೇನೆಂದರೆ ನನಗೆ ಬೇಕಾಗಿರೋ ಹೆಸರು ಯಾವ

ಅಕ್ಷರದಿಂದ ಪ್ರಾರಂಭವಾಗತ್ತೆ ಅನ್ನೋದನ್ನು ಕಂಡುಹಿಡಿಯೋದು.

ಹೇಗೆ ಅಂತಂತಂದರೆ ಹೀಗೆ. ಮನಸ್ಸಿನಲ್ಲೇ ವರ್ಣಮಾಲೆಯ ಅಕ್ಷರಗಳನ್ನ ಹೇಳಿಕೊಳ್ತಾ ಆಯಾ ಆಕ್ಷರದಿಂದ ಹೆಸರು ಪ್ರಾರಂಭವಾಗುತ್ತಾ ಅಂತ ನೋಡೋದು. ಅ ಆ ಇ ಈ ಉ ಊ, ಊಸರವಳ್ಳಿ. ಪಾಪ, ನಮ್ಮ ಟೋಪಿ ತುಂಬಾ ಒಳ್ಳೆಯವನು. ಊಸರವಳ್ಳಿ ಥರ ಅಲ್ಲ. ಋ ಅಂದರೆ ಋಷಿಕೇಶ ಒಂದೇ, ಎ ಏ ಐ ಒ ಓ ಔಯಿಂದ ಔರಂಗಜೇಬು. ಅಂ ಅಃ, ಆಃ! ಕ ಖ, ಖಯಿಂದ ಸಾಧ್ಯವೇ ಇಲ್ಲ, ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ. 'ಟ'ವರ್ಗದಲ್ಲೆಲ್ಲಿರತ್ತೆ ಹೆಸರಿಡೋಂಥ ಅಕ್ಷರ? ತ ಥ, ಇದರಲ್ಲೂ ಅಷ್ಟೇ, ದ ಧ ನ ಪ ಫ ಬ ಭ ಮ ಯ ರ ಲ ವ ಶ ಷ ಸ ಹ ಳ. ಉಹುಂ ಇಲ್ಲೂ ಹೆಸರಿನ ಮೊದಲಕ್ಷರ ಹೊಳೀಲಿಲ್ಲ.

ನೆಕ್ಸ್ಟ್ ಸ್ಟೆಪ್ಪು ಅಂದರೆ ಒಂದೊಂದು ಅಕ್ಷರದ ಕಾಗುಣಿತಾಕ್ಷರಗಳನ್ನು ಹೇಳಿಕೊಳ್ತಾ ಹೋಗೋದು. ಅಲ್ಲೂ ಸಿಗದೇ ಇದ್ದರೆ ಒತ್ತಕ್ಷರ ಅಥವಾ ಸಂಯುಕ್ತಾಕ್ಷರಗಳ ಮಾನಸ ಪಠನ.

ಮುಂದುವರಿಸಿದೆ. ಕ ಕಾ ಕಿ ಕೀ ಕು ಕೂ ಕೆ ಕೇ ಕೈ ಕೊ ಕೋ ಕೌ ಕಂ ಕಃ ಗ ಗಾ . . . .

ಮಮಾಮಿಮೀಮುಮೂಮೆಮೇಮೈಮೊಮೋಮೌಮಂಮಃ, ಊಹು. ಮಕಾರದಿಂದಾನೂ ಸಿಗಲಿಲ್ಲ. ಹಾಗಾದರೆ ಯಾವ ಅಕ್ಷರದಿಂದ ಷುರುವಾಗತ್ತೆ ಹಾಳಾದೋನ ಹೆಸರೂ? ಮುಂದುವರಿಸಿದೆ. . . ಳಳಾಳಿಳೀಳುಳೂ ಳೆಳೇಳೈಳೊಳೋಳೌಳಂಳಃ. ಊಹುಂ. ಳನಲ್ಲಿ ಯಾವ ಹೆಸರಿರೋಕೆ ಸಾಧ್ಯ? ನನ್ನ ದಡ್ಡತನಕ್ಕೆ ನಾನೇ ನನ್ನ ಸ್ವಂತ ತಲೆ ಮೇಲೆ ಪಟ್ ಅಂತ ಹೊಡೆದುಕೊಂಡೆ. 'ನನಗೇನು ಬೇರೆ ಕೆಲಸ ಇಲ್ಲವೇನಯ್ಯ' ಅಂತ ಕೋಪ ಮಾಡಿಕೊಂಡು ನಿಮ್ಮ ಮನಸ್ಸಿನಲ್ಲೇ ನನಗೆ ಶಾಪ ಹಾಕ್ತಾ ಈ ಅಪರಂಜೀನ ಹರಿದು ಬಿಸಾಡಬೇಡಿ. ಪ್ಲೀಸ್. ಸ್ವಲ್ಪ ತಾಳ್ಮೆಇರಲಿ. 'ತಾಳ್ಮೇನೇ ತಾಯಿ ತಂದೆ' ಅಂತ ನನ್ನ ಸ್ನೇಹಿತ ಯಾವಾಗಲೂ ಹೇಳ್ತಾ ಇರ್ತಾನೆ.

ಥ್ಯಾಂಕ್ಯೂ ಫಾರ್ ನಾಟ್ ತ್ರೋಯಿಂಗ್ ದ ಬುಕ್.

ಯಾಕೋ ನನ್ನ ಅದೃಷ್ಟ ಸರಿಯಿಲ್ಲ ಅಂತ ಕಾಣತ್ತೆ. 'ಟೋಪಿ'ಯ ಹೆಸರಿನ ಪ್ರಥಮಾಕ್ಷರ ನನ್ನ ತಲೆಗೆ ಹೊಳೀಲೇ ಇಲ್ಲ. ಇವಳೇನಾದರೂ ಓಯಸಿಸ್ ಆಗಬಹುದು ಅಂತ ಪದ್ದಿ ಕಡೆ ತಿರುಗಿದೆ. ರೈಲ್ವೇ ಸ್ಟೇಷನ್ನಿನ್ನಲ್ಲಿ ಒಡೆಯನಿಲ್ಲದೇ ಒಂಟಿಯಾಗಿ ಬಿದ್ದಿದ್ದ ಬ್ಯಾಗಿನಂತೆ ಕಂಡಳು.

ಒತ್ತಕ್ಷರಗಳನ್ನ ಕೈಗೆ ಅಲ್ಲಲ್ಲ ಬಾಯಿಗೆತ್ತಿಕೊಂಡೆ. ಯಾವುದೇ ಪದದ ಮೊದಲನೇ ಅಕ್ಷರ ಸಂಯುಕ್ತಾಕ್ಷರವಾಗಬೇಕಾದರೆ ಅವರ್ಗೀಯ ವ್ಯಂಜನಮಾತ್ರ ಒತ್ತಕ್ಷರವಾಗತ್ತೆ ಅಂತ ಕನ್ನಡ ಪಂಡಿತರೊಬ್ಬರು ಹೇಳಿದ್ದು ನೆನಪಿನಲ್ಲಿತ್ತು. ಕ್ಯ ಕ್ಯಾ ಕ್ಯಿ ಕ್ಯೀ ಕ್ಯು ಕ್ಯೂ . .ಹೀಗೇ ಮುಂದುವರಿದು ತ್ಯ ತ್ಯಾ! ಹಾಂ! ಸಿಕ್ತು, ಸಿಕ್ಕೇಬಿಡ್ತು!! ತ್ಯಾಗರಾಜ!!! 'ಟೋಪಿ'ಯ ಹೆಸರು ತ್ಯಾಗರಾಜಾ! ಮನಸ್ಸಿನಲ್ಲೇ ಕುಣಿದಾಡಿಬಿಟ್ಟೆ. ಅಷ್ಟುಹೊತ್ತಿಗೆ ಸರಿಯಾಗಿ ಸೆಕ್ಯುರಿಟಿಯವ ಬಂದ. ತ್ಯಾಗರಾಜನ ಹೆಸರೂ ಹೇಳಿ ಫ್ಲಾಟ್ ನಂಬರ್ ಕೇಳಿದೆ. ಹೇಳಿದ. ಹೋದೆ. 'ಟೋಪಿ'ಯನ್ನ ತಬ್ಬಿಕೊಂಡೆ. ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಅನ್ನೋದೂ ಮರೆತುಹೋಯಿತು. ವರ್ಷಗಟ್ಟಲೆಯ ಮಾತುಗಳು

ಗಂಟೆಗಟ್ಟಲೆ ಹರಿದವು. ಸವಿನೆನಪುಗಳ ಅನಾವರಣ. ಹಳೆಯ ಪೋ–ಜೋಕುಗಳ ಮೆಲುಕುಗಳು. ಮುಗಿಯದ ಮಾತುಗಳು. ಅಲ್ಲಿ, ಅಡುಗೆ ಮನೆಯಲ್ಲಿ, ಶ್ರೀಮತಿ 'ಟೋಪಿ'ಯೊಂದಿಗೆ ಪದ್ದಿಯ ಪಟ್ಟಾಂಗ.

ಇಲ್ಲೂ ಅಷ್ಟೆ. ಯಾವುದೋ ಒಂದು ಸಿನಿಮಾ ಹೆಸರು ಇಬ್ಬರಿಗೂ ನೆನಪಿಗೆ ಬರದೆ ತಲೆ ಕೆರೆದುಕೊಳ್ಳುತ್ತಿದ್ದಾಗ ನಾನು 'ಸುಪ್ತಾಕ್ಷರೀ ಮಂತ್ರ'ವನ್ನು ಜಪಿಸಿ ಹೆಸರನ್ನು ಪತ್ತೆ ಮಾಡಿದೆ. ಅವನು ಆಶ್ಚರ್ಯದಿಂದ 'ಅದು ಹೇಗಯ್ಯಾ ಕಂಡುಹಿಡಿದುಬಿಟ್ಟೆ?' ಅಂತ ಕೇಳಿದಾಗ, ಸುಪ್ತವಾಗಿರುವ ಹೆಸರಿನ ಮೊದಲಕ್ಷರವನ್ನು ಉತ್ಖನನ ಮಾಡುವುದರ ಮೂಲಕ ಕಂಡುಹಿಡಿಯುವುದರಿಂದಾಗಿ ಇದಕ್ಕೆ 'ಸುಪ್ತಾಕ್ಷರೀ ಮಂತ್ರ' ಎಂದು ಹೆಸರಿಟ್ಟದ್ದನ್ನು, ಅದನ್ನು ಅಭ್ಯಾಸ ಮಾಡಿದೆ ಬಗೆ, ನಡೆಸಿದ ಸಂಶೋಧನೆ, ಮಂತ್ರದ ಉಪಯೋಗಗಳು, ಅದರ ಪ್ರಯೋಗದಿಂದ ಮನಸ್ಸಿಗಾಗುವ ಆನಂದ ಮುಂತಾದವುಗಳನ್ನೆಲ್ಲಾ 'ಟೋಪಿ'ಗೆ ವಿವರಿಸಿದಾಗ ಅವನು ದಂಗಾಗಿ 'ಈ ಮಂತ್ರದ ಮೇಲೆ ಯಾಕೆ ಒಂದು ಮಹಾಪ್ರಬಂಧ, ಅದೇ ಕಣೋ ಥೀಸೀಸು, ಬರೀಬಾರದು?' ಅಂತ ಕೇಳಿದ. ನನಗೆ ಡಾಕ್ಟರೇಟು ಬಂದಷ್ಟೇ ಖುಷಿಯಾಯಿತು.

ಹೀಗೆ, ಯಾವುದಾದರೊಂದು ವ್ಯಕ್ತಿಯ, ಸಿನಿಮಾದ, ನಾಟಕದ, ಪುಸ್ತಕದ, ಪುರಾಣದ, ಊರಿನ ಅಥವಾ ವಸ್ತುವಿನ ಹೆಸರನ್ನು ನೆನಪಿಸಿಕೊಳ್ಳುವ ನೆಪದಲ್ಲಿ 'ಸುಪ್ತಾಕ್ಷರೀ ಮಂತ್ರ'ದ ಪ್ರಯೋಗ ಮಾಡುತ್ತಾ ಅದೆಷ್ಟು ಸಹಸ್ರ ಬಾರಿ ಈ ಮಂತ್ರವನ್ನು ಜಪಿಸಿದ್ದೇನೆಯೋ ಕಾಣೆ. ಬಹುಶಃ ಲೆಕ್ಕ ಹಾಕಿದರೆ ಗಿನ್ನೆಸ್ ದಾಖಲೆಗೆ ಸೇರೋದರಲ್ಲಿ ಅನುಮಾನವೇ ಇಲ್ಲ.

ಮರೆವಿನ ಪ್ರಭುತ್ವದಲ್ಲಿ ಒಬ್ಬ ಮುದಿ ಪ್ರಜೆಯಾಗಿರುವ ನನ್ನಂಥವರ ಪುಣ್ಯ ಎಂದರೆ, ಈ ವರ್ಣಮಾಲೆಯನ್ನು ಅದರಲ್ಲೂ ಕನ್ನಡದ ವರ್ಣಮಾಲೆಯನ್ನು ಮಾತ್ರ ಮರೆಯದಂತೆ ನೋಡಿಕೊಂಡ, ಸಹಸ್ರಾರು ಬಾರಿ ಇದರ ಜಪವನ್ನು ಮಾಡುವ ಅವಕಾಶ ಮಾಡಿಕೊಟ್ಟಿರುವ ಆ ಮರೆವಿಗೆ ಮತ್ತು ಆ ಮರೆವನ್ನು ಕೊಟ್ಟ ಆ ದೇವರಿಗೆ ಕೋಟಿ ಕೋಟಿ ನಮನಗಳು.

ನಾನೇ ಧನ್ಯ.

ಜೈ ಕರ್ನಾಟಕ ಮಾತೆ! ■

## ಪಲುಕಿದಳು ಅಪರಂಜಿ

ಸಹನಾ ಪ್ರಸಾದ್

ಇಲ್ಲಿ ಇಲ್ಲವಾಗದಿರುವುದೇ ಕಷ್ಟದಾಯಕ,
ಕೆಲ ಸಮಯದವರೆಗೂ ಮಾಡುವರು ಸ್ತುತಿ
ನಂತರ ಮಾನ ಉಳಿಸಿಕೊಳ್ಳುವುದೇ ಕಾಯಕ
ಇಲ್ಲಸಲ್ಲದ ಅಪವಾದದ ಹೊರೆಯೇ ಗತಿ!!

ಆತನ ದುರ್ಮರಣ ತಂದಿತ್ತು ಆಕ್ರಂದನ
ಹತ್ತಿಸಬಾರದಿತ್ತು ಆ ತಾಯಿಯಲ್ಲಿ ಕಿಚ್ಚು
ಹರಡುವುದೇ ಆಯ್ತಲ್ಲ ಮೀಡಿಯಾದಲ್ಲಿ ತಲ್ಲಣ
ಬದುಕಲಿ ಬಿಡಿ ಹುಡುಗಿ, ಯಾಕೆ ಹೊಟ್ಟೆಕಿಚ್ಚು!

# ವೈರಸ್ವತ ಮನ್ವಂತರೇ...

**● ಗಣೇಶ ಹೆಗಡೆ**

ಸಹೃದಯ ವಾಚಕರೆ,

ಈ ವೈರಸ್ವತ ಮನ್ವಂತರದ ಶಾರ್ವರೀ ಸಂವತ್ಸರದಲ್ಲಿ ಭಗವಂತನಾದಿಯಾಗಿ ಇಡೀ ಮನುಜ ಕುಲವು ಲಾಕ್‌ಡೌನ್‌ನಲ್ಲಿದ್ದು, ಹಲವರು ತಮ್ಮ ಸ್ವಯಂ ಕೃತ ಅಪರಾಧಗಳಿಗಾಗಿ ಲಾಕ್‌ಅಪ್‌ನಲ್ಲಿದ್ದು, ಅಂಥಹ ಸಂತ್ರಸ್ತರ ಗೊಂದಲಮಯ, ಮನಸ್ಸನ್ನು ತಿಳಿಗೊಳಿಸಲಿಕ್ಕಾಗಿ, ಈ ಲೇಖಕರದೆ ಇತ್ತೀಚಿನ ಅಪ್ರಕಟಿತ ಕೃತಿ 'ಮಾಸ್ಕ್ ತೆಗೆಯೆ ಮಾಯಾಂಗನೆ' ಎಂಬ ಪುಸ್ತಕದಿಂದ ಆಯ್ದ ಕೆಲವೊಂದು ನೈಜ ಘಟನೆಯಾಧಾರಿತ ಪ್ರಸಂಗಗಳನ್ನು ಎಲ್ಲರ ಅವಗಾಹನೆಗೆ ತರಲು ಇಚ್ಛಿಸುತ್ತಿದ್ದೇವೆ.

**ಪ್ರಕರಣ – 1**

"ಸ್ವಾಮಿ, ಇಲ್ಲಿ ಪುಟ್ಟೂರಾಯರ ಮನೆ ಎಲ್ಲಿ ಬರುತ್ತೆ?. ಇದೇ ಕ್ರಾಸಿನಲ್ಲೇ....ಅಂತ ಅನ್ಕೋತೀನಿ"

"ಇನ್ನೂ ಹತ್ತು ಹೆಜ್ಜೆ ಮುಂದಕ್ಕೆ ಹೋಗಿ ದೇವ್ರು, ಅಲ್ಲಿ ಹಾಲಿನ ಬೂತ್ ಸಿಗುತ್ತೆ. ಅದರ ಎದುರುಗಡೆ ಮನೇನೆ ಅವರದ್ದು. ಅಂದ್ಹಾಗೆ ತಾವು ಅವರ ಸಂಬಂಧಿಗಳೋ?"

"ಛೇ..ಛೆ.. ನಾನೇ ಆ ಪುಟ್ಟೂರಾಯ' ಏಳು ತಿಂಗಳಿನಿಂದ ಹೋಮ್ ಕ್ವಾರಂಟೈನ್‌ನಲ್ಲಿದ್ದೂ, ಇದ್ದು ಇವತ್ತೇ ರಸ್ತೆಗೆ ಇಳಿದಿದ್ದು. ಯಾಕೊ ಎಲ್ಲಾ ಕನ್‌ಫ್ಯೂಷನ್ನು' ಗೊಂದಲಮಯ.

**ಪ್ರಕರಣ – 2**

"ರ್ರೀ...ಪದ್ಮಮ್ಮ..ಫಂಕ್ಷನ್ನಿಗೆ ನೀವೊಬ್ರೆ ಬಂದ್ರಾ?"

"ಇಲ್ಲಾರಿ, ನಮ್ಮೆಜಮಾನ್ರೂ ಬಂದಿದ್ದಾರೆ"

"ಎಲ್ರೀ...ಕಾಣಿಸ್ತಾನೇ ಇಲ್ಲಾ?"

"ಇದೇ ಸಾಲಿನಲ್ಲಿ ಮೂರು ಕುರ್ಚಿ ಬಿಟ್ಟು ಒಬ್ರು ಗಂಡಸ್ರು ಮಾಸ್ಕ್ ಹಾಕಿಕೊಂಡು ಕೂತಿದ್ದಾರಲ್ಲ, ಅವ್ರೇ ನಮ್ಮೆಜಮಾನರು"

'ಸ್ಸಾರೀರಿ, ಸೋಷಿಯಲ್ ಡಿಸ್ಟೆನ್ಸ್ ನಿಯಮ ಪಾಲಿಸದೆ, ಸೀದಾ ನಿಮ್ಮ ಬಳಿ ಬಂದು ಪಕ್ಕದಲ್ಲೇ ಕುಳಿತ್ಕೊಂಡ್ಬಿಟ್ಟೆ'

'ಪರ್ವಾಗಿಲ್ಲಾರಿ. ಈಚಿನ ದಿನಗಳಲ್ಲಿ ಯಾರೂ ಮಾತನಾಡಿಸ್ದೆ, ಮಾತನಾಡಿಸ್ದೆ ವಳ್ಳೆ ಹುಚ್ಚಿಯಂತಾಗಿ ಹೋಗಿದ್ದೆ. ನಿಮ್ಮನ್ನು ನೋಡಿ ಈಗ ಸಂತೋಷವಾಯ್ತು. ಜತೆಗೇ ಗಂಟಲ ಕೆರೆತ ಶುರುವಾಯ್ತು'

'ಹ್ಹಾಂ, ಗಂಟಲ್ಕೆರೆತವೆ? ನಾನು ಬರ್ತೀನ್ರಿ. ಇನ್ನೊಮ್ಮೆ ಸಿಕ್ತೀನ್ರಿ. ಯಾವುದಕ್ಕೂ ಹುಷಾರಾಗಿರೀಪ್ಪಾ"

'ಅಯ್ಯೊ, ಅಯ್ಯೊ ದಯವಿಟ್ಟು ಎದ್ದು ಹೋಗ್ಬೇಡೀಪ್ಪಾ. ಗಂಟಲ್ಕೆರೆತ ಎಂದಿದ್ದು ನಾನು ಆ ಅರ್ಥದಲ್ಲಲ್ಲ. ಪುಣ್ಯಾತ್ಗಿತ್ತಿ, ಹರ್ಡಲ್ಸ್ ರೇಸಿನಲ್ಲಿ ಓಡೊ ಹಾಗೆ ಕುರ್ಚಿ ಹಾರ್ಕೊಂಡು ದುರ್ದಾನ ತೆಗೆದುಕೊಂಡವರ ಹಾಗೆ ಅಂತರ್ಧಾನವಾಗ್ಬಿಟ್ಟಳಲ್ಲ'

**ಪ್ರಕರಣ – 3**

"ಎಲ್ಲಿ ನಮ್ಮ ಶ್ರೀಕಂಠು? ತಿಥಿಗೆ ಎಲ್ಲಾ ತಯಾರಿ ಮಾಡ್ಕೊಂಡಿದೀರಿ ತಾನೆ?

"ಹ್ಞಾಂ ಶಾಸ್ತ್ರಿಗಳೆ, ಎಲ್ಲಾ ಅಣಿಯಾಗಿದೆ. ಇಗೊ, ಅವರೇ ಸ್ನಾನ ಮುಗಿಸಿ ಬಂದ್ರು"

'ಹಣೆಗೆ ವಿಭೂತಿ ಧರಿಸಿ ಮಡಿಪಂಚೆ, ಟವಲು, ಮಾಸ್ಕ್ ಧರಿಸಿ ಬರಲು ಹೇಳು'

"ಅಯ್ಯೋ...ಮಾಸ್ಕ್ ಮಡಿ ಹಾಕೋದೆ ಮರೆತ್ಬಿಟ್ಟಿದ್ದೀನಿ, ಶಾಸ್ತ್ರಿಗಳೆ'

'ಚಿಂತಿಸಬೇಡ, ನನ್ಹತ್ರ ಎಕ್ಸ್‌ಟ್ರಾ ಮಾಸ್ಕಿದೆ ತಗೊ ಶ್ರೀಕಂಠೂಗೆ ಕೊಡು'

'ಶಾಸ್ತ್ರಿಗಳೆ ಇದು ಮಾಸ್ಕಲ್ಲ, ತಮ್ಮ ನಶ್ಯದ ಕರ್ಚೀಪು. ನಾನು ಆವಾಗ್ಲಿಂದ ಅಬ್ಸರ್ವ್ ಮಾಡ್ತಾನೇ ಇದ್ದೀನಿ. ಮಾಸ್ಕಿನಿಂದ ಮೂರು ಸಲ ತಾವು ಮೂಗು ಶೀಟಿಕೊಂಡಿರಿ'

ಅಯ್ಯೋ ಈ ದುಸ್ಥಿತಿ, ನನ್ನನ್ನೂ ವಕ್ಕರಿಸಿಕೊಂಡಿತೆ?

**ಪ್ರಕರಣ – 3 (ಎ)**

(ತಿಥಿಯ ಮುಂದುವರಿದ ಭಾಗ)

'ತಿಥಿ ಪ್ರಾರಂಭಿಸಲೇನಯ್ಯ ಶ್ರೀಕಂಠೂ'

'ಸರಿ ಶಾಸ್ತ್ರಿಗಳೆ'

'ಮೊದ್ಲು, ಎರ್ಡು ಸರ್ತಿ ಆಚಮನ ಮಾಡಿ, ಹತ್ತು ಗಾಯತ್ರೀ ಮಾಡು'

'ಆಯ್ತು'

'ಸ್ವಲ್ಪ ತಾಳು, ಇದೇನಯ್ಯ ಎರಡು ಪಂಚಪಾತ್ರೆ, ಉದ್ಧರಣೆ, ನೀರು ಇಟ್ಟಿದ್ದೀಯಾ?'

'ಒಂದು ಪಾತ್ರೇಲೀ ನೀರು, ಇನ್ನೊಂದರಲ್ಲಿ ಸ್ಯಾನಿಟೈಸರ್ ಇದೆ ಶಾಸ್ತ್ರಿಗಳೆ'

ಮುಂಡಾವೋಚ್ತು, ನಾನು ವಿಚಾರಿಸ್ದೇ ಹೋಗಿದ್ದರೆ ಎಂಥಹ ಅಚಾತುರ್ಯವಾಗ್ತಿತ್ತಲ್ಲಯ್ಯ'

ಓಂ ಅಚ್ಯುತಾಯ ನಮಃ ಅಂತ ಮಂತ್ರ ಹೇಳ್ಕೊಂಡು ನೀನು ಸ್ಯಾನಿಟೈಸರ್ ಕುಡಿದಿದ್ದರೆ ಏನ್ಗತಿ? ಇಷ್ಟು ಹೊತ್ತಿಗೆ ನೀನು 'ಗೋವಿಂದಾಯ ನಮಃ' ಆಗ್ತಿದ್ದೆ.

'ಎಚ್ಚರಿಸಿದ್ದಕ್ಕೆ ಥ್ಯಾಂಕ್ಸ್ ಶಾಸ್ತ್ರಿಗಳೆ'

'ಆಮೇಲೆ ಇನ್ನೊಂದ್ವಿಚಾರ ನೆನಪಿಟ್ಕೊ'

ಈ ತಿಥಿ ಮಂತ್ರದಲ್ಲಿ ಒಂದು ಹತ್ತು ಬಾರಿ 'ಪ್ರಾಚೀನಾಮಿತಿ' ಅಂತ ಮಂತ್ರ

ಬರುತ್ತೆ. ನಾನು ಆ ಹಾಳು ಚೀನಾ! ಅನ್ನೋ ಹೆಸರನ್ನು ಈ ಜನ್ಮದಲ್ಲಿ ಎತ್ತುವುದಿಲ್ಲ. ಅಂತ ಶಪಥ ಮಾಡಿದ್ದೇನೆ. ಇನ್ಮುಂದೆ ಪ್ರಾ....ಮಿಥಿ ಅಂತ ಮಂತ್ರವನ್ನು ನಾನು ಉಚ್ಚರಿಸಿದಾಗಲೆಲ್ಲಾ...ನೀನು ಜನಿವಾರವನ್ನು ಬದಲಿಸಿಕೊಳ್ತಾ ಹೋಗ್ಬೇಕು'

'ಅರ್ಥವಾಯ್ತು ಶಾಸ್ತ್ರಿಗಳೆ'

**ಪ್ರಕರಣ– 4**

"ಅಮ್ಮಾ, ನನ್ಗೆ ಆನ್‌ಲೈನ್ ಕ್ಲಾಸು ಶುರುವಾದಾಗ ಅಪ್ಪನಿಗೆ ಹಾಲಿಗೆ ಬರ್ಬೇಡಾ ಅಂತ್ಹೇಳು"

'ಯಾಕ್ಮಗು?'

"ಮೊನ್ನೆ ನಮ್ಮ ಲೇಡಿ ಟೀಚರ್ರು, ಸೈನ್ಸ್ ಫಿಕ್ಷನ್ನಿನಲ್ಲಿ ಬರ್ಮುಡಾ ಟ್ರಯಾಂಗಲ್ ಬಗ್ಗೆ ಸೊಗಸಾದ ವಿವರಣೆ ಕೊಡ್ತಾಯಿದ್ದರು. ಆಗ ಬರ್ಮುಡಾ ಹಾಕ್ಕೊಂಡು ಹಾಲಿಗೆ ಬಂದು ನನ್ನ ಪಕ್ಕದಲ್ಲೇ ನಿಂತ ಅಪ್ಪನನ್ನು ಕಂಡು ಅವರು ಇದ್ದಕ್ಕಿದ್ದಂತೆ ಸ್ಕ್ರೀನಿಂದ ಗಾಯೆಬ್ ಆಗಿಬಿಟ್ಟರು"

'ಹ್ಞಾಂ'

**ಪ್ರಕರಣ – 5**

"ಮೇಡಂ, ನಾವು ಸಿಟಿ ಕೋವಿಡ್ ಸೆಂಟರ್ರಿನವರು. ನಿಮ್ಮೆಜಮಾನ್ರು ಈಗ ಸಂಪೂರ್ಣ ಹುಷಾರಾಗಿದ್ದಾರೆ. ಹದಿನಾಲ್ಕು ದಿವ್ಸದ ಕ್ವಾರಂಟೈನೂ ಮುಗೀತು. ಅವ್ರನ್ನ ಈಗ ಹ್ಯಾಂಡ್ ಓವರ್ ಮಾಡೋಕ್ಕೆ ಬಂದಿದ್ದೀವಿ"

"ಎಲ್ಲಿ ಅವ್ರು ಕಾಣಿಸ್ತಾನೆ ಇಲ್ಲವಲ್ಲ?"

"ಮೇಡಂ, ಅವ್ರು ಜೀವಂತ ಮರಳಿ ಬಂದ ಖುಷಿಯಲ್ಲಿ ನೀವು ಮಾಸ್ಕನ್ನು ಕಣ್ಣಿಗೆ ಹಾಕ್ಕೊಂಡಿದೀರಿ'

'ಹೋ ಸ್ಸಾರೀಪ್ಪಾ'

**ಪ್ರಕರಣ – ಆರು**

'ಹಲೋ'

'ಯಾರು?'

'ಮೇಡಂ ತಾವು ನಮ್ಮ ಪುಟ್ಟಿಯ ಸಂಗೀತದ ಟೀಚರ್ ಅಲ್ವೆ?'

'ಹೌದು, ಏನಾಗ್ಬೇಕಿತ್ತು?'

'ಏನಿಲ್ಲ ಮೇಡಂ, ತಾವು ಆನ್‌ಲೈನ್ ಸಂಗೀತದ ಕ್ಲಾಸು ಮಾಡುವಾಗ ದಯವಿಟ್ಟು ನಿಮ್ಮ ಬೊಗಳುವ ನಾಯಿಯನ್ನು ಕೊಂಚ ದೂರ ಕಟ್ಟಿ ಹಾಕಿ. ಲಾಗಿನ್ ಆಗಿರೊ ನಮ್ಮ ಪುಟ್ಟಿಗೆ ಯಾಕೊ ವಾಯ್ಸೇ ಈಚೀಚೆಗೆ ಕನ್‌ಫ್ಯೂಸ್ ಆಗಿ ರಾಗದ ಧಾಟಿಯೇ ಬದ್ಲಾಗಿ ಹೋಗ್ತಿದೆ'

'ನಾನ್ಸೆನ್ಸ್'

**ಪ್ರಕರಣ – 7**

'ಇದೇನ್ರಿ ನಿಮ್ಮಜಮಾನ್ರು 'ಮಸೀದಿ' ಮುಂದೆ ಘಂಟೆಗಟ್ಟಲೆ ಒಬ್ರೇ ನಿಂತಿದ್ರಂತೆ. ಅವ್ರ ಆತಂಕದ ಮುಖ ಕಂಡು ನಮ್ಮೆಜಮಾನ್ರು ನಿಮ್ಮವರನ್ನು ಮನೆಯ ಹತ್ತಿರ ತಂದು ಬಿಟ್ಟರಂತೆ'

ಅಯ್ಯೋ ಅದಾ, ಇನ್ಮುಂದೆ ಮಾಸ್ಕ್ ಕಡ್ಡಾಯ ಅನ್ನೋ ಸುದ್ದಿ ಪೇಪರ್‌ನಲ್ಲಿ ಓದಿ ರಾಯರ ಮಠಕ್ಕೇಂತಾ ಹೊರಟ ಇವರು ಕನ್‌ಫ್ಯೂಸ್ ಆಗಿ ಮಾಸ್ಕ್ ಮುಂದೆ ಗರ ಬಡಿದವರಂತೆ ನಿಂತಿದ್ರಂತೆ. ಯಾಕೊ ಪರಿಸ್ಥಿತಿ ಹೀಗೇ ಮುಂದುವರೆದರೆ, ಮುಂದಿನ ಗತಿ ಏನು ಅಂತ ಭಯವಾಗುತ್ತೇರಿ.

**ಪ್ರಕರಣ – 8**

ತಾಯಿ ಇದು ಪ್ರಸಿದ್ಧ ಸಾಹಿತಿ ಸೀನಪ್ಪನವರ ಮನೆಯೆ?

'ಹೌದು' ಅಂದ್ಹಾಗೆ ತಾವ್ಯಾರು?'

'ನಾನು ಅಮರ (ಣ) ಕಲಾ ಸಂಘದ ಅಧ್ಯಕ್ಷ. ತಮ್ಮೆಜಮಾನರಿಗೆ ಈ ಸರ್ತಿಗೆ ರಾಜ್ಯೋತ್ಸವದ ಅವಾರ್ಡ್ ಬಂದಿದೆ ಎಂಬ ಸುದ್ದಿ ಈಗ ಹೊರಬಿದ್ದಿದೆ. ಅಭಿನಂದಿಸಲು ಅವ್ರು ಮನೇಲಿ ಇದ್ದಾರೆಯೆ?

'ಅಯ್ಯೋ...ಅವಾರ್ಡ್ ಹಾಗಿರಲಿ ಮೂರು ದಿವ್ಸದಿಂದ ಅವ್ರಿಗೆ ಕೆಮ್ಮು, ನೆಗಡಿ, ಜ್ವರ. ಆಸ್ಪತ್ರೆಯಿಂದ ಆಸ್ಪತ್ರೆಗೆ ವಾರ್ಡ್ ಹುಡುಕಿಕೊಂಡು ಬೆಳಗ್ಗೆ ಹೊರಟವರು ಇನ್ನೂ ಮನೆಗೇ ಬಂದಿಲ್ಲ! ■

---

# ಅಭ್ಯಂಜನ

**ಎನ್. ರಾಮನಾಥ್**

ಕೊತಕೊತ ಕುದಿಯುವ ಹಂಡೆಯ ನೀರಿಗೆ
ಹಿತಮಿತ ತೊಟ್ಟಿಯ ತಣ್ಣನೆ ನೀರು
ಜಿತಯುತ ಹರಳಿನ ತೈಲದ ಸವರು
ಜೊತೆಜೊತೆ ಸೀಗೆಯ ಪುಡಿ ಕವರು

ಬುಳುಬುಳು ಬುಳುಬುಳು ಇಳಿಯಿತು ನೀರು
ಎಳೆಎಳೆ ನೆತ್ತಿಯ ಮೇಲಿಂದ
ಸಳಸಳ ಇಳಿಯುವ ಮಿನಿ ಜಲಪಾತವು
ಜಳಕಕೆ ನೀಡುವುದಾನಂದ

ಬೆಚ್ಚನೆ ಸ್ಪರ್ಶದ ಅಮ್ಮನ ಕೈಯಲಿ
ಬೆಚ್ಚಗೆ ಕಾದಿಹ ಹರಳೆಣ್ಣೆ
ಹಚ್ಚಲು ನೆತ್ತಿಗೆ ಹಿತವೋ ಹಿತವು
ನಿಚ್ಚಣಿಗೆಯು ಅದು ಸ್ವಾಸ್ಥ್ಯಕ್ಕೆ


ಎಣ್ಣೆಯ ಜಿಡ್ಡನು ಹೋಗಿಸಿ ಮೈಗೆ
ಬೆಣ್ಣೆಯ ಮೃದು ಹೊಳಪೀವುದು ಸೀಗೆ
ಚಿಣ್ಣರೆ ಕೇಳಿರಿ ಶಾಂಪೂ ಬಿಸುಡುತ
ಎಣ್ಣೆಯ ಸ್ನಾನಕೆ ಜೈ ಎನ್ನಿ
ಎಣೆಯಿಲ್ಲದ ಹಿತ ಬೇಕೆನ್ನಿ.

# ಕಾಲಿಗ್ರಾಮ್ ತ್ಯಾಗ್ಲಿ

**● ಸಹನಾ ಪ್ರಸಾದ್**

ನೀವು ಅರಿಯದ ಯಾವುದೋ ಭಾಷೆಯಲ್ಲಿ ಏನೊ ಬರೆದಿರುತ್ತದೆ. ಅದರ ಅರ್ಥ ಕೂಡ ಗೊತ್ತಾದರೆ ಎಷ್ಟು ಚೆನ್ನ, ಅಲ್ಲವೇ? ಆ ಪದದಲ್ಲಿಯೇ ಅರ್ಥವೂ ಕೂಡಿದ್ದರೆ ಅಥವಾ ಒಂದು ಚಿತ್ರದಲ್ಲಿ ಪದವೂ ಕೂಡಿದ್ದರೆ ಮತ್ತೂ ಸೊಗಸಾಗಿರುತ್ತದೆ. ಉದಾಹರಣೆಗೆ ಟೆಲಿಫೋನ್ ಕನ್ನಡದಲ್ಲಿ ದೂರವಾಣಿ ಎನ್ನುತ್ತೇವೆ. ಆ ಪದದಲ್ಲೇ ದೂರವಾಣಿಯ ಚಿತ್ರವೂ ಅಡಕವಾಗಿದ್ದರೆ? ಭಾಷೆ ಗೊತ್ತಿಲ್ಲದವರಿಗೂ ಚಿತ್ರದ ಮೂಲಕ ಪದಗಳ ಅರ್ಥ ಗ್ರಹಿಸಬಹುದು. ಇಂತಹದೊಂದು ಕಲೆ ಇತ್ತೀಚಿಗೆ ಕನ್ನಡದಲ್ಲಿ ಕಾಣಸಿಗುತ್ತಿದೆ. ಕನ್ನಡದಲ್ಲಿ ಇದರ ಹುಟ್ಟು ಹಾಕಿದವರು ಶಾಶ್ವತ್ ಹೆಗಡೆ ತ್ಯಾಗ್ಲಿ.

"ವಾಪಸ್ಸು ಬರುತ್ತಾ ಏನು ತರಲೊ ಹುಡುಗ ನಿನಗೆ?" ಅತ್ತೆ ಪ್ರೀತಿಯಿಂದ ಕೇಳಿದಾಗ ಯಾವುದೋ ಆಟಿಕೆ, ಚಾಕ್ಲೇಟ್, ತಿಂಡಿ ತನ್ನಿ ಎನ್ನುತ್ತಾನೇನೊ ಅಂತ ಇದ್ದರೆ ಆ ಪೋರ ಹೇಳಿದ್ದು " ನಂಗೆ ಪೆನ್ಸಿಲ್, ಕಾಗದ ಬೇಕು!" ಬೆಳೆಯುವ ಕುಡಿ ಮೊಳಕೆಯಲ್ಲೇ ಎನ್ನುವ ಹಾಗೆ ಶಾಶ್ವತ್ ಹೆಗಡೆ ತ್ಯಾಗ್ಲಿ ಚಿಕ್ಕಂದಿನಿಂದಲೇ ಬಣ್ಣ, ಪೇಪರ್, ಪೆನ್ಸಿಲ್ಗಳನ್ನು ಬ್ಯಾಟು, ಬಾಲು, ಆಟಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದರು. ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕು ತ್ಯಾಗ್ಲಿ ಇವರ ಹುಟ್ಟೂರು. ಸುಬ್ರಾಯ ಹೆಗಡೆ ಹಾಗು ವಿದ್ಯಾ ಹೆಗಡೆ ದಂಪತಿಗಳು ಇವರ ತಾಯಿ ತಂದೆ. ತಂಗಿ ಅಮೃತಾ ಹೆಗಡೆ. ಪೀಯುವರೆಗೆ ಶಿರಸಿಯಲ್ಲಿ ನಂತರ ಧಾರವಾಡದ ಜೆ ಎಸ್ ಎಸ್ ಕಾಲೆಜಿನಲ್ಲಿ ಬೀ ಎಸ್ ಸೀ ಮುಗಿಸಿದ ನಂತರ ಬೆಂಗಳೂರಿನಲ್ಲಿ ಮಲ್ಟಿಮೀಡಿಯಾ ಕೋರ್ಸ್ ಮಾಡಿ ಗ್ರಾಫಿಕ್ ಡಿಸೈನರ್ ಆಗಿ ಕೆಲಸ ನಿರ್ವಹಿಸುತ್ತಿರುವ ಇವರಿಗೆ ಫೋಟೊಗ್ರಾಫ್, ಲೋಗೊ ಡಿಸೈನ್ ಇತ್ಯಾದಿಗಳಲ್ಲೂ ಪರಿಣಿತಿಯಿದೆ.








ಹತ್ತನೇ ತರಗತಿಯಲ್ಲಿ 90%ಕ್ಕೂ ಮೀರಿ ಅಂಕ ಗಳಿಸಿದ ಇವರಿಗೆ ಮನೆಯಲ್ಲಿ ತಂದೆ ಹೇಳಿದ್ದು "ಡಿಗ್ರೀ ಮುಗಿಸಿಕೊಂಡು ನಿನ್ನಿಷ್ಟ ಬಂದ ವೃತ್ತಿ ಆರಿಸಿಕೋ. ನಮ್ಮ ಬೆಂಬಲ ಇದ್ದೇ ಇರುತ್ತೆ" ಎಂದು. ಡಿಗ್ರೀ ಆದ ಮೇಲೆ ಗ್ರಾಫಿಕ್ ಡಿಸೈನಿಂಗ್ ಕೋರ್ಸ್ ಮುಗಿಸಿ ವೃತ್ತಿ ಜೀವನಕ್ಕೆ ಕಾಲಿಟ್ಟರು ಶಾಶ್ವತ್.

ಕ್ರೀಯೆಟಿವ್ ಆಗಿ ಏನಾದರೂ ಮಾಡಬೇಕೆಂದು ತುಡಿತವಿದ್ದ ಶಾಶ್ವತ್ ಅವರಿಗೆ ಸ್ನೇಹಿತನೊಬ್ಬನ ಮುಖಾಂತರ ಕಾಲಿಗ್ರಾಮ್ ಪರಿಚಯವಾಯಿತು. ನ್ಯೂಯಾರ್ಕ್‌ನ ಜೇನ್‌ಲೀ ಎಂಬ ಕಲಾವಿದನ ಕಾಲಿಗ್ರಾಮ್ಗಳು ಇವರನ್ನು ಆಕರ್ಷಿಸಿತು. ಇಂಗ್ಲೀಷಿನಲ್ಲಿ ಕಾಲಿಗ್ರಾಮ್ ರಚನೆ ಹೊಸತಲ್ಲ. ಕನ್ನಡದಲ್ಲಿ ಇದನ್ನು ರಚಿಸಬೇಕೆಂಬ ಆಸಕ್ತಿ ಮೂಡಿ ಮೊದಲಿಗೆ 4 ಕಾಲಿಗ್ರಾಮ್ಗಳನ್ನು ರಚಿಸಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡರು. ಬಹಳಷ್ಟು ಜನರು, ಕರ್ನಾಟಕದ ಶಿಕ್ಷಣ ಮಂತ್ರಿ ಎಸ್‌ಸುರೇಶ ಕುಮಾರ್ ಸೇರಿದಂತೆ ಇವನ್ನು ಮೆಚ್ಚಿ ಅದನ್ನು ಮರು ಹಂಚಿಕೊಂಡರು.

ಕಾಲಿಗ್ರಾಮ್ ಇತಿಹಾಸ ಬಹಳ ಹಳೆಯದು. 1918 ರಲ್ಲಿ ಮೊದಲ ಬಾರಿಗೆ ಫ್ರೆಂಚ್‌ಕವಿಯಾದ ಗುಯಿಲೋಮ್‌ತನ್ನ ಕವಿತೆಗಳನ್ನು ಚಿತ್ರಗಳ ರೂಪದಲ್ಲಿ ಬರೆಯುತ್ತಿದ್ದ ಹಾಗು ಕಾಲಾನುಕ್ರಮದಲ್ಲಿ ಹಲವಾರು ಮಾರ್ಪಾಡುಗಳನ್ನು ಪಡೆದುಕೊಂಡು ಪ್ರಸ್ತುತದ ರೂಪವನ್ನು ಪಡೆದುಕೊಂಡಿದೆ.

ರಚನೆಯಲ್ಲಿ ಪ್ರಮುಖವಾಗಿರುವುದು ಶಬ್ದಗಳಲ್ಲಿರುವ ಗ್ರಾಫಿಕ್ ಎಲಿಮೆಂಟ್‌ಗಳನ್ನು ಬಳಸಿಕೊಂಡು ಅದು ಏನನ್ನು ಸೂಚಿಸುತ್ತದೆ ಎಂದು ಗ್ರಹಿಸಿ, ಸ್ಪಷ್ಟ ಅಕ್ಷರ, ಚಿತ್ರದ ಮೂಲಕ ಬಿಂಬಿಸಬೇಕು. ಅಕ್ಷರವನ್ನೇ ವಿನ್ಯಾಸ ಮಾಡುವ ಕ್ಯಾಲಿಗ್ರಾಮ್ ಆರ್ಟಿಸ್ಟ್‌ಗಳ ಸೃಜನಶೀಲತೆಗೆ ಸವಾಲೇ ಸರಿ. ಎಲ್ಲಾ ಪದಗಳಿಗೂ ಕ್ಯಾಲಿಗ್ರಾಮ್ ಅನ್ನು ರಚಿಸಲು ಸಾಧ್ಯವಿಲ್ಲದಿರುವುದು ಇದೇ ಕಾರಣಕ್ಕಾಗಿ.







" ಆ ನಮ್ಮ ಆರ್ಟಿಸ್ಟ್ ಹುಡುಗ ಎಲ್ಲಿ? ಅದೇ, ಕಾಗದ, ಬಣ್ಣ ಕೊಟ್ಟರೆ ಹೊಸ ಲೋಕವನ್ನೇ ಸೃಷ್ಟಿ ಮಾಡಿಬಿಡ್ತಾನಲ್ಲ, ಶಾಶ್ವತ್? ಅವರ ಬಗ್ಗೆ ಕೇಳ್ತಿರೋದು!"

"ರಂಗಾಯಣದಲ್ಲಿ ರಂಗ ಸಜ್ಜಿಕೆ,, ಸೆಟ್ವರ್ಕ್, ಮ್ಯೂಸಿಕ್, ಆಕ್ಟಿಂಗ್ ಅಲ್ಲಿ ಇರ್ಬೇಕು ನೋಡಿ. ಹುಡುಗ ತುಂಬಾ ಆಕ್ಟಿವ್!"

ಈ ರೀತಿ ಮಾತುಗಳು ಇವರ ಬಗ್ಗೆ ಕೇಳಿಬರುತ್ತ ಇರುತ್ತದೆ. ಆರ್ಟಿಸ್ಟ್‌ಗಳು ಸಾಮಾನ್ಯವಾಗಿ ಅಂತರ್ಮುಖಿಗಳು ಎಂಬ ಅಭಿಪ್ರಾಯ ಎಲ್ಲರಿಗೆ ಇದೆ. ಆದರೆ ಇದಕ್ಕೆ ಅಪವಾದವಾಗಿ ರಂಗಭೂಮಿಯಲ್ಲದೆ ಫೊಟೋಗ್ರಾಫಿಯಲ್ಲಿ ಕೂಡ ಇವರ ಆಸಕ್ತಿ ಉಂಟು. ಜತೆಗೆ ಉತ್ತರ ಕನ್ನಡದದ ಪ್ರವಾಸಿ ತಾಣಗಳ ವೆಕ್ಟರ್‌ಚಿತ್ರಗಳನ್ನು ರೂಪಿಸಿರುವ ಮೂಲಕ ಸ್ಥಳೀಯ ಪ್ರವಾಸಿ ತಾಣಗಳ ವೈಭವವನ್ನು ಎಲ್ಲರಿಗೂ ತಲುಪಿಸುವುದು ಇವರ ಗುರಿ.

ಶಾಶ್ವತ್ ಅವರಿಗೆ ಅಪರಂಜಿ ಕಡೆಯಿಂದ ಶುಭಾಕಾಂಕ್ಷೆಗಳು. ಕನ್ನಡದಲ್ಲಿ ಹೊಸ ಪ್ರಯೋಗ ಮಾಡುತ್ತಿರುವ ಇವರು ನಮ್ಮ ನಾಡಿನ ಹೆಮ್ಮೆ.





● ದಂನಆ

- ✓ ಕೋವಿಡ್ ಅವಧಿಯಲ್ಲಿ ವಾರದ ದಿನಗಳನ್ನು ಇಂದು, ನಾಳೆ, ನಾಡಿದ್ದು, ಆಚೆ ನಾಡಿದ್ದು, ನಿನ್ನೆ, ಮೊನ್ನೆ, ಆಚೆ ಮೊನ್ನೆ ಎಂದು ಕರೆದರೆ ಸಾಲದೆ?
- ✓ ಅತಿಥಿ ರಿಸ್ಕೋ ಭವ?
- ✓ ಈಗ ಬಣ್ಣಗಳೂ ರಾಜಕೀಯಕ್ಕೊಳಗಾಗಿವೆ – ಕೇಸರಿ, ಹಸಿರು, ಕೆಂಪು, ಕಪ್ಪು, ನೀಲಿ ಎಲ್ಲವೂ..! ಸದ್ಯಕ್ಕೆ ಬಿಳಿ ಒಂದೇ ಉಳಿದಿದೆ ತಿಳಿಯಾಗಿ.
- ✓ ಖಾಲಿ ಕಾಗದಕ್ಕಿಂತ ಒಳ್ಳೇ ಕವಿತೆ ಇರಲು ಸಾಧ್ಯವೆ ಎಂದು ಉದ್ಗರಿಸಿದವನು ಎಷ್ಟು ಕೆಟ್ಟ ಪದ್ಯ ಓದಿರಬಹುದು!
- ✓ ಪ್ರೆಷರ್ ಈಸ್ ಸಂಥಿಂಗ್ ಯು ಫಿಲ್ ವೆನ್ ಯು ಡು ನಾಟ್ ನೊ ವಾಟ್ ಯು ಆರ್ ಡೂಯಿಂಗ್.
- ✓ ನಂಬಿಕೆ ಪಡೆದುಕೊಳ್ಳಬೇಕು, ನಿಷ್ಠೆ ತೋರಿಸಬೇಕು.
- ✓ ನಾನು ನನ್ನ ಧರ್ಮ ಬದಲಾಯಿಸಿದಾಗ ನನ್ನ ಪೂರ್ವಿಕರು ಬದಲಾಗುವುದಿಲ್ಲ.
- ✓ ಲರ್ನಿಂಗ್ ಅಬೌಟ್ ಬಿಲೀಫ್ ಈಸ್ ದಿ ಎಂಡ್ ಆಫ್ ಬಿಲೀಫ್.
- ✓ ನಟನ ಆ್ಯಕ್ಟಿಂಗ್‌ಗಿಂತ ಅವನು ಧರಿಸಿದ್ದ ಫ್ಯಾನ್ಸಿ ಡ್ರೆಸ್‌ಗೇ ಹೆಚ್ಚು ಮನ್ನಣೆ ಸಿಗುತ್ತದೆ.
- ✓ ದಿ ಪರ್‌ಪಸ್ ಆಫ್ ಲೈಫ್ ಈಸ್ ಟು ರಿಮೇನ್ ಹ್ಯಾಪಿ.
- ✓ ಬಹುತೇಕರು ಕೇಳಿಸಿಕೊಳ್ಳುವುದು ಅರ್ಥ ಮಾಡಿಕೊಳ್ಳಲು ಅಲ್ಲ, ಉತ್ತರಿಸಲು.
- ✓ ಟುಡೆ ಈಸ್ ದಿ ಫಸ್ಟ್ ಡೆ ಆಫ್ ಯುವರ್ ರೆಸ್ಟ್ ಆಫ್ ದಿ ಲೈಫ್.
- ✓ ಎಂಟು ತಾಸು ದುಡಿಯರಿ, ಎಂಟು ತಾಸು ಕೆಲಸ ಮಾಡಿ. ಎರಡೂ ಒಂದೇ ಆಗದಂತೆ ನೋಡಿಕೊಳ್ಳಿ.
- ✓ ದಂಗೆ – ದನಿ ಇಲ್ಲದವರ ಭಾಷೆ.
- ✓ ನಿಮಗೊಪ್ಪುವ ಪೋಷಾಕಿನ ಬಣ್ಣವೇ ಜಗತ್ತಿನ ಅತ್ಯಂತ ಶ್ರೇಷ್ಠ ಬಣ್ಣ.
- ✓ ಗ್ರೇಟ್‌ನೆಸ್ ಡಸ್ ನಾಟ್ ಮೀನ್ ಟೇಕಿಂಗ್ ಕ್ರೆಡಿಟ್.
- ✓ 'ಎಲ್ಲರೂ ನಿನ್ನನ್ನು ಪ್ರೀತಿಸುತ್ತಾರೆ ಆದರೆ ನನ್ನನ್ನೇಕೆ ದ್ವೇಷಿಸುತ್ತಾರೆ?' ಎಂದು ಸಾವು ಬದುಕನ್ನು ಕೇಳಿತು: ಅದಕ್ಕೆ ಬದುಕು ಕೊಟ್ಟ ಉತ್ತರ: 'ನಾನು ಒಂದು ಸುಂದರ ಸುಳ್ಳು ನೀನು ನೋವು ತುಂಬಿದ ಸತ್ಯ'.

■

# ಜಡೆಮುನಿ ಪ್ರಸಂಗವು

**● ಶಾಂತಾ ನಾಗಮಂಗಲ**

ಜಡೆಮುನಿ – ಈ ಹೆಸರನ್ನು ಎಷ್ಟು ಜನ ಕೇಳಿದ್ದಾರೋ ಗೊತ್ತಿಲ್ಲ. ಆದರೆ ನಾನಂತೂ ಅದರ ಬಗೆಗೆ ನಮ್ಮ ಮುತ್ತಜ್ಜಿಯಿಂದ ತುಂಬಾ ಕೇಳಿದ್ದೀನಿ. ನಮ್ಮ ಕೊಡಿಯಾಲದ ಸೋದರಮಾವನೂ ಜಡೆಮುನಿಯ ವರ್ಣರಂಜಿತ ಪ್ರಸಂಗಗಳನ್ನು ಹೇಳುತ್ತಿದ್ದರು. ಕೇಳೋದು ಮಾತ್ರವಲ್ಲ ಅದರ ವಿಳಾಸವೂ ನಮ್ಮ ಮುತ್ತಜ್ಜಿಗೆ ಗೊತ್ತಿತ್ತು. ನಮ್ಮ ನಾಗಮಂಗಲದಲ್ಲಿರುವ ಹೊಯ್ಸಳ ಶೈಲಿಯ ಸುಂದರ ಸೌಮ್ಯಕೇಶವ ದೇವಾಲಯದ ಏಳಂತಸ್ತಿನ ಗೋಪುರದ ಗೂಡುಗಳೇ ಜಡೆಮುನಿಯ ಮನೆ ಅಂತ ಅವರು ಹೇಳ್ತಾ ಇದ್ದರು. ಕಲಾರಾಸಿಕ್ಯ, ದೈವಭಕ್ತಿ ತುಂಬಾ ಇದ್ದಿರಬೇಕು ಆ ಜಡೆಮುನಿಗೆ. ಆ ಕಾಲದಲ್ಲಿ ನಮ್ಮ ಮುತ್ತಜ್ಜಿಯಂತೆ ನಮ್ಮೂರಿನಲ್ಲಿ ಎಲ್ಲರೂ ಜಡೆಮುನಿಯ ಇರುವಿಕೆಯನ್ನು ಒಪ್ಪಿದವರೇ ಆಗಿದ್ದರು. ಇದು ದೆವ್ವ ಭೂತ ಪಿಶಾಚಿಗಳ ಜಾತಿಗೇ ಸೇರಿದ್ದೋ ಏನೋ ಗೊತ್ತಿಲ್ಲ. ಯಾರಿಗಾದರೂ ಜಡೆಮುನಿ ಮೆಟ್ಟಿಕೊಂಡಿದ್ದು, ಮೆಟ್ಟಿಕೊಂಡವರಿಂದ ತಪ್ಪಲೆ ಅನ್ನ ತಿನ್ನಿಸಿದ್ದು, ಕಾಲನ್ನೇ ಸೌದೆಯಂತೆ ಒಲೆಗೆ ಒಟ್ಟಿ ಅಡುಗೆಮಾಡಿದ್ದು, ಬೇರೆ ತರಹ ಕಾಟಕೊಟ್ಟಿದ್ದು, ಅದನ್ನು ಓಡಿಸಲು ಬೇವಿನಸೊಪ್ಪಿನ ಹೊಗೆಹಾಕಿಸಿ, ಬರಲಿನಿಂದ ಹೊಡೆಸಿ ಗಿಡಸಿ ಮಾಡಿದಂತ ಪ್ರಸಂಗಗಳು ನಮ್ಮ ಮುತ್ತಜ್ಜಿಗೂ ಗೊತ್ತಿರಲಿಲ್ಲ. ಹಾಗಾಗಿ ಇದೊಂದು ಪಾಪದ ಭೂತಜಾತಿ ಇದ್ದಿರಬೇಕು.

ನಮ್ಮ ಮುತ್ತಜ್ಜಿ ಜಡೆಮುನಿ ಕಥೆ ಶುರುಮಾಡ್ತಾ ಇದ್ದಂತೆ ನಮ್ಮ ಪ್ರಶ್ನೆ ಬರ್ತಿತ್ತು – ಅದನ್ಯಾಕೆ ಜಡೆಮುನಿ ಅಂತ ಕರೀತಾರೆ? ಅಂತಾ. "ತನ್ನ ಆಕಾರದ ಎಷ್ಟೋ ಪಟ್ಟು ಉದ್ದದ, ದಪ್ಪ ಹೆಡೆಯಂತಹ ಜಡೆ ಅದಕ್ಕಿರುತ್ತದೆ. ಅದಕ್ಕೆ ಅದನ್ನು ಜಡೆಮುನಿ ಅಂತ ಕರೀತಾರೆ ಅನ್ನೋ ಉತ್ತರ ಸಿಗುತ್ತದೆ. ನಮ್ಮ ಸೋದರಮಾವನ ಪ್ರಸಂಗಗಳೂ ಈ ಉದ್ದದ ಜಡೆಯ ಲಕ್ಷಣವನ್ನು ಹೇಳುತ್ತಿದ್ದವು. ಆಹಾ ಎಂಥ ಅನ್ವರ್ಥನಾಮ. ಅದಕ್ಕೆ ಹೆಸರಿಟ್ಟವರ ವ್ಯಾಕರಣ ಜ್ಞಾನದ ಬಗ್ಗೆ ಭಲೇ ಎನಿಸಿತು.. ಜಡೆಮುನಿ ಯಾವಾಗಲೂ ಹೆಜ್ಜೆ ಹಾಕ್ಕೊಂಡು ಝುಲ್–ಝುಲ್ ಅಂತಾ ಸದ್ದುಗೈಯುತ್ತಾ ಓಡಾಡುತ್ತೆ. ಗಂಡಸರನ್ನೇ ಹುಡುಕಿ ಹುಡುಕಿ ಮೆಟ್ಟಿಕೊಳ್ಳುತ್ತೆ ಹಾಗಾಗಿ ಇದು ಹೆಣ್ದೆವ್ವದ ಜಾತಿಯದೆ... ಹೀಗೆ ವರ್ಣನೆ ಮುಂದುವರೀತಿತ್ತು. ವರ್ಣನೆ ಕೇಳಿದಾಗ ಅದು ತುಂಬಾ ರಸಿಕಜೀವವಿರಬೇಕು. ಇಲ್ಲದಿದ್ದರೆ ಗೆಜ್ಜೆ ಸದ್ದು, ನೀಳ ಜಡೆ ಶೃಂಗಾರ ರಸಕ್ಕೆ ಉದ್ದೀಪನ ವಿಭಾವಸಾಮಾಗ್ರಿ ಎಂಬ ಅಲಂಕಾರ ಶಾಸ್ತ್ರದ ವಿಷಯ ಅದಕ್ಕೆ ತಿಳಿದಿರಲು ಹೇಗೆ ಸಾಧ್ಯ. ಬಹುಶಃ "ಜಡೆಮೋಹಿನಿ" ಆಡುಭಾಷೆಯ ಲಾಘವದಲ್ಲಿ ಜಡೆಮುನಿ ಆಗಿರಬಹುದು ಇಂಥ ಜಡೆಮುನಿಯ ದರ್ಶನ ಭಾಗ್ಯವಿತ್ತು ನಖಶಿಖಾಂತ ಬೆವರು ಬಸಿಯುವಂತೆ ಮಾಡಿದ್ದಂತೂ ಸತ್ಯ.

ಈಗೊಂದು ಐವತ್ತು ವರ್ಷಗಳ ಹಿಂದಿನ ಮಾತು. ನಮ್ಮೂರಿನ "ವಾಣೀಭೂಷಣ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಕಲಿಯುತ್ತಿದ್ದ ಕಾಲ. ಈ ಪಾಠಶಾಲೆ ಇದ್ದದ್ದು ಈ ಜಡೆಮುನಿಯ ಮನೆಯ ಪಕ್ಕದಲ್ಲೇ ಅಂದರೆ ಸೌಮ್ಯಕೇಶವ ದೇವಾಲಯದ ಗೋಪುರದ ಪಕ್ಕದ ಪೌಳಿಗೋಡೆಗೆ ಅಂಟಿಕೊಂಡಂತೆ ಇದ್ದ ಒಂದು ಕೊಠಡಿಯಲ್ಲಿ. ಪಾಠ ಆರಂಭವಾಗ್ತಾ ಇದ್ದದ್ದು ಬೆಳಗಿನ ಝಾವದ ಐದು–ಐದೂವರೆ ಘಂಟೆಯ ಸುಮಾರಿಗೆ. ಬ್ರಾಹ್ಮೀ ಮುಹೂರ್ತವೇ ಅಮರ ಶಬ್ದಗಳನ್ನು ಉರುಹೊಡೆಯಲು

ಸೂಕ್ತವಾದ ಕಾಲ ಅಂತಾ ಅಷ್ಟು ಬೆಳಗ್ಗೆ ನಮ್ಮ ಸಂಸ್ಕೃತ ಮೇಷ್ಟ್ರು (ಅವರು ನಮ್ಮೂರಿನ ಅಂಚೆಕಛೇರಿಯ ಪೋಸ್ಟ್ ಮಾಸ್ಟರ್ ಕೂಡ) ನಮಗೆ ಪಾಠಮಾಡ್ತಾ ಇದ್ದರು. ಬೆಳಗ್ಗೆ ಏಳೋದೇ ನಮಗೆ ದೊಡ್ಡ ದಂಡನೆಯಾಗಿತ್ತು. ಆದರೆ ನಮ್ಮಜ್ಜಿ ಬಿಡ್ತಾ ಇರಲಿಲ್ಲ. ರಾತ್ರಿ ಜಡೆಮುನಿ ಕಥೆ ಹೇಳ್ತಾ ನಮ್ಮನ್ನ ನಿದ್ದೆಗೆ ಒಪ್ಪಿಸುತ್ತಿದ್ದ ಅವರೇ ನಸುಕಿನಲ್ಲಿ ನಮ್ಮನ್ನು ಎಬ್ಬಿಸೋರು ಕೂಡಾ. ಅವರ ಗಡಿಯಾರ ಎಂದರೆ ನಮ್ಮೂರಿನ ಮಸೀದಿಯಲ್ಲಿ ಕೂಗುತ್ತಿದ್ದ "ಅಲ್ಲಾ ಕೂಗು". ಮುಲ್ಲಾನ ದನಿ ಮಸೀದಿಯ ಧ್ವನಿವರ್ಧಕದಿಂದ ಹೊರಬೀಳ್ತಾ ಇದ್ದ ಹಾಗೆ ನಮ್ಮ ಮುತ್ತಜ್ಜಿ "ಅಲ್ಲಾ ಕೂಗ್ತು, ಅಮರ ಬಾಯ್ಪಾಠಕ್ಕೆ ಹೊತ್ತಾಗುತ್ತೆ ಏಳು – ಅಂತಾ ವರಾತ ಹಚ್ಚಿ ಸಕ್ಕರೆ ನಿದ್ದೆಯಲ್ಲಿ ಮುದುರಿ ಮುದುರಿ ಮಲಗುತ್ತಿದ್ದ ನನ್ನನ್ನು ಕಳುಹಿಸ್ತಾ ಇದ್ದರು. ಅಲ್ಲಾ ಕೂಗಿಗೂ ಅಮರಕ್ಕೂ ಸಂಬಂಧ ಕಲ್ಪಿಸುತ್ತಿದ್ದ ನಮ್ಮ ಮುತ್ತಜ್ಜಿಯ ರೀತಿ ನೆನೆದರೆ ಈಗ ನಗು ಬರುತ್ತೆ. ಅವರೇನಾದರೂ ಈಗ ಬದುಕಿದ್ದರೆ ಎಲ್ಲಾ ಸೆಕ್ಯುಲರ್ ಪಾರ್ಟಿಗಳು ಅವರನ್ನ ಹೈಜಾಕ್ ಮಾಡುತ್ತಿದ್ದರೇನೋ. ಮತೀಯ ಸಾಮರಸ್ಯದ ಸನಾತನ ನಿದರ್ಶನ ಅಂತಾ. ಸಕ್ಕರೆ ನಿದ್ದೆಗೆ ಭಂಗ ತಂದ ಸಿಟ್ಟಲ್ಲಿ "ಅಮರ ನಿನಗೆ ಜ್ವರ ಬರಾ" (ಅಮರ ನಿರ್ಝರ ದೇವಾ ಅನ್ನುವ ಲಯದಲ್ಲೇ) ಹೇಳ್ಕೊಳ್ತಾ ಹೊರಡ್ತಾ ಇದ್ದೆ.

ನಮ್ಮ ಮನೆಯಿಂದ ಪಾಠಶಾಲೆಗೆ ಕೇಶವ ದೇವಸ್ಥಾನದ ಪೌಳಿಗೋಡೆಯ ಬಗಲಲ್ಲೇ ಹಾದು ಹೋಗಬೇಕಿತ್ತು. ತುದಿಯಲ್ಲಿ ಬಲಕ್ಕೆ ತಿರುಗಿದರೆ, ದೇವಾಲಯದ ಮುಂಬಾಗಿಲನ್ನು ದಾಟಿದರೆ ನಮ್ಮ ಪಾಠಶಾಲೆ. ಇನ್ನು ಕತ್ತಲು ಕತ್ತಲು. ಯಾರೂ ಎದ್ದಿರುತ್ತಿರಲಿಲ್ಲ. ಅಲ್ಲೊಬ್ರು ಇಲ್ಲೊಬ್ರು ಬಾಗಿಲು ಗುಡಿಸುವ ಪರಕೆ ಸದ್ದು. ಹಕ್ಕಿಗಳ ಚಿಲಿಪಿಲಿಯೂ ಇನ್ನೂ ಆರಂಭವಾಗದ ನೀರವ. ಹಾಗೂ ಹೀಗೂ ದೇವಸ್ಥಾನದ ತಿರುವಿಗೆ ಬರೋವರೆಗು ಏನೂ ಅನ್ನಿಸ್ತಾ ಇರಲಿಲ್ಲ. ಗೋಪುರ, ಗೋಪುರದ ಏಳು ಅಂತಸ್ತಿನ ಗೂಡುಗಳು ಕಣ್ಣಿಗೆ ಬೀಳ್ತಿದ್ದ ಹಾಗೆ ಎದೆಯೊಳಗೆ ಢವಾ ಢವಾ ಎಂದಿದೆ. ರಾತ್ರಿ ಕೇಳಿದ ಜಡೆಮುನಿಯ ನನೆಪು. ಅಯ್ಯೋ ಅದು ಇಳಿದು ಬಂದ್ರೆ? ನನ್ನ ಮೆಟ್ಕೊಂಡ್ರೆ? ಎದೆಯೊಳಗೆ ಅವಲಕ್ಕಿ ಕುಟ್ಟುವಿಕೆ. ಮರುಕ್ಷಣವೇ. ಅದು ಗಂಡ್ಸನ್ನೇ ಹಿಡಕೊಳ್ಳದಲ್ವಾ? ನಾನೇನು ಗಂಡ್ಸಲ್ವಲ್ಲಾ. ನಾನು ಹುಡುಗಿ ಅಂತ ಅದಕ್ಕೆ ಗೊತ್ತಾಗತ್ತೆ. ನನ್ನ ಏನೂ ಮಾಡಲ್ಲ. ಅದು ಪಾಪದ್ದು... ಹೀಗೆಲ್ಲಾ ಜಡೆಮುನಿಯನ್ನ ದಯಾಮೂರ್ತಿಯಾಗಿಸಿ, ನನಗೆ ನಾನೆ ಸಮಜಾಯಿಷಿ ಕೊಟ್ಟಕೊಳ್ತಾ ಹೋಗ್ತಾ ಇದ್ದೇನಿ... ಸಣ್ಣಗೆ ಗೆಜ್ಜೆ ಸದ್ದು.... ಬೆಚ್ಚಿ ಬಿದ್ದೆ. ಎಲ್ಲಿಂದ ಬರ್ತಾ ಇದೆ ಈ ಸದ್ದು. ನನ್ನ ಹಿಂದಿನಿಂದಲೇ ಅದು ಇಳಿದು ಬಂದೇ ಬಿಡ್ತಾ. ಓ ಏನು ಗತಿಯಪ್ಪಾ. ಅಯ್ಯೋ ಇದಕ್ಕೆ ನಾನು ಹುಡುಗಿ ಅಂತಾ ಗೊತ್ತಾಗಲಿಲ್ಲವೇನೋ.. ಪಾಪ ಕತ್ತಲೆ. ಗೊತ್ತಾದ್ರೆ ಹೊರಟು ಹೋಗುತ್ತೇನೋ.. ಹೀಗೆ ಏನೇನೋ ಯೋಚನೆಗಳು. ಹೆದರಿಕೆ. ಬೆವರು. ನಡುಕ ಎಲ್ಲಾ ಏಕಕಾಲದಲ್ಲಿ. ಇಷ್ಟೆಲ್ಲದರ ನಡುವೆಯೂ ಒಂದು ಕುತೂಹಲ ಮೋಟು ಜಡೆಯ ನನಗೆ ಜಡೆಮುನಿಯ ಜಡೆಯ ಉದ್ದ ಎಷ್ಟು ಅಂತಾ ನೋಡಕ್ಕೆ ಕುತೂಹಲವನ್ನು ಮೆಟ್ಟಿ ನಿಂತ ಭೀತಿ ಹಿಂದೆ ತಿರುಗಲು ಬಿಡಲಿಲ್ಲ. ಗೆಜ್ಜೆ ಸದ್ದು ಹತ್ತಿರ ಆಗ್ತಾ ಇದೆ. ಏನು ಮಾಡೋದು? ಓಡಲಾ? ಕಾಲೇ ಏಳ್ತಾ ಇಲ್ಲ. ಏನೂ ಮಾಡಲೂ ತೋಚದೆ ದೇವಸ್ಥಾನದ ಕಲ್ಲಿನ ಗೋಡೆಗೆ ಒತ್ತಿಕೊಂಡು ಸದ್ದು ಮಾಡದೆ ಕಣ್ಣುಮುಚ್ಚಿ ನಿಂತೆ. ಹೇಗಾದ್ರೂ ಅದು ನನ್ನನ್ನು ಗಮನಿಸದೆ ಹೊರಟು ಹೋಗಲಿ ಅಂತಾ. ಹೋಗೋದಿರಲಿ ಆ ಗೆಜ್ಜೆ ಸದ್ದು ನನ್ನ ಎದುರಿಗೇ ಬಂದು ನಿಂತೇ ಬಿಡ್ತು.

ಕೆಲವು ಕ್ಷಣ ಮೌನ. ಬಳಿಕ "ಇಷ್ಟು ಕತ್ಲಾಗೆ ಎತ್ಲಾಗೆ ಹೊಂಟ್ರವ್ವಾ. ಯಾರವ್ವಾ, ಜೋಸ್ರ ಮನೆ ಪದ್ದಮ್ಮನೋರಾ.. ಎಂಬ ಪ್ರಶ್ನೆ. ಅರೆ! ಇದೇನು.. ಇದರ ದನಿ ನಮ್ಮನೆ ಮುಸರೆ ತಿಕ್ಕೋ ಚಿಕ್ಕಮ್ಮಂದು ಇದ್ದಾಗೆ ಇದೆಯಲ್ಲಾ. ಇವಳ್ಯಾವಾಗ ಜಡೆಮುನಿ ಆದಳು. ಅಲ್ಲಾ, ಸತ್ತೋರೆ ದೆವ್ವ ಭೂತ, ಪಿಶಾಚಿಗಳಾಗೋದು ಅಂತ ಮುತ್ತಜ್ಜಿ ಹೇಳಿದ್ರು. ಹಾಗಾದ್ರೆ ಚಿಕ್ಕಮ್ಮ ಸತ್ತೋದ್ಲಾ? ಛೇ, ನೆನ್ನೆ ಸಂಜೇನೂ ಬಂದಿದ್ಲು. ರಾತ್ರಿ ಸತ್ತಿದ್ರೂ ಇಷ್ಟು ಬೇಗ ಜಡೆಮುನಿ ಆಗೋಗ್ತಾರಾ? ಏನೇನೋ ಅಸಂಬದ್ಧ ವಿಚಾರಗಳು. ಮತ್ತದೇ – ಯಾಕ್ರವ್ವಾ ಹೆದ್ರುಕೊಂಡ್ರಾ? ನಾನು ಕಣವ್ವಾ ಮುಸ್ರೆ ಚಿಕ್ಕಮ್ಮ. ವೆಂಕ್ಟಾಚಲ ಸೆಟ್ರು ಮನೇನಾಗ ಏನೋ ಹಬ್ಬ, ಹೊತ್ತಾರೆ ಬಿರ್ರನೆ ಬಂದು ಬಾಕ್ಲು ತೊಳಿ ಅಂದಿದ್ರು. ಹೊಂಟಿವ್ನಿ ಅಲ್ಲಿಗೆ. ನೀವೂ ಬನ್ನಿ ಮೂಲೆ ತಾವ ಬಿಟ್ಟೋಯ್ತೀನಿ" ಅಂದಾಗ ಹೋದ ಉಸಿರು ಬಂತಾದ್ರು, ಜಡೆಮುನಿ ಭೇಟಿಯ ಅವಕಾಶ ತಪ್ಪಿ ಹೋಯ್ತಲ್ಲಾ ಅನ್ನೋ ನಿರಾಸೆ ಹಾಗೆ ಉಳಿದು ಬಿಟ್ಟಿತು.

■

---

## ಹಲ್ಲಿ

**ಎನ್. ರಾಮನಾಥ್**

ಸ್ಲಿಪ್ಪಲಿ ನಿಂತಿಹ ಫೀಲ್ಡರಿನಂತೆ
ತೆಪ್ಪನೆ ಒಂದೆಡೆ ನಿಂತಿರುವೆ
ಗಪ್ಪನೆ ಕ್ಯಾಚನು ಅವ ಹಿಡಿವಂತೆಯೆ
ಹುಪ್ಪಟೆ ಹುಳಗಳ ಹಿಡಿಯುವೆನು

ಸ್ಪೈಡರ್‌ಮ್ಯಾನಿನ ಹಾಗೆಯೆ ಗೋಡೆಯ
ಸ್ಪೀಡಾಗೇರುವೆ ಜಾರದೆಯೆ
ಮೈಕ್ ಜಾಕ್ಸನ್ನಿನ ಮೂನ್‌ವಾಕ್‌ನಂತೆಯೆ
ಹೈಕ್ ಮಾಡುವೆ ಸ್ಟೆಪ್ ಎತ್ತದೆಯೆ

ಗೋಂದಿನ ಅಂಟಿನ ನಾಲಿಗೆ ಚಾಚುತ
ಸಂದಿಯಲೂ ಕ್ರಿಮಿಗಳ ಹಿಡಿವೆ
ಹೊಡೆಯಲು ಬಂದರೆ ಬಾಲವ ಬೀಳಿಸಿ
ಓಡಿ ಸುರಕ್ಷಿತ ಎಡೆ ಹಿಡಿವೆ

ವಿಷಯವ ತಿಳಿಯದ ಜನರೆಂಬುದು ಸಟೆ
ವಿಷವಿಲ್ಲವು ಈ ದೇಹದಲಿ
ಡೈನೋಸಾರ್‌ಗಳ ಜಾತಿಯು ನನ್ನದು
ಗೌರವವಿರಲಿ ನನ್ನಲ್ಲಿ

# ಹೆಸರಿನಲ್ಲೇನಿದೆ ?

**● ಓಂಪ್ರಕಾಶ್**

ಹೆಸರಿನಲ್ಲೇನಿದೆ? ಎಂದು ಕೇಳುವ ಸಜ್ಜನರಿಗೆ ಅನುಭವ ಸಾಲದು. ನಮ್ಮ ಗುರುಹಿರಿಯರು ಬಹಳ ಯೋಚನೆ ಮಾಡಿ ನಮಗಿಡುವ ಹೆಸರು ನಮ್ಮ ಜೀವನದುದ್ದಕ್ಕೂ ಆಧಾರ. ನಮ್ಮ ದೇಶದ ವಿವಿಧ ಹೆಸರುಗಳ ಬಗ್ಗೆ ಗಮನ ಹರಿಸಿದರೆ ನಾಮಧೇಯಕ್ಕೂ ಹಾಸ್ಯಪ್ರಜ್ಞೆಗೂ ಇರುವ ನಿಕಟ ಸಂಪರ್ಕವನ್ನ ಕಾಣಬಹುದು. ನನ್ನ ಹೆಸರನ್ನೇ ನೋಡಿ. ಮುಂಚಿನಿಂದಲೂ ಇದು ಓಂಪ್ರಕಾಶ್ ಅಂತ ಇನಿಷಿಯಲ್ಸ್ ಇಲ್ಲದೆಯೇ ಇದ್ದ ಒಂಟಿ ಹೆಸರು. ಇದು ಹೇಗಾಯಿತಪ್ಪಾ ಎಂದರೆ ಅದಕ್ಕೊಂದು ಉಪಕಥೆ ಉಂಟು. ನಾನು ಮಿಡ್ಲ್ ಸ್ಕೂಲಿಗೆ ಸೇರುವಾಗ ಎಲ್ಲ ತಂದೆಯರಂತೆ ನಮ್ಮ ತಂದೆ ಸ್ಕೂಲಿಗೆ ಬಂದಿರಲಿಲ್ಲ. ಅವರು ಅವರದ್ದೇ ಆದ ಸಾಮ್ರಾಜ್ಯದಲ್ಲಿದ್ದುದರಿಂದ ನಾನು ನಮ್ಮ ಮನೆಯ ಆಳು ಮುನಿಸ್ವಾಮಿಯೊಂದಿಗೆ ಸ್ಕೂಲು ಸೇರಲು ಹೋಗಿದ್ದೆ. ಅಲ್ಲಿನ ಹೆಡ್ ಮಿಸ್ಟ್ರೆಸ್ " ನಿನ್ನ ಹೆಸರೇನು ಮರಿ " ಅಂತ ಕೇಳಿದ್ದಕ್ಕೆ ನಾನು ಓಂಪ್ರಕಾಶ್ ಅಂತ ಉತ್ತರಿಸಿದ್ದೆ. "ಇನಿಷಿಯಲ್ಸ್ ಇಲ್ಲವೇನೋ" ಅಂತ ಅವರು ಕೇಳಿದ್ದಕ್ಕೆ ನಾನು ಆತ್ಮವಿಶ್ವಾಸದಿಂದ "ಇಲ್ಲ ಮೇಡಂ, ನಮ್ಮನೇಲಿ ಯಾರಿಗೂ ಇನಿಷಿಯಲ್ಸ್ ಇಲ್ಲವೇ ಇಲ್ಲ " ಅಂತ ಉತ್ತರಿಸಿದ್ದೆ. ಇದಕ್ಕೆ ಕಾರಣವೆಂದರೆ ನನಗೆ "ಇನಿಷಿಯಲ್ಸ್" ಎಂಬ ಪದದ ಅರ್ಥವೇ ತಿಳಿದಿರಲಿಲ್ಲ. ಅಂದಿನಿಂದ ಇಂದಿನವರೆಗೂ ಇನಿಷಿಯಲ್ಸ್ ಇಲ್ಲದ ಈ ಒಂಟಿಬಡಕ ಹೆಸರಿನಿಂದ ನಾನು ಪಟ್ಟ ಪಡುತ್ತಿರುವ ಹಾಗೂ ಪಡಲಿರುವ ಪಾಡು ಹೇಳತೀರದು.

ಮೊದಲಿಗೆ ನನ್ನ ಅಮೆರಿಕಾ ಯಾತ್ರೆ. ಅಮೆರಿಕಾಗೆ ಹೋಗಲು ವೀಸಾ ಬೇಕಲ್ಲ. ವೀಸಾ ಅಧಿಕಾರಿಗಳು ನನ್ನ ಒಂಟಿ ಹೆಸರನ್ನು ನೋಡಿ ಚಕಿತರಾದರು. ಇನಿಷಿಯಲ್ಸ್ ಇಲ್ಲವೆ ? ಅಂತ ಕೇಳಿದರು. ಇಲ್ಲ ಎಂದೆ. ವೀಸಾ ಏನೋ ಸಿಕ್ಕಿತು. ಆದರೆ ನನ್ನ ಹೆಸರಿನ ಹಿಂದೆ ಎಫ್.ಎನ್.ಯು. ಅಂತ ನಮೂದಿಸಿದ್ದರು. ಇದೇನು ಮೂರು ಇನಿಷಿಯಲ್ಸ್ ಅಂತ ಗಾಬರಿಯಾಯಿತು. ಅದು ಫಸ್ಟ್ ನೇಮ್ ಅನ್ನೋನ್ ಅಂತ ಸೂಚಿಸುತ್ತದಂತೆ!!

ಅಮೆರಿಕೆಯಲ್ಲಿ ನಮ್ಮ ಹೆಸರುಗಳನ್ನು ಉಚ್ಚರಿಸಲು ಬಹು ಕಷ್ಟಪಡುತ್ತಾರೆ. ಓಂ ಎನ್ನುವುದಕ್ಕೆ ಅವರು ಆಮ್ ಎಂದು ಕರೆದಾಗ ನನಗೆ ಕೋಪ ಬರುತ್ತಿತ್ತು. ಒಮ್ಮೆ ನಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲಿ ನನ್ನ ರೋಗಿಯೊಬ್ಬ ನನ್ನನ್ನು ಹುಡುಕಿಕೊಂಡು ಬಂದಿದ್ದನಂತೆ. ರಿಸೆಪ್ಷನ್ನಿನಲ್ಲಿ ನನಗೆ ಇಂಡಿಯನ್ ಡಾಕ್ಟರ್ ಬೇಕು ಅಂತ ಕೇಳಿದನಂತೆ. ಆಕೆ ಈ ಆಸ್ಪತ್ರೆಯಲ್ಲಿ ಹನ್ನೆರಡು ಜನ ಇಂಡಿಯನ್ ಡಾಕ್ಟರುಗಳಿದ್ದಾರೆ. ನಿನಗೆ ಬೇಕಾದ ಡಾಕ್ಟರಿನ ಹೆಸರೇನು ಅಂತ ಕೇಳಿದ್ದಕ್ಕೆ , ಆತ, ಹೆಸರು ಸರಿಯಾಗಿ ನೆನಪಿಲ್ಲ, ಆದರೆ ಅವರ ಹೆಸರು ಓಮೈಗಾಷ್ ಅಂತ ಕೇಳಿಸುತ್ತೆ ಅಂದನಂತೆ !

ಮೂರ್ತಿ ಎಂಬುದು ಸರ್ವೇ ಸಾಧಾರಣವಾದ ಹೆಸರು. ಅಮೆರಿಕನ್ನರ ಬಾಯಲ್ಲಿ ಇದು "ಮರ್ತಿ". ಇದಕ್ಕೆಲ್ಲಾ ಏನೂ ಮಾಡುವಂತಿಲ್ಲ. ನಾವೇ ಹೊಂದಿಕೊಂಡು ಹೋಗಬೇಕು. ಡಾ.ಪಾಂಡೆ ಅಂತ ಒಬ್ಬ ನಂ ಆಸ್ಪತ್ರೆ ಸೇರಿದ. ಇತರರು ಅವನಿಗೆ ಪ್ಯಾನ್‌ಡೀ ಅಂತ ನಾಮಕರಣ ಮಾಡಿದರು. ಇದೇ ರೀತಿ ಸಂಪತ್ ಸ್ಯಾಮ್ ಆಗುತ್ತೆ. ಬೆನಕಪ್ಪ, ಬೆನ್ ಆಗುತ್ತಾನೆ. ಪಾಪ ಸೀತಾರಾಮ, ಸೀತಾ ಅಂತ ಸ್ತ್ರೀಲಿಂಗಿಯಾಗಬೇಕು. ಕಶ್ಯಪ್ ಎಂಬ ಹೆಸರು ಅಲ್ಲಿನವರಿಗೆ ಖುಷಿ ತರುತ್ತದೆ. ಏಕೆಂದರೆ ಅವನು ಕ್ಯಾಷ್ ಆಗುತ್ತಾನೆ. ಒಂದು ಬಾರಿ ನಮ್ಮ ಆಸ್ಪತ್ರೆಗೆ ಶಿವಜ್ಞಾನ ಸಂಬಂಧಂ ಅನ್ನುವ ಒಬ್ಬ ಡಾಕ್ಟರ್ ಸೇರುವ ಸುದ್ದಿ

ಬಂತು. ಎಲ್ಲರಿಗೂ ಭಯ. ನನ್ನ ಹತ್ತಿರ ಬಂದು ಇವನನ್ನ ಹೇಗೆ ಕರೆಯುವುದು ಅಂತ ಸಲಹೆ ಕೇಳಿದರು. ನಾನು ಸುಮ್ಮನಿರಲಾರದೆ, "ನೋಡಿ, ಇವನು ತಮಿಳು ನಾಡಿನವನು. ಹೆಸರಿನ ಕೊನೆಯ ಮೂರು ಅಕ್ಷರಗಳನ್ನು ಬಳಸಿ ಆಪ್ತನಾಮ ಮಾಡಬಹುದು " ಎಂದೆ. ಆತ ಬಂದಮೇಲೆ ಎಲ್ಲರೂ ಹಲೋ ಡಾ. ಹ್ಯಾಮ್ ವೆಲ್‌ಕಮ್ ಅಂತ ಆತ್ಮೀಯವಾಗಿ ಕರೆದರು. ಪಾಪ ಆತ ತಬ್ಬಿಬ್ಬಾದ. ಹೇಗೋ ಅವನಿಗೆ ನಾನೇ ಇದಕ್ಕೆ ಕಾರಣಪುರುಷ ಎಂಬುದು ತಿಳಿದುಹೋಯಿತು. ನನ್ನ ಹತ್ತಿರ ಬಂದು "ನನ್ನ ಮೊದಲ ಹೆಸರು ತಿರುಮಲೆ ಕೋದಂಡ" ಅದು ಅವರಿಗೆ ಗೊತ್ತಾಗಲಿಲ್ಲವಲ್ಲ ಅಂತ ಸಂತಸಪಟ್ಟ!

ಸ್ತ್ರೀಯರ ಹೆಸರುಗಳೂ ಸಹಾ ಇದೇ ಧರ್ಮಕ್ಕೆ ಒಳಪಡುತ್ತವೆ. ಲಕ್ಷಣವಾದ ಅನ್ನಪೂರ್ಣೆ ಅಲ್ಲಿ ಆ್ಯನ್ ಅಗುತ್ತಾಳೆ. ಶೈಲಜ ಶೈ ಎಂಬ ಹೃಸ್ವ ತಾಳುತ್ತದೆ. ಜಾನಕಿಯಂತೂ ಜೀನ್ ಅಥವಾ ಜೇನ್ ಆಗಿ ಮಾರ್ಪಡುತ್ತಾಳೆ. ನನ್ನ ಮಗಳು "ಶುಭಾ" ಅಲ್ಲಿನವರ ಬಾಯಲ್ಲಿ " ಶೊಭ " ಆಗಿ ಬಿಟ್ಟಳು. ಏನು ಮಾಡೋಣ. ಕೋಮಲವಾದ ಕೋಮಲಮ್ಮ ಕೋಮಿಯಾದರೆ ಸಹಿಸೀಯಾಳೇ. ಮೇಲೆ ಹೇಳಿದ ಪಾಂಡೆಯಂತೂ ತುಂಬ ಕೋಪಿಷ್ಟ. " ಈ ಜನ ಏಕೆ ಈ ರೀತಿ ಅಪಭ್ರಂಶ ಮಾಡ್ತಾರೆ ?" ಅಂತ ಕೇಳಿದ. ನಾನು ಅವನಿಗೆ ಸೇಡು ತೀರಿಸಿಕೊಳ್ಳುವ ಉಪಾಯ ಹೇಳಿಕೊಟ್ಟೆ. ಅಲ್ಲಿನ ಹಿರಿಯ ವೈದ್ಯರು ಐರಿಷ್ ಮೂಲದವರು. ಅವರ ಹೆಸರು " ಒಕಾನರ್ " ಅಂತ. ನಾಳೆ ನೀನು ಅವರನ್ನು ನೋಡಿದಾಗ ಓಕನೂರ್ ಅಂತ ಕರಿ. ನೋಡೋಣ ಏನಾಗುತ್ತೋ ಅಂತ ಹೇಳಿದೆ. ಮಾರನೆಯ ಬೆಳಗ್ಗೆ ಅವಘಢ ಆಗಿಯೇ ಹೋಯಿತು. ಒಕಾನರ್ ನನ್ನ ಬಳಿ ಬಂದು ಇದಕ್ಕೇನು ಪರಿಹಾರ ಅಂತ ಕೇಳಿದ. ಅದಕ್ಕೆ ನಾನು " ಈ ಪಾಂಡೆ ಹುಟ್ಟಿದ ಊರು ಚಿಕ್ಕನೂರು. ಅವನು ಪಾಪ ಹೋಂ ಸಿಕ್ ಆದಾಗಲೆಲ್ಲಾ ಇದೇ ಹೇಳಿ ಅಭ್ಯಾಸ ಅಂತ ಸಮಜಾಯಿಷಿ ನೀಡಿದೆ. ಸರಿ, ಇಬ್ಬರೂ ಸೇರಿ ಒಬ್ಬರನ್ನೊಬ್ಬರು ಡಾ. ಓ ಮತ್ತು ಡಾ ಪಿ ಅಂತ ಕರೆಯಲು ಒಪ್ಪಂದ ಮಾಡಿಕೊಂಡರಂತೆ.

ನನ್ನ ಹೆಸರಿನಲ್ಲಿ ಮೊದಲ ನಾಮ ಇಲ್ಲದ್ದು ನನಗೆ ಬಹುವಾಗಿ ತೊಂದರೆ ಆಗುತ್ತಿತ್ತು. ಒಂದು ದಿನ ನನಗೊಂದು ಫೋನ್ ಕಾಲ್. ಸೋಷಿಯಲ್ ಸೆಕ್ಯೂರಿಟಿ ಕಾರ್ಡ್ ಕೊಡಲು ಒಬ್ಬ ಮಹಿಳೆ ಆ ಆಫೀಸಿನಿಂದ ಮಾಡಿದ್ದ ಕಾಲ್ ಅದು. ಅವಳು ನನ್ನನ್ನು ಆಮ್‌ಪ್ರಾಕಶ್ ಅಂತ ಕರೆದು ನಿಮ್ಮ ಫಸ್ಟ್ ನೇಮ್ ಏನು ಅಂತ ಕೇಳಿದಳು. ಸತ್ಯಂ ಬ್ರೂಯಾತ್ ಎಂಬ ಸುಭಾಷಿತದಲ್ಲಿ ನಂಬಿದ್ದ ನಾನು "ನನಗೆ ಮೊದಲ ಹೆಸರು ಇಲ್ಲ. ಕೇವಲ ಒಂಟಿ ನಾಮ" ಅಂತ ಹೇಳಿದೆ. ಅವಳು ಬಿಡಬೇಕಲ್ಲಾ. ಗೋಗರೆಯುವ ದನಿಯಲ್ಲಿ" ನನಗೆ ಬಹಳ ಕೆಲಸ ಇದೆ. ದಯವಿಟ್ಟು ಮೊದಲ ಹೆಸರು ಹೇಳಿ" ಅಂತ ಅಂಗಲಾಚಿದಳು. ನನಗೂ ಮರುಕವುಂಟಾಗಿ "ಜಾನ್" ಅಂದೆ.

ಮೂರುದಿನಗಳು ಕಳೆದವು ಆ ಸಂಜೆ ಮನೆಗೆ ಬಂದಾಗ ನಿಶ್ಯಬ್ಧ.! ಮಡದಿ ಎಲ್ಲೋ ಹೋಗಿರಬಹುದು ಎಂದುಕೊಂಡೆ. ಇಲ್ಲ ಹೋಗಿರಲಿಲ್ಲ. ಟಿ.ವಿ.ಮುಂದೆ ಕುಳಿತಿದ್ದಳು. ಮುಖಾರವಿಂದದಲ್ಲಿ ರೌದ್ರಭಾವ. ನಾನು ಗಾಬರಿಯಿಂದ ಏನಾಯ್ತಮ್ಮ. ಎಂದು ಕೇಳಿದೆ. ಆಗಬಾರದ್ದೆಲ್ಲಾ ಆಗಿಹೋದ ಮೇಲೆ ಈಗ ಕೇಳ್ತೀರಾ ಎಂದು ಏರಿದ ದನಿಯಲ್ಲಿ ಹೇಳಿದಳು. ಅವಳ ಕೈಯ್ಯಲ್ಲಿ ಒಂದು ಕವರ್. ಆ ಕವರಿನಿಂದ ಒಂದು ಕಾರ್ಡ್ ತೆಗೆದು ನನ್ನ ಕಡೆ ಹಾರಿಬರುವಂತೆ ಮಾಡಿದಳು. ಆ ಕಾರ್ಡ್ ನಲ್ಲಿ ಜಾನ್ ಓಂಪ್ರಕಾಶ್ ಎಂಬ ಹೆಸರು ನನ್ನನ್ನು ಅಣಕಿಸುತ್ತಿತ್ತು. ನಮ್ಮ ಬಾಳನೌಕೆ ಯನ್ನ ಅನಗತ್ಯವಾಗಿ ಡೋಲಾಯಮಾನವಾಗುವಂತೆ ಮಾಡಿದ್ದಕ್ಕಾಗಿ ನಾನು ಕ್ಷಮೆ ಕೇಳಬೇಕಾಯಿತು. ಶುಭ ಪಾಪ ಏನೂ ತಿಳಿಯದೆ ಮೂಕವಿಸ್ಮಿತೆಯಾಗಿ ನಿಂತಿದ್ದಳು. ■

# ಕ್ರಿಕೆಟ್ ಅಂಗಳದಲ್ಲಿ ಕಚಕುಳಿ

**●ಎಚ್. ಶಾಂತರಾಜ ಐತಾಳ್**

ಕ್ರಿಕೆಟ್ ನಲ್ಲಿ ಟೆಸ್ಟ್ ಮ್ಯಾಚ್ ಮಾತ್ರವೇ ನಡೆಯುತ್ತಿದ್ದ ಕಾಲ ಅದು. ಒಮ್ಮೆ ಇಂಗ್ಲೆಂಡ್ ತಂಡ ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದಾಗ (1962–63) ಇಂಗ್ಲೆಂಡಿನ ಡೇವಿಡ್ ಶೆಪರ್ಡ್ ಅತ್ಯಧಿಕ ಕ್ಯಾಚ್ ಬಿಟ್ಟ ಕ್ರಿಕೆಟಿಗ ಎಂದು ಕುಖ್ಯಾತಿಗೊಳಗಾದ. ಅದೇ ಸಮಯದಲ್ಲಿ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದ ಇಂಗ್ಲೆಂಡ್ ಮೂಲದ ಯುವ ದಂಪತಿಗಳು ತಮ್ಮ ನವಜಾತ ಶಿಶುವಿನ ನಾಮಕರಣಕ್ಕೆ ತಮ್ಮ ದೇಶದವನೇ ಆದ ಡೇವಿಡ್ ಶೆಪರ್ಡ್ ಅನ್ನು ಆಮಂತ್ರಿಸುವ ಯೋಚನೆ ಮಾಡಿದರಂತೆ. ಆದರೆ ಕ್ರೀಡಾಂಗಣದಲ್ಲಿ ಆತನ ಕಸರತ್ತು ನೋಡಿದ ಮಡದಿ ನುಡಿದಳಂತೆ "ಬೇಡ, ಬೇಡ! ಆತನ ಕೈಗೆ ನಮ್ಮ ಕಂದನನ್ನು ಹಾಕಿದರೆ ಅದನ್ನೂ ಕೆಳಗೆ ಹಾಕಿಬಿಟ್ಟಾನು' ಎಂದು.

(ಈತನೇ ಮುಂದೆ ಡ್ಯಾನ್ಸಿಂಗ್ ಅಂಪೈರ್ ಎಂಬ ಹೆಸರು ಗಳಿಸಿದ)

***

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ವಿಜಯ್ ಮರ್ಚಂಟ್ ತಮ್ಮದೇ ಛಾಪನ್ನು ಮೂಡಿಸಿದ ಆಟಗಾರ. ಆದರೆ ಅವರ ಬ್ಯಾಟಿಂಗ್ ತುಂಬ ನಿಧಾನ ಗತಿಯಿಂದ ಕೂಡಿದ್ದಾಗಿತ್ತು. ಅವರ ಸುದೀರ್ಘ ವೃತ್ತಿ ಜೀವನದಲ್ಲಿ ಅವರು ಬಾರಿಸಿದ ಸಿಕ್ಸರ್ ಗಳು ಕೇವಲ ಎರಡು (ಅದೂ ಒಂದು "ನೋ ಬಾಲ್' ಗೆ). ಪ್ರೇಕ್ಷಕರಿಗಂತೂ ಬೋರ್ ಹೊಡೆಸುತ್ತಿದ್ದರು. ಆದರೆ ನಿವೃತ್ತಿ ಹೊಂದಿದ ಮೇಲೂ ಈ ಮಹಾಶಯ ತಮ್ಮ ನಗೆಚಾಟಿಕೆಗಳಿಂದ ಜನಪ್ರಿಯರಾಗಿದ್ದರು.

1960ರಲ್ಲಿ ನಡೆದ ಭಾರತ–ಆಸ್ಟ್ರೇಲಿಯಾ ಟೆಸ್ಟ್ ಮ್ಯಾಚ್ ಒಂದರಲ್ಲಿ ಅಬ್ಬಾಸ್ ಆಲಿ ಬೇಗ್ ಎಂಬ ಬ್ಯಾಟ್ಸ್‌ಮನ್ ಭಾರತದ ಪರವಾಗಿ "ಹೊಡಿ–ಬಡಿ"ಯ ಬ್ಯಾಟಿಂಗ್ ಒಂದರಲ್ಲಿ ಮಾಡಿ 50 ರನ್ ಮಾಡಿದ ತಕ್ಷಣ ಓರ್ವ ತರುಣಿ ಗ್ಯಾಲರಿಯಿಂದ ಮೈದಾನಕ್ಕೆ ನುಗ್ಗಿ ಬೇಗ್‌ಗೆ ಒಂದು ಮುತ್ತಿಕ್ಕಿದಳು. ಆಗ ವಿಜಯ ಮರ್ಚಂಟ್ ತಮಾಷೆಗಾಗಿ ಕೇಳಿದರಂತೆ "ನಾವು ಕ್ರಿಕೆಟ್ ಆಡುವಾಗ ಈ ಹುಡುಗಿಯರೆಲ್ಲ ಎಲ್ಲಿದ್ದರು?" ಎಂದು.

ಪಕ್ಕದಲ್ಲೇ ಇದ್ದ ಖ್ಯಾತ ಅಂಕಣಗಾರ ಎ.ಎಫ್.ಕೆ. ತಲ್ಯಾರ್‌ಖಾನ್ ತಕ್ಷಣ ಮಾರ್ನುಡಿದರಂತೆ – "ಎಲ್ಲ ನಿದ್ರಿಸುತ್ತಿದ್ದರು" – ಎಂದು.

***

ಖ್ಯಾತ ಕ್ರಿಕೆಟಿಗ ಬಿ.ಎಸ್. ಚಂದ್ರಶೇಖರ್ ಓರ್ವ ಅಗ್ರಗಣ್ಯ ಬೌಲರ್ ಹೌದಾದರೂ, ಬ್ಯಾಟ್ ಹಿಡಿದರೆ ಮಾತ್ರ ರ್‍ಯಾಬಿಟ್ ಎಂಬ 'ಪದವಿ' ಗಳಿಸಿದ್ದರು. ಟೆಸ್ಟ್ ಬ್ಯಾಟ್ಸ ಮನ್ ಗಳ ಪೈಕಿ ಅತ್ಯಧಿಕ ಶೂನ್ಯ ರನ್ ಬಾರಿಸಿದ (?) ಖ್ಯಾತಿ ಅವರದು.

ಹೀಗೆ ಅವರೊಮ್ಮೆ ಬ್ಯಾಟಿಂಗ್‌ಗೆ ಹೋಗಿದ್ದರಷ್ಟೆ. ಪೆವಿಲಿಯನ್‌ಗೆ ಒಂದು ಫೋನ್ ಕರೆ ಬಂತಂತೆ. "ದಯವಿಟ್ಟು ಸ್ವಲ್ಪ ಚಂದ್ರಶೇಖರ್‌ನ ಕರೀತೀರಾ? – ಅಂತ. ಅದಕ್ಕೆ ಡ್ರೆಸಿಂಗ್ ರೂಂ ನಿಂದ ಉತ್ತರ ನೀಡಲಾಯಿತಂತೆ – "ಅವರು ಈಗ ತಾನೇ ಬ್ಯಾಂಟಿಂಗ್‌ಗೆ ಹೋಗಿದ್ದಾರೆ. ದಯವಿಟ್ಟು ಹೋಲ್ಡ್ ಮಾಡಿ. ಕೂಡಲೇ ಬಂದು ಬಿಡ್ತಾರೆ!" – ಎಂದು!

***

■

ಶರಲೇಖನ ಪುನರಾಗಮನ

# ತುಲಾ ಸಂಕ್ರಮಣ ಪೂಜೆ ಪ್ರಕರಣ

● **ವತ್ಸನ**

"ನವಿಲಿಗೆ ಪರ್ಯಾಯ ಪದ, ಮೂರಕ್ಷರದ್ದು, ಕೊನೆಯ ಅಕ್ಷರ ಡಿ, ಯಾವುದಿರಬಹುದು?" ಅಂತ ನಾನು ಶರಲೇಖನನ್ನು ಕೇಳಿದೆ. ಅವ ತನ್ನ ಮೊಬೈಲ್‌ನಲ್ಲಿ ಏನನ್ನೋ ನೋಡುತ್ತಿದ್ದವನು, ತಲೆ ಎತ್ತಿ ನನ್ನ ಕಡೆ ನೋಡಿದ. "ವಿಜಯವಾಣಿಯ ಪದಬಂಧ ಬಿಡಿಸುತ್ತಿದ್ದೇನೆ. ನವಿಲಿಗೆ ಇನ್ನೊಂದು ಪದ ಎಂದರೆ ನನಗೆ ತಿಳಿದಿರೋ ಹಾಗೆ ಮಯೂರ. ಆದರೆ ಕೊನೆಯ ಅಕ್ಷರ ಸರಿಹೊಂದುಲ್ಲವಲ್ಲ." ಅಂತ ನಾನು ವಿವರಣೆ ನೀಡಿದೆ.

ಶರಲೇಖ "ಶಿಖಂಡಿ" ಅಂತ ಹೇಳಿ ಸುಮ್ಮನಾದ. ಅವನು ನನ್ನನ್ನು ಅವಹೇಳನ ಮಾಡುತ್ತಿದ್ದಾನೋ ಅಥವಾ ಪದಬಂಧದ ಉತ್ತರ ಹೇಳುತ್ತಿದ್ದಾನೋ ತಿಳಿಯಲಿಲ್ಲ. ಹೇಗಾದರೂ ಆಗಲಿ ಅಂತ ಕನ್ನಡ ಶಬ್ದಕೋಶ ತೆಗೆದು "ಶಿಖಂಡಿ" ಅನ್ನೋ ಪದ ಹುಡುಕಿದೆ. "ನವಿಲು, ಮಯೂರ" ಅಂತ ಅರ್ಥ ಇತ್ತು. ನನಗೋ ಆಶ್ಚರ್ಯ! ಇವನಿಗೆಲ್ಲಿ ಇಷ್ಟು ಕನ್ನಡ ಜ್ಞಾನ ಅಂತ ಅಂದುಕೊಂಡು, "ಅದು ಹೇಗೆ ಗೊತ್ತಾಯಿತೋ ನಿನಗೆ ?" ಅಂತ ಪ್ರಶ್ನಿಸಿದೆ. ಅವನು ನಗುತ್ತಾ, "ನೀನು ಕೈಯ್ಯಲ್ಲಿ ಹಿಡಿದಿರೋದು ನಿನ್ನೆ ಪೇಪರ್ರು. ಇವತ್ತಿನ ಪೇಪರಿನಲ್ಲಿ ಅದರ ಉತ್ತರ ಇದೆ. ಬೆಳಗ್ಗೆ ನೋಡಿದ್ದು ನೆನಪಿತ್ತು." ಅಂತ ಹೇಳುತ್ತಿದ್ದಾಗಲೇ ನನ್ನ ಮೊಬೈಲ್ ರಿಂಗಾಯಿತು. ಆಚೆ ಬದಿಯಿಂದ ಪೊನ್ನಪ್ಪ " ನಿಮ್ಮಿಬ್ಬರನ್ನ ತುರ್ತಾಗಿ ಭೇಟಿಮಾಡಬೇಕಾಗಿತ್ತು. ಯಾವಾಗ ಬರಲಿ?" ಅಂತ ಕೇಳಿದ. "ಈಗಲೇ ಬಿಡುವಾಗಿದ್ದೇವೆ. ಬರುಕ್ಕಾಗುತ್ತಾ? ಇಲ್ಲಿಗೇ ಊಟಕ್ಕೆ ಬಂದುಬಿಡು" ಅಂತ ಆಹ್ವಾನಿಸಿ, ಅವನ ಒಪ್ಪಿಗೆ ಪಡೆದೆ.

ಪೊನ್ನಪ್ಪ ನನ್ನ ಹೈಸ್ಕೂಲ್ ಸಹಪಾಠಿ. ನಾನು ಮುಂದೆ ಮೆಡಿಕಲ್ ಕಾಲೇಜು ಸೇರಿ ಡಾಕ್ಟರಾಗುತ್ತಿದ್ದಾಗ ಪೊನ್ನಪ್ಪ ಪದವೀಧರನಾಗಿ ಅನಂತರ ತನ್ನ ಪಿತ್ರಾರ್ಜಿತ ಕಾಫಿತೋಟದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಮಡಿಕೇರಿ ಹತ್ತಿರದ ಮುಕ್ಕಟಿರ ಪ್ಲಾಂಟೇಷನ್‌ಗೆ ತೆರಳಿದ್ದ. ಕಳೆದ ಹಲವಾರು ವರ್ಷಗಳಿಂದ ಅವ ವರ್ಷಕ್ಕೊಮ್ಮೆ ಮಗಳನ್ನು ನೋಡಲು ಬೆಂಗಳೂರಿಗೆ ಬಂದಾಗಲೆಲ್ಲಾ ನನ್ನನ್ನು ತಪ್ಪದೇ ಭೇಟಿಯಾಗುತ್ತಿದ್ದ. ಶರಲೇಖನ ಸಾಹಸಗಾಥೆಗಳನ್ನು ಕೇಳುವುದರಲ್ಲಿ ಅವನಿಗೆ ಇನ್ನಿಲ್ಲದ ಉತ್ಸಾಹ. ಈ ವಾರ್ಷಿಕ ಭೇಟಿಗಳಿಂದಾಗಿ ನಮ್ಮ ಸ್ನೇಹ ಬಾಡದೇ, ತನ್ನ ಹೊಸತನವನ್ನು ಕಾಪಾಡಿಕೊಂಡು ಬಂದಿತ್ತು.

ಸ್ವಲ್ಪ ಹೊತ್ತಿನಲ್ಲೇ ಪೊನ್ನಪ್ಪ ನಮ್ಮಲ್ಲಿ ಹಾಜರ್ ಅವನೊಂದಿಗೆ ಒಬ್ಬ ಮಧ್ಯವಯಸ್ಕ. "ಇವರು ದೇವಯ್ಯ. ನನಗೆ ಬಹಳ ಆಪ್ತರು. ನಮ್ಮ ಎಸ್ಟೇಟಿನ ವ್ಯವಹಾರವೆಲ್ಲಾ ಇವರದ್ದೇ ಮೇಲ್ವಿಚಾರಣೆ." ಎಂದು ಪೊನ್ನಪ್ಪ ಅವರನ್ನು ನಮಗೆ ಪರಿಚಯಿಸಿದ ನಂತರ ಇಬ್ಬರೂ ಒಳಕ್ಕೆ ಬಂದರು. ಪರಸ್ಪರ ಕುಶಲದ ಮಾತು, ಸರೋಜಮ್ಮನವರ ಆತಿಥ್ಯ ಇವೆಲ್ಲಾ ಮುಗಿದನಂತರ ಪೊನ್ನಪ್ಪ ತನ್ನ ಅಹವಾಲನ್ನು ನಮ್ಮ ಮುಂದಿಟ್ಟ. " ಮುಖ್ಯವಾಗಿ ಇದೊಂದು ಕೌಟುಂಬಿಕ ಸಮಸ್ಯೆ. ನನ್ನ ತಂದೆಯ ತಂಗಿ ದೇಚಮ್ಮ ಎರಡು ತಿಂಗಳ ಹಿಂದೆ ಕಾಲವಾದರು. ಅವರ ಗಂಡ ಬಹು ಹಿಂದೆಯೇ ತೀರಿಕೊಂಡಿದ್ದರು. ಹಾಗಾಗಿ ಮನೆಗೆ ದಿಕ್ಕಾಗಲೆಂದು ಅವರು ಒಬ್ಬ ಅನಾಥ ಹುಡುಗನನ್ನು

ಬಹು ಹಿಂದೆಯೇ ದತ್ತು ಪಡೆದಿದ್ದರು. ಅವನ ಹೆಸರು ಮದನ್. ಮಡಿಕೇರಿಯ ಸಮೀಪದ ಹಿಲಿಥಳುವಿನಲ್ಲಿ ನಮ್ಮ ಅತ್ತೆಯವರ ವಂಶಪಾರಂಪರ್ಯದ ತೋಟದ ಮನೆ ಇದೆ. ಮದನ್‌ಗೆ ತಾಯಿಯನ್ನು ಕಂಡರೆ ಇನ್ನಿಲ್ಲದ ಪ್ರೀತಿ. ಅವರ ಕೊನೆಗಾಲದಲ್ಲಂತೂ ಅವರನ್ನು ತುಂಬಾ ಚೆನ್ನಾಗಿ ಆರೈಕೆ ಮಾಡಿದ. ಅವನ ದುರಾದೃಷ್ಟಕ್ಕೆ ದೇವಕಿ ನಿಧನವಾದ ದಿನ ಮದನ್ ಯಾವುದೋ ತುರ್ತು ಕೆಲಸಕ್ಕೆ ಮಡಿಕೇರಿಗೆ ಹೋಗಿದ್ದವನು ಹಿಂದಕ್ಕೆ ಬರುವುದಕ್ಕಾಗಿರಲಿಲ್ಲ. ಆ ಸಂಗತೀನ ಅವನು ಬಹುವಾಗಿ ಮನಸ್ಸಿಗೆ ಹಚ್ಚಿಕೊಂಡು ಬಿಟ್ಟಿದಾನೆ. ಎಷ್ಟು ಹೇಳಿದರೂ ಅವನಿಗೆ ಸಮಾಧಾನವಿಲ್ಲ. ಅವನಿಗೆ ಹೇಗಾದರೂ ಮಾಡಿ ತನ್ನ ಮೇಲಿರೋ ಜವಾಬ್ದಾರಿನ ನಿರ್ವಹಿಸೋ ಉತ್ಸಾಹ ಪುನಃ ಬರೋಹಾಗೆ ಮಾಡಬೇಕು. ನನಗಂತೂ ಏನಾ ತೋಚ್ತಾ ಇಲ್ಲ. ಮೊನ್ನೆ ದೇವಯ್ಯ , " ನಿಮ್ಮ ಮಿತ್ರರಾದ ವತ್ಸನ, ಶರಲೇಖರನ್ನು ಕೇಳಿ. ಅವರಿಗೆ ಅಪಾರ ಜೀವನಾನುಭವ" ಅಂತ ಹೇಳಿದನಂತರ ಇಲ್ಲಿ ಬಂದಿದ್ದೇವೆ."

ಶರಲೇಖ ಒಂದೆರಡು ನಿಮಿಷ ಸುಮ್ಮನಿದ್ದು, "ವತ್ಸನ, ಇದು ನಿನ್ನ ವೃತ್ತಿಗೆ ಸಂಬಂಧಿಸಿದಂತೆ ಕಾಣುತ್ತದೆ, ನೀನೇನು ಹೇಳ್ತೀಯಾ?" ಅಂತ ನನ್ನನ್ನು ಪ್ರಶ್ನಿಸಿದ.

"ಅವನು ತಂದೆ ತಾಯಿಯಿಲ್ಲದ ಹುಡುಗ. ಮೊದಲಿನಿಂದ ಮಲತಾಯಿಯೇ ಅವನ ಪ್ರೀತಿಯ ಸೆಲೆ. ಅವಳ ನಿರ್ಗಮನ ಅವನಲ್ಲಿ ಅಪಾರ ಅಭದ್ರತೆಯನ್ನು ಹುಟ್ಟುಹಾಕಿರಲು ಸಾಧ್ಯ. ಮುಖ್ಯವಾಗಿ ತಾಯಿಯ ಅವಸಾನ ಸಮಯದಲ್ಲಿ ಅವರ ಬಳಿ ತಾನಿರಲಿಲ್ಲ ಎಂಬ ಪಾಪಪ್ರಜ್ಞೆ ಈಗ ಅವನನ್ನು ಕಾಡುತ್ತಿರಬಹುದು. ಅವನ ತಾಯಿ ಅವನ ಬಗ್ಗೆ ಎಂದಿಗೂ ತಪ್ಪು ತಿಳಿಯಲಾರಳು ಎಂಬ ಅಂಶ ಅವನ ಮನಸ್ಸಿನಲ್ಲಿ ಖಚಿತವಾದರೆ ಅವನು ತನ್ನ ಈ ಖಿನ್ನತೆಯಿಂದ ಹೊರಬರಬಹುದು " ಅಂತ ನನಗೆ ತೋಚಿದ್ದನ್ನು ಹೇಳಿದೆ.

"ಅಂದರೆ ಅವನು ಖಿನ್ನತೆಯಿಂದ ಹೊರಬರಬೇಕಾದರೆ ಅವನ ತಾಯಿ ಅವನನ್ನು ಕ್ಷಮಿಸಿದ್ದೇನೆ ಅಂತ ಸ್ಪಷ್ಟಪಡಿಸಬೇಕು ಅಂತ ತಾನೆ ನೀನು ಹೇಳ್ತಿರೋದು " ಶರಲೇಖ ಪ್ರಶ್ನಿಸಿದ.

"ಹೌದು. ಆದರೆ ಅದು ಅಸಾಧ್ಯವಾದ ಮಾತಾಯಿತಲ್ಲ"

ಶರಲೇಖ ಮತ್ತೆ ಮೌನಕ್ಕೆ ಶರಣಾದ. ಎರಡು ನಿಮಿಷ ಬಿಟ್ಟು, "ಇನ್ನು ಮೂರು ದಿನಗಳಲ್ಲಿ ತುಲಾ ಸಂಕ್ರಮಣ ಇದೆ ಅಲ್ಲವೇ?" ಅಂತ ಪೊನ್ನಪ್ಪನನ್ನು ಕೇಳಿದ.

"ಹೌದು, ಅದು ಕಾವೇರಿ ತಾಯಿ ಉದ್ಭವದ ದಿನ. ನಮ್ಮಲ್ಲಿ ದೊಡ್ಡ ಹಬ್ಬ."

"ಅವತ್ತಿನ ದಿನ ಹಿಲಿಥಳು ತೋಟದ ಮನೆಯಲ್ಲಿ ಒಂದು ಪೂಜೆ ಏರ್ಪಡಿಸಿಬಿಡಿ. ಮದನನ ಆರೋಗ್ಯಕ್ಕೆ ಮತ್ತು ಅವನ ಅಗಲಿದ ತಾಯಿಯ ಆತ್ಮಶಾಂತಿಗಾಗಿ ಈ ಪೂಜೆ ಅಂತ ಮದನನಿಗೆ ಹೇಳಿ. ಅವನೇ ಪೂಜೆಯಲ್ಲಿ ಮುಖ್ಯಕರ್ತನಾಗಲಿ. ಹೇಗೂ ಅವನೇ ಈಗ ಮನೆಯ ಒಡೆಯನಲ್ಲವೇ. ಆ ಪೂಜಾ ಸಮಯದಲ್ಲಿ ಅವನು ತನ್ನ ತಾಯಿಯ ಕ್ಷಮೆಗಾಗಿ ಪ್ರಾರ್ಥಿಸಲಿ. ತಾಯಿಯ ಕ್ಷಮೆ ದೊರಕಿದರೆ ಅವನು ಗುಣಮುಖನಾಗುವ ಹಾದಿ ಸುಗಮವಾದೀತು. "

ಮಾತನಾಡುವುದು ಈಗ ದೇವಯ್ಯನ ಸರದಿ "ನೀವು ಹೇಳುವ ಮಾತು ತುಂಬಾ ಸತ್ಯ. ಕಾವೇರಿ ತಾಯಿಯ ಕರುಣೆ ಕಲ್ಲನ್ನೂ ಕರಗಿಸಬಲ್ಲುದು. ಪೂಜೆ ನಡೆಸಲು ನಮ್ಮ ಮನೆತನದ ಮೋನಪ್ಪ ಪೂಜಾರಿಗಳನ್ನೇ ವಿನಂತಿಸಿಕೊಳ್ಳೋಣ. ತಾಯಿಯ

ಕ್ಷಮೆ ಎಂದಾದರೂ ಇದ್ದದ್ದೇ. ಆದರೆ ಅದು ಮದನನಿಗೆ ತಿಳಿಯುವಂತೆ ಮಾಡಲು ನಿಮ್ಮ ಉಪಾಯ?'

ಶರಲೇಖನಿಗೆ ದೇವಯ್ಯನವರ ಚುರುಕು ಬುದ್ಧಿ ಇಷ್ಟವಾದಂತೆ ಕಾಣಿಸಿತು.

"ಅದನ್ನೂ ನೀವೇ ಹೇಳಿಬಿಡಿ ದೇವಯ್ಯ" ಎಂದು ಶರಲೇಖ ನಸುನಕ್ಕ.

"ನಾನೇನು ಹೇಳೋದು. ಎಲ್ಲ ನಿಮ್ಮ ಹಂಚಿಕೆ. ನನಗೆ ನಿಮ್ಮ ಇಂಗಿತ ಅರ್ಥ ಆಯಿತು ಅಷ್ಟೇ. ನನಗನ್ನಿಸುವ ಹಾಗೆ ಸುಂಠಿಕೊಪ್ಪದಲ್ಲಿ ನನ್ನ ಪರಿಚಯದ ಗೌರಮ್ಮ ಅಂತ ಒಬ್ಬಾಕೆ ಇದ್ದಾರೆ. ಒಳ್ಳೆಯ ಅಭಿನೇತ್ರಿ. ಅವರನ್ನ ವಿನಂತಿಸಿಕೊಂಡು ಒಂದೆರಡು ನಿಮಿಷಗಳ ಮಟ್ಟಿಗೆ ಪೂಜೆಯ ಸಮಯದಲ್ಲಿ ಹಿಂಬಾಗಿಲಿನಿಂದ ಯಾರಿಗೂ ತಿಳಿಯದಂತೆ ದೇಚಮ್ಮನ ವೇಷದಲ್ಲಿ ತೋಟದ ಮನೆಗೆ ಬಂದು ಮದನನಿಗೆ ಕಾಣಿಸಿಕೊಂಡು ಹೋಗುವಂತೆ ಮಾಡಿದರೆ ಮದನನಿಗೆ ತಾಯಿಯ ದರ್ಶನವಾಗಿ ನಮ್ಮ ಉದ್ದೇಶ ಈಡೇರುತ್ತದೆ " ಎಂದ ದೇವಯ್ಯ.

ಶರಲೇಖ, "ಸ್ಥೂಲವಾಗಿ ಇದೇ ನನ್ನ ಉಪಾಯ. ಬೇಕಾದಷ್ಟು ಕೊಂಡಿಗಳನ್ನು ಇನ್ನೂ ಪರಿಷ್ಕರಿಸಬೇಕು. ಮದನನಿಗೆ ಇದೆಲ್ಲಾ ನಾಟಕ ಎಂದು ಒಂದು ಚೂರು ಸುಳಿವು ಸಿಕ್ಕಿದರೂ ನಮ್ಮೆಲ್ಲ ಪ್ರಯತ್ನ ವ್ಯರ್ಥ. ಮದನ ಈಗೆಲ್ಲಿದ್ದಾನೆ?" ಎಂದು ಪೊನ್ನಪ್ಪನನ್ನು ಕೇಳಿದ.

"ಈಗ ಅವನು ನನ್ನ ಪತ್ನಿ ದೇವಕಿಯ ಅಕ್ಕರೆಯ ಆರೈಕೆಯಲ್ಲಿ ನಮ್ಮ ಮುಕ್ಕಟಿರ ಮನೆಯಲ್ಲೇ ಇದ್ದಾನೆ. ಏಕೆ ಕೇಳಿದಿರಿ ?"

"ನನ್ನ ಹಂಚಿಕೆ ಹೀಗಿದೆ. ಪೊನ್ನಪ್ಪ ಈಗ ನೀನು ನಿನ್ನ ಮನೆಗೆ ಹಿಂತಿರುಗು. ಅಲ್ಲಿ ನೀನು ಮತ್ತು ದೇವಕಿ ಮದನನೊಂದಿಗೆ ಮಾತನಾಡಿ ಹಬ್ಬದ ದಿನ ಅವನ ಮನೆಯಲ್ಲಿ ನಡೆಸುವ ಪೂಜೆಗೆ ಅವನೇ ಅಧ್ವರ್ಯು ಆಗುವಂತೆ ಅವನ ಮನವೊಲಿಸಿ ಪೂಜೆಯ ದಿನ ಅವನನ್ನು ಹಿಲಿಥಳು ಮನೆಗೆ ಕರೆತನ್ನಿ. ವತ್ಸನ ಮತ್ತು ನಾನು ದೇವಯ್ಯನೊಡನೆ ಹಿಲಿಥಳುವಿಗೆ ಹೋಗಿ, ಅಲ್ಲಿಂದ ಮೋನಪ್ಪ ಪೂಜಾರಿ ಮತ್ತು ಗೌರಮ್ಮ ಇವರನ್ನು ಸಂಪರ್ಕಿಸಿ ಪೂಜೆ ಸಾಂಗವಾಗಿ ನೆರವೇರಲು ಮಾಡಬೇಕಾದ ವ್ಯವಸ್ಥೆಗಳನ್ನೆಲ್ಲಾ ನೋಡಿಕೊಳ್ಳುತ್ತೇವೆ. ಒಂದು ಮುಖ್ಯ ಎಚ್ಚರಿಕೆ. ಈ ನಮ್ಮ ಹಂಚಿಕೆ ಇನ್ನಾರಿಗೂ ತಿಳಿಯಬಾರದು. ಮತ್ತೆ ನಮ್ಮ ಭೇಟಿ ತುಲಾ ಸಂಕ್ರಮಣದಂದು ತೋಟದ ಮನೆಯಲ್ಲಿ ಮಾತ್ರ"

ಮಾರನೆಯ ದಿನ ದೇವಯ್ಯನವರೊಂದಿಗೆ ಶರಲೇಖ ಮತ್ತು ನಾನು ಮಡಿಕೇರಿಯ ದಾರಿ ಹಿಡಿದೆವು. ದೇವಯ್ಯ ನಮ್ಮ ವಾಸ್ತವ್ಯಕ್ಕೆ ತೋಟದ ಮನೆಯ ಸಮೀಪದಲ್ಲಿದ್ದ ವಿಕ್ಟೋರಿಯನ್ ವೆರಾಂಡಾಸ್ ಎಂಬ ಒಂದು ಹೋಮ್‌ಸ್ಟೇಯಲ್ಲಿ ವ್ಯವಸ್ಥೆ ಮಾಡಿದ್ದರು. ಕೊಡಗಿನ ಬೆಟ್ಟಗುಡ್ಡಗಳಿಗೆ ಹೊಂದಿಕೊಂಡಂತಿದ್ದ ಈ ಕುಟೀರ ಮನಮೋಹಕವಾಗಿತ್ತು. ಮಾರನೆಯ ಬೆಳಗ್ಗೆ ನಾವು ಮೂವರೂ ಹಿಲಿಥಳು ತೋಟದ ಮನೆಗೆ ಭೇಟಿ ನೀಡಿದೆವು. ಸುಮಾರು ನೂರ ಐವತ್ತು ವರ್ಷಗಳಷ್ಟು ಹಳೆಯ ಮನೆ ಅದು. ಭಾರೀ ಮರದ ತೊಲೆಗಳಿಂದ ನಿರ್ಮಿಸಿದ್ದ ಆ ಮನೆಯ ಅಪೂರ್ವ ವಿನ್ಯಾಸ ಬೆರಗುಗೊಳಿಸುವಂತಹದು. ಶರಲೇಖ ಮನೆಯನ್ನೆಲ್ಲಾ ಪರೀಕ್ಷಿಸಿ ಯಾರಿಗೂ ಕಾಣದಂತೆ ಗೌರಮ್ಮ ಮನೆಯೊಳಗೆ ಬರಬೇಕಾದ ಹಿಂಬಾಗಿಲನ್ನು ನಿರ್ಧರಿಸಿಕೊಂಡ. ಆ ತೋಟದಲ್ಲೆಲ್ಲಾ ಓಡಾಡಿ ಊಟದ ಹೊತ್ತಿಗೆ ನಮ್ಮ ಕಾಟೇಜಿಗೆ ಹಿಂತಿರುಗಿದೆವು. ಊಟ ಮುಗಿಸಿ ದೇವಯ್ಯ ಶರಲೇಖನೊಡಗೂಡಿ ಸುಂಠಿಕೊಪ್ಪಕ್ಕೆ ಹೊರಟರು. ನಾನು ರಿಸಾರ್ಟಿನ ಪುಸ್ತಕ ಭಂಡಾರಕ್ಕೆ ಲಗ್ಗೆ ಹಾಕಿದೆ.

ಮಾರನೆಯ ದಿನ ತುಲಾ ಸಂಕ್ರಮಣ. ನಾನು ಶರಲೇಖ ದೇವಯ್ಯನವರೊಡನೆ ತೋಟದ ಮನೆಗೆ ಹೋದಾಗ ಮುಕ್ಕಟಿರ ಪಾರ್ಟಿ ಎಲ್ಲಾ ಅಲ್ಲಿ ಆಗಲೇ ಹಾಜರಾಗಿದ್ದರು. ಪೊನ್ನಪ್ಪ ನಮ್ಮಿಬ್ಬರಿಗೆ ಮದನನನ್ನು ಪರಿಚಯಿಸಿದರು. ಮದನನ ನಡವಳಿಕೆಯನ್ನು ನೋಡಿದರೆ, ಪಾಪ ತರುಣ ತುಂಬ ಬಳಲಿದಂತೆ ಕಂಡಿತು. ವಿಶಾಲವಾದ ಹಜಾರದ ಪೂರ್ವ ಅಂಚಿನಲ್ಲಿ ಮೋನಪ್ಪ ಪೂಜಾರಿಯವರು ಪೂಜೆಗೆ ಎಲ್ಲಾ ಅಣಿಮಾಡುತ್ತಿದ್ದರು. ಬೆಳ್ಳಿ ತಟ್ಟೆಯಲ್ಲಿಟ್ಟ ಒಂದು ಬೆಳ್ಳಿಯ ಚೊಂಬಿನಲ್ಲಿ ಅಕ್ಕಿಯನ್ನು ತುಂಬಿ ಅದರ ಮೇಲೆ ಮೂರು ಅಡಿಕೆ, ಮೂರು ವಿಳ್ಳೆಯದೆಲೆ, ಒಂದು ಕೆಂಪು ವಸ್ತ್ರದಲ್ಲಿ ಸುತ್ತಿಟ್ಟ ಸೌತೆಕಾಯಿ ಇವುಗಳನ್ನಿಟ್ಟು, ಒಂದು ಹಣತೆಯನ್ನು ಹಚ್ಚಿ ತಟ್ಟೆಯಲ್ಲಿ ಇಟ್ಟಿದ್ದರು. ಕಾವೇರಿ ತಾಯಿಯನ್ನು ಪ್ರತಿನಿಧಿಸುತ್ತಿದ್ದ ಆ ಕಲಶದ ಬಲ ಮಗ್ಗುಲಲ್ಲೇ ಒಂದು ಬಾಗಿಲು ದೇಚಮ್ಮ ವಾಸಿಸುತ್ತಿದ್ದ ಕೊಠಡಿಗೆ ತೆರೆಯುತ್ತಿತ್ತು.

ಶುಭ ಮಹೂರ್ತದಲ್ಲಿ ಪೂಜೆ ಶುರುವಾಯಿತು. ಕೊಡವರ ಆಚಾರ ವಿಧಾನಗಳದ್ದೇ ಒಂದು ವೈಶಿಷ್ಟ್ಯ. ಪೂಜೆ ಸ್ವಲ್ಪ ಹೊತ್ತು ಸಾಗಿದ ನಂತರ ಮೋನಪ್ಪ ಮದನನ ಕಡೆ ತಿರುಗಿ, ಈಗ ನೀನು ಪ್ರಾರ್ಥಿಸಿಕೊಳ್ಳಬಹುದು ಎಂದು ಹೇಳಿದರು. ಮದನ ಬಹು ಭಕ್ತಿಯಿಂದ ಪ್ರಾರ್ಥಿಸಿ ಕಣ್ಣು ತೆರೆದ. ಕಲಶದ ಬಲ ಪಕ್ಕದ ಬಾಗಿಲು ಮೆಲ್ಲಗೆ ತೆರೆದುಕೊಂಡಿತು. ಶುದ್ಧ ಕೊಡವರ ಶೈಲಿಯಲ್ಲಿ ಸೀರೆ ಉಟ್ಟು ದೊಡ್ಡ ಕುಂಕುಮ ಧರಿಸಿದ್ದ ದೇಚಮ್ಮ ಬಾಗಿಲ ಹೊಸ್ತಿಲಿನಲ್ಲಿ ನಿಂತಿದ್ದರು. ಅವರನ್ನು ನೋಡಿ ಮದನ ಭಾವೋದ್ವೇಗದಿಂದ "ಅವ್ವೋ" ಎನ್ನುತ್ತಾ ಅವರ ಬಳಿಗೆ ಓಡಿದ. ಅಷ್ಟರಲ್ಲಿ ದೇಚಮ್ಮ ಬಾಗಿಲಿನ ಹಿಂದೆ ಮರೆಯಾದರು. ಪೊನ್ನಪ್ಪ ಮದನನನ್ನು ತಬ್ಬಿಕೊಂಡು, "ಏನು ಕಂಡೆ ಮಗು? ಗಾಬರಿ ಬೇಡ." ಅಂತ ಪ್ರೀತಿಯಿಂದ ವಿಚಾರಿಸಿಕೊಳ್ಳತೊಡಗಿದರು. ಮದನನ ಮುಖದಲ್ಲಿ ಅತೀವ ಸಂತಸ ಬೆಳಗಿತ್ತು. ಪೂಜೆಯೆಲ್ಲಾ ಮುಗಿದು, ಹಬ್ಬದ ಊಟದ ನಂತರ ಶರಲೇಖ ಮತ್ತು ನಾನು ಮುಕ್ಕಟಿರದ ಗುಂಪನ್ನು ಬೀಳ್ಕೊಂಡು ಇನ್ನೋವಾದಲ್ಲಿ ರಿಸಾರ್ಟಿನ ದಾರಿ ಹಿಡಿದೆವು.

ರಿಸಾರ್ಟಿಗೆ ಹೋಗುತ್ತಾ ದಾರಿಯಲ್ಲಿ " ಭಲೇ ಶರಲೇಖ, ನಿನ್ನ ಚತುರತೆಯಿಂದ ಒಬ್ಬ ತರುಣನ ದುಗುಡ ಕ್ಷೀಣವಾಯಿತು. ಪೊನ್ನಪ್ಪ ನಿನ್ನನ್ನು ಎಷ್ಟು ವಂದಿಸಿದರೂ ಸಾಲದು." ಎಂದು ನಾನು ಶರಲೇಖನಿಗೆ ಹೆಮ್ಮೆಯಿಂದ ಹೇಳಿದೆ. "ಇದರಲ್ಲಿ ನಾನು ಮಾಡಿದ್ದು ಏನೂ ಇಲ್ಲ ವತ್ಸನ. ಎಲ್ಲಾ ದೇವಯ್ಯನ ದಕ್ಷ ಕೆಲಸ. ಆದರೂ ಯಾರಿಗಾದರೂ ವಂದನೆ ಸಲ್ಲಬೇಕೆಂದರೆ ಅದು ಗೌರಮ್ಮನವರಿಗೆ ಸಲ್ಲಬೇಕು. ಎಷ್ಟು ಕರಾರುವಾಕ್ಕಾಗಿ ದೇಚಮ್ಮನವರ ಪಾತ್ರ ನಿರ್ವಹಿಸಿದರು." ಎಂದು ಶರಲೇಖ ಹೇಳುತ್ತಿದ್ದಂತೆ ರಿಸಾರ್ಟನ್ನು ಸೇರಿದ್ದೆವು. ರಿಸಾರ್ಟಿನ ವೆರಾಂಡಾದಲ್ಲಿ ಗೌರಮ್ಮ ಕುಳಿತಿದ್ದರು.

ಅವರನ್ನು ಅಭಿನಂದಿಸಲು ಶರಲೇಖ ನೇರವಾಗಿ ಅವರ ಬಳಿ ಸಾಗಿದ. ಅವನು ಮಾತನಾಡುವ ಮುಂಚೆಯೇ ಆಕೆ, "ನಾನು ನಿಮ್ಮನ್ನು ಹೇಗೆ ಕ್ಷಮಾಪಣೆ ಕೇಳಬೇಕೋ ತಿಳಿಯದು. ಬೆಳಗ್ಗೆ ಒಂಭತ್ತಕ್ಕೇ ತೋಟದ ಮನೆಯ ಹಿಂಬಾಗಿಲಿಗೆ ಬರಲು ಹೇಳಿದ್ದಿರಿ. ಸುಂಟಿಕೊಪ್ಪದಲ್ಲಿ ನಾನು ಆರು ಗಂಟೆಗೇ ಬಸ್ಸನ್ನು ಹಿಡಿದಿದ್ದೆ, ಹಾಳಾದ್ದು ಬಸ್ಸು ಇಂಜಿನ್ ಕೆಟ್ಟು ನಿಂತಿತು. ಬೇರೆ ಬಸ್ಸು ಬಂದು ಅದರಲ್ಲಿ ನಾನು ಇಲ್ಲಿಗೆ ತಲುಪಿದಾಗ ಗಂಟೆ ಹನ್ನೆರಡಾಗಿತ್ತು. ಪೂಜೆ ಎಲ್ಲಾ ಮುಗಿದಿರುತ್ತೆ ಇನ್ನು ನಾನು ಬಂದರೆ ಅಭಾಸ ಅಂತ ನಿರ್ಧರಿಸಿ ಇಲ್ಲೇ ನಿಮಗೆ ಕಾಯುತ್ತಾ ಕುಳಿತೆ. ಇಕೋ ನೀವು ಕೊಟ್ಟ ಮುಂಗಡ ಹಣ." ಎಂದರು ಗೌರಮ್ಮ. ನಾನು ಶರಲೇಖನ ಮುಖ ನೋಡಿದೆ. ಅವನು ಮುಖ ತಿರುಗಿಸಿದ.

■

# ಬದಲಾದ ಬದುಕು

● ಎಂ.ಎಸ್. ನರಸಿಂಹಮೂರ್ತಿ

ಬದಲಾವಣೆ ಜಗದ ನಿಯಮ.

ಆದ್ರೆ ಈ ಮಟ್ಟಕ್ಕೆ ಜಗತ್ತು ಬದಲಾಗುತ್ತೆ ಅಂತ ಯಾರೂ ಊಹಿಸಿರಲಿಲ್ಲ.

ಕೆಲಸಕ್ಕೆ ಹೋಗೋ ಗಂಡಸರು ಈ ಮೊದಲು ಮನೆಗೆ ಬರ್ತಿದ್ದಿದ್ದೇ ರಾತ್ರಿ 10 ಗಂಟೆ ಹೊಡೆದ ಮೇಲೆ. ಬೇಗ ಬನ್ನಿ ಅಂತ ಮನೆಯಾಕೆ ಹೊಡ್ಕೊಂಡ ಮೇಲೆ. ಕೆಲವರಂತೂ ಎರಡನೇ ಸೆಷನ್ ಕೆಲ್ಸ ಕಾರ್ಯಗಳನ್ನ ಮುಗಿಸಿಕೊಂಡು ಮಧ್ಯರಾತ್ರಿ ತೂರಾಡ್ತಾ ಗೇಟು ತಡವರಿಸಿ ಮನೆಗೆ ಬಂದ ಉದಾಹರಣೆಗಳೂ ಇವೆ. ಆದ್ರೆ ಈಗ ಎಲ್ಲೆಲ್ಲೂ ಶಿಸ್ತು. ಜನ ಅವರವರ ಸ್ವಂತ ಮನೇಲಿದ್ದು, ಸ್ವಂತ ಹೆಂಡ್ತಿ ಜೊತೆ ಜೀವನ ಮಾಡ್ತಾ ಇರೋದು ಆಶ್ಚರ್ಯ ಅದ್ಭುತಗಳ ಮಿಕ್ಸ !

ಮನುಷ್ಯನ್ನ ಇಷ್ಟು ಬದಲಾವಣೆ ಮಾಡೋಕೆ ದೇವರಿಗೂ ಸಾಧ್ಯ ಇರಲಿಲ್ಲ. ಆದ್ರೆ ಕರೋನಾ ಅಂಬೋ ವೈರಸ್ಸು ಮನುಷ್ಯನ್ನ ಬದಲಾವಣೆ ಮಾಡಿದೆ. ಮನೆಮಂದಿಯ ನಡುವೆ ಆಂತರಿಕ ಪ್ರೀತಿಯನ್ನ ಹೆಚ್ಚು ಮಾಡಿದೆ. ಇರುವ ತಂಗಳನ್ನೇ ತಿಂದು ಸರಳವಾಗಿ ಜೀವನ ಮಾಡಬೇಕು ಎಂಬುದನ್ನ ಕಲಿಸಿದೆ. ಈ ವಿಷಯದ ಬಗ್ಗೆ ಯೋಚನೆ ಮಾಡುತ್ತಾ ಮನೇಲಿ ಕುಳಿತಿದ್ದಾಗ ಗೆಳೆಯ ವಿಶ್ವ ಬಂದ. ಅವನೂ ಕರೋನಾ ವಿಷಯವನ್ನೇ ತಂದಿದ್ದ.

"ಕರೋನಾ ಜಾಸ್ತಿ ಆಗ್ತಿದೆ, ನಮ್ಮ ಸಿಟಿ ಜನಕ್ಕೆ ಕಟಿನಲ್ಲೇ ಬುದ್ಧಿ" ಎಂದು ವಿಶ್ವ ಬೈದ.

"ಕಟಿನಲ್ಲಿ ಬುದ್ಧಿ ಇರೋಕೆ ಸಾಧ್ಯ ಇಲ್ಲ ವಿಶ್ವ. ಬುದ್ಧಿ ಏನಿದ್ರೂ ಮೇಲೆ ಇರುತ್ತೆ" ಎಂದೆ.

"ನಮ್ಮ ಜನ ಕರೋನಾ ಕಾಣಿಸಿಕೊಂಡ ಪ್ರಾರಂಭದ ದಿನಗಳಲ್ಲಿ ಬೇಡ ಬೇಡ ಅಂತ ಬಡ್ಕೊಂಡ್ರೂ ನಿತ್ಯ ಬಜಾರ್‌ಗೆ ಹೋಗ್ತಿದ್ರು. ಒಂದು ದಿನ ತರಕಾರಿ ಕೊಳ್ಳಲಿಲ್ಲ ಅಂದ್ರೆ ಆಕಾಶ ಕಳಚಿ ಅಡಿಗೆ ಮನೇಲೇ ಬೀಳೋದಿಲ್ಲ" ಎಂದು ಗುಡುಗಿದ.

ಆದ್ರೆ ನಾನು ವಿಶ್ವನ ಮಾತುಗಳನ್ನ ವಿರೋಧಿಸಿದೆ. ತಾಜಾ ತರಕಾರಿಯಲ್ಲಿ ವಿಟಮಿನ್ಸು, ಪ್ರೋಟಿನ್ಸು ಜಾಸ್ತಿ ಇರುತ್ತೆ. ತಾಜಾ ತರಕಾರಿ ಬಳಸಿದ್ರೆ ರುಚಿ ಹೆಚ್ಚು ಎಂಬುದು ನನ್ನ ಅಭಿಪ್ರಾಯ.

"ಕೊತ್ತಂಬರಿಸೊಪ್ಪು ಮೂರು ದಿನ ಮೊದಲು ತಂದಿಟ್ರೆ ಅದು ಕಸದ ಸೊಪ್ಪು ಆಗುತ್ತೆ ಗೊತ್ತಾ ವಿಶ್ವ?" ಎಂದೆ.

"ಸಣ್ಣ ಪುಟ್ಟ ವಸ್ತುಗಳಿಗೂ ನಮ್ಮ ಜನ ಪ್ರತಿನಿತ್ಯ ಜನ ಜಂಗುಳಿ ನಡುವೆ ನುಗ್ಗಾಡ್ತಾ ಮಾರ್ಕೆಟ್‌ನಲ್ಲಿ ಸುತ್ತಾಡ್ತಾರೆ. ಮನೆ ಹತ್ರ ಇರೋ ಅಂಗಡಿಗಳನ್ನ ಬಿಟ್ಟು ದೂರಕ್ಕೆ ಹೋಗ್ತಾರೆ. ಎಲ್ಲರ್ರೂ ಮುಟ್ಟಿಸ್ಕೊಂಡು, ಮೈದಡವಿ ಮನೆಗೆ ಬರ್ತಾರೆ. ಬರ್ತಾ ತರಕಾರಿ ಜೊತೆ ಕರೋನಾನೂ ಬ್ಯಾಗಲ್ಲಿ ತುಂಬಿ ತಂದಿರ್ತಾರೆ."

"ಅಂದ್ರೆ ನೀನು ಹೇಳೋದು ಜನರು ಬ್ಯಾಗಲ್ಲಿ ತಾವೇ ಕರೋನಾ ಮನೆಗೆ ತರ್ತಾರೆ ಅಂತಾನಾ?" ಎಂದು ಪ್ರಶ್ನಿಸಿದೆ.

"ಕರೋನಾಗೆ ವಿಳಾಸ ಬೇಕಿಲ್ಲ. ನಿಯಮ ಪಾಲಿಸದೆ ಲೂಸ್ ಲೂಸಾಗಿ ಅಡ್ಡಾಡೋ ವ್ಯಕ್ತಿಯ ಜೊತೇಲಿ ಕರೋನಾ ಅಲ್ಲಾಡ್ತಾ ಬಂದ್ಬಿಡುತ್ತೆ. ಎಷ್ಟಾಗ್ಲಿ ಅದು ವೈರಸ್ ! ವೈರಾಣುಗಳು ಕಣ್ಣಿಗೆ ಕಾಣೋದಿಲ್ಲ. ಆದ್ರೆ ಇವುಗಳ ಕಾಟ ಮಾತ್ರ ಅಗಾಧ. ಒಂದು ಸಣ್ಣ ಅಣುವಿಗೆ ಮನುಷ್ಯ ಇವತ್ತು ಕಂಗಾಲಾಗಿದ್ದಾನೆ" ಎಂದ ವಿಶ್ವ.

"ಜನ ಸ್ವಯಂಕೃತಾಪರಾಧ ಮಾಡಿದ ತಪ್ಪಿಗೆ ಕರೋನಾ ಬಂದು ಮೆರೀತಿದೆ ಅಂತ ನೀನು ಹೇಳ್ತಾ ಇದ್ದೀಯೇನು ವಿಶ್ವ ?" ಎಂದು ಕೇಳಿದೆ.

"ಹೌದಪ್ಪಾ, ಲೋಕಲ್ ಸಪೋರ್ಟ್ ಇಲ್ದೆ ಯಾವ ಟೆರರಿಸ್ಟೂ ಊರೊಳಗೆ ಬರೋಕೆ ಸಾಧ್ಯ ಇಲ್ಲ."

"ಆದ್ರೆ ಸರ್ಕಾರ ಕಾನೂನುಗಳು ಮಾಡಿವೆ. ಕರೋನಾ ಟೈಂನಲ್ಲಿ ಹೀಗೇ ಇರ್ಬೇಕು ಅಂತ ನಿಯಮಾವಳಿ ರಚಿಸಿದೆ" ಎಂದೆ.

"ಕಾಟಾಚಾರಕ್ಕೆ ರೂಲ್ಸ್ ಫಾಲೋ ಮಾಡಿದ್ರೆ ಪ್ರಯೋಜನ ಇಲ್ಲ. ದೇವರಿಗೆ ಕೈಮುಗಿ ಅಂದ್ರೆ ಕೆಲವರು ಸಿಂಗಲ್ ಕೈಯಲ್ಲಿ ಸೆಲ್ಯೂಟ್ ಮಾಡ್ತಾರೆ. ಭಕ್ತಿ ಅಂಬೋದು ಹೃದಯದ ಒಳಗಡೆಯಿಂದ ಗುದ್ಕೊಂಡು ಬರ್ಬೇಕು ತಿಳ್ಕೋ. ನಮ್ಮ ಜನ ಮಾಸ್ಕ್ ಎಲ್ಲಿಗೆ ಹಾಕ್ತಾರೆ ? ಕತ್ತಿಗೆ ಮಾಸ್ಕ್, ಸೊಂಟಕ್ಕೆ ಗಾಗಲ್ಸ್" ಎಂದು ನಕ್ಕ.

"ಹೌದು, ಗಾಗಲ್ಸ್‌ನ ಸೊಂಟಕ್ಕೆ ಸಿಕ್ಕಿಸಿರುವ ಅನೇಕ ಮಂದಿಯನ್ನು ನಾನು ನೋಡಿದ್ದೇನೆ. ಅಲ್ಲಿಗೇ ಯಾಕೆ ಸಿಕ್ಕಿಸ್ತಾರೆ ಅನ್ನೋದು ಮಾತ್ರ ತಿಳಿಯದು. ಬಹುಶಃ ಸೊಂಟದ ಬೆಲ್ಟನ್ನು ಕನ್ನಡಕದ ಸ್ಟ್ಯಾಂಡ್ ಎಂದು ಭಾವಿಸಿದರೋ ಏನೋ?" ಎಂದು ಬೇಸರಿಸಿದೆ.

"ಕಾಲ ತುಂಬಾ ಬದಲಾಗಿದೆ. ಮೊದಲು ಸಿಕ್ತಿದ್ದ ಪುಳಿಯೋಗರೆ ಈಗ ಎಲ್ಲಿದೆ ?" ಎಂಬುದು ವಿಶ್ವನ ಪ್ರಶ್ನೆ.

"ಆ ಪುಳಿಯೋಗರೇನ ಬದಲಾವಣೆ ಮಾಡಿ ಫ್ರೈಡ್‌ರೈಸ್ ಮಾಡಿಟ್ಟಿದ್ದಾರೆ" ಎಂದೆ.

"ಸ್ವಲ್ಪ ಬದಲಾವಣೆ ಅಲ್ಲ, ಸಿಕ್ಕಾಪಟ್ಟೆ ಬದಲಾವಣೆ. ಮುಖ್ಯವಾಗಿ ಕಳ್ಳೇಬೀಜಾನೇ ಮಿಸ್ಸಿಂಗು. ಫ್ರೈಡ್‌ರೈಸ್‌ಗೆ ಅಜಿನೋಮೋಟೊ, ಸ್ಪ್ರಿಂಗ್ ಆನಿಯನ್ಸು, ಮಶ್ರೂಮ್ಸು ಹಾಕಿ 'ಚೀನೀ ಸ್ಪೆಷಲ್ ಫ್ರೈಡ್‌ರೈಸ್' ಅಂತ ಕಲಬೆರಕೆ ಮಾಡಿ ಜನರ ನಾಲಿಗೆಗೆ ಹೊಸರುಚಿ ಹತ್ತಿಸಿದ್ದಾರೆ" ಎಂದು ಬೇಸರಿಸಿದ.

ವಿಶ್ವ ಹೇಳಿದ್ದು ನಿಜ ಎನ್ನಿಸಿತು. ಚೀನೀಯರಿಗೇ ಗೊತ್ತಿಲ್ಲದ ಹೊಸ ರುಚಿಗಳನ್ನ ನಮ್ಮ ಜನ ಕಂಡು ಹಿಡಿದಿದ್ದಾರೆ. ಇಂಥ ಫ್ರೈಡ್‌ರೈಸ್ ಚೀನಾದಲ್ಲಿಯೂ ಸಹ ಸಿಗುವುದಿಲ್ಲವೇನೋ ! ವಿಶ್ವ ಎಚ್ಚರಿಕೆ ನೀಡುವ ಧ್ವನಿಯಲ್ಲಿ ಮಾತಾಡಿದ.

"ಒಂದು ಚೆನ್ನಾಗಿ ತಿಳ್ಕೋ. ನಮ್ಮ ಸಂಪ್ರದಾಯಾನ ನಾವು ಬಿಡಬಾರ್ದು. ಮನೆಗೆ ಬರ್ತಾನೇ ಕೈ ಕಾಲು ತೊಳ್ಕೊಂಡು ಬನ್ನಿ ಅಂತ ದೊಡ್ಡವರು ಹೇಳ್ತಾ ಇದ್ರು.

ದೂರದ ಪ್ರಯಾಣ ಮುಗಿಸಿ ಬಂದಾಗ ಸ್ನಾನ ಮಾಡಿ ಅಂತ ಹೇಳ್ತಾ ಇದ್ರು. ಇವನ್ನೆಲ್ಲ ಮೂಢನಂಬಿಕೆಗಳು ಅಂತಿದ್ದ ಜನಕ್ಕೆ ಕರೋನಾ ಪಾಠ ಕಲಿಸಿದೆ" ಎಂದು ಗೊಣಗಿದ.

"ಎಲ್ಲಾ ಸರಿ ವಿಶ್ವ, ಮದ್ಯಪ್ರಿಯರ ಗತಿ ಏನು ? ಬಾರುಗಳೆಲ್ಲಾ ಕ್ಲೋಸ್ ಆಗಿವೆ. ಜನಕ್ಕೆ ಕುಡಿಯೋದೇ ಮರೆತುಹೋಗಿದೆಯಲ್ಲ ?" ಅಂದೆ.

"'ಬಾರು ಬಾರು ದೇಖೊ, ಹಜಾರು ಬಾರು ದೇಖೊ' ಅಂತ ನಗರದ ರಸ್ತೆಗಳಲ್ಲಿ ಬಾರುಗಳು ಮೆರೀತಾ ಇದ್ವು. ಈಗ ಒಂದು ನೊಣ ಕೂಡ ಬಾರ್‌ಗೆ ಹೋಗ್ತಾ ಇಲ್ಲ. ಜನರಿಗೆ ಕೋಟ್ಯಂತರ ರೂಪಾಯಿ ಉಳಿತಾಯ ಆಗ್ತಾ ಇದೆ. ಮೂರಡಿ ಅಂತರ ಇಟ್ಕೋಬೇಕು ಅಂತ ಸರ್ಕಾರ ನಮಗೆ ಹೇಳ್ಕೊಡ್ಬೇಕಾ ? ಇದನ್ನೇ ನಿಮ್ಮಜ್ಜಿ ಹಳೇ ಕಾಲದಲ್ಲಿ ಮಾಡ್ತಾ ಇರ್ಲಿಲ್ವಾ ?" ಎಂದು ಪ್ರಶ್ನಿಸಿದ.

ಹೌದು ನಮ್ಮಜ್ಜಿ ಯಾರ್‍ನೂ ಮುಟ್ಟಿಸ್ಕೋತಾ ಇರ್ಲಿಲ್ಲ. ದೂರದಿಂದ ಮಾತಾಡ್ತಾ ಇದ್ಲು. ಯಾರಾದ್ರೂ ಏನಾದ್ರೂ ವಸ್ತುಗಳನ್ನ ತಂದು ಕೊಟ್ಟರೂ ಅದನ್ನು ಕೆಳಗಡೆ ಇಡಬೇಕಿತ್ತು. ಅನಂತರ ನೀರು ಚಿಮುಕಿಸಿ ತೆಗೆದುಕೊಳ್ಳುತ್ತಿದ್ದರು.

"ನಮ್ಮಲ್ಲಿ ಕರೋನಾ ಸಣ್ಣಗೆ ಶುರುವಾಗಿ ಜಾಸ್ತಿ ಆಗಿದ್ದು ಹೇಗೆ ಗೊತ್ತಾ? ಜನಕ್ಕೆ ಬುದ್ಧಿ ಇಲ್ಲ. ನಮಗೆ ಕಾಯಿಲೆ ಬರೊಲ್ಲ ಅಂತ ಪ್ರತಿಯೊಬ್ಬರೂ ತಿಳ್ಕೊಂಡಿರ್ತಾರೆ. ಆದರೆ ಆಸ್ಪತ್ರೆ ಸೇರಿದ ಮೇಲೆ ಜ್ಞಾನೋದಯ ಆಗುತ್ತೆ. ಈಗ್ಲಾದ್ರೂ ಬದಲಾಗು ಗೆಳೆಯಾ. ಮುಖಕ್ಕೆ ಮಾಸ್ಕ್ ಹಾಕ್ಕೋ, ಕೈಗೆ ಸ್ಯಾನಿಟೈಸರ್ ಹಾಕ್ಕೋ. ಅನಗತ್ಯವಾಗಿ ರಸ್ತೆಗೆ ಬರಬೇಡ. ಯಾರ್‍ನೂ ಮುಟ್ಟಿ ಮಾತಾಡಿಸಬೇಡ. ತಬ್ಕೊಳ್ಳೋಕಂತೂ ಹೋಗ್ಲೇಬೇಡ" ಎಂದು ವಿಶ್ವ ಖಡಕ್ ಎಚ್ಚರಿಕೆ ಕೊಟ್ಟ. ■

---

## ಆಚೆನಾಡಿದ್ದು

**ನಾಲ್ಕು ವರ್ಷದ ಪುಟ್ಟ ಬೆಳಿಗ್ಗೆ ಏಳುವ ಹೊತ್ತಿಗೆ ಅಪ್ಪ ಆಫೀಸಿನ ಕೆಲಸದ ನಿಮಿತ್ತ ದೂರದೂರಿಗೆ ಹೊರಟುಬಿಟ್ಟಿದ್ದ.**

**"ಅಪ್ಪ ಬೇಕೂ" ಅಂತ ಪುಟ್ಟ ರಚ್ಚೆ ಹಿಡಿದ. ಪುಟ್ಟನ ಅಮ್ಮ, "ಅಪ್ಪ ಆಚೆನಾಡಿದ್ದೇ ಬಂದುಬಿಡ್ತಾರೆ ಪುಟ್ಟ, ಬರ್ತಾ ನಿಂಗೆ, ಅಕ್ಕಂಗೆ ಚಾಕಲೇಟು, ಆಟದ ಸಾಮಾನು ಎಲ್ಲ ತರ್ತಾರೆ" ಅಂತ ರಮಿಸಿದಳು. ಆಚೆನಾಡಿದ್ದು ಅಂದ್ರೆ ಅರ್ಥವಾಗದ ಪುಟ್ಟ ಮತ್ತಷ್ಟು ಹಟ ಹಿಡಿದ. "ಅಪ್ಪ ಯಾವಾಗ ಬರೋದು?" ಪೇಚಿಗೆ ಸಿಕ್ಕ ಅಮ್ಮನನ್ನು ನೋಡಿ, ಏಳು ವರ್ಷದ ಜಾಣ ಪುಟ್ಟಿ ತಮ್ಮನನ್ನು ಓಲೈಸಿದಳು, "ಪುಟ್ಟಾ, ನೀನು ಇವತ್ತು ರಾತ್ರಿ ಮಲ್ಕೊಂಡೆದ್ದು, ಮತ್ತೆ ಮಲ್ಕೊಂಡೆದ್ದು, ಮತ್ತೆ ಮಲ್ಕೊಂಡೆದ್ದ ಮೇಲೆ ಅಪ್ಪ ಬಂದ್ಬಿಟ್ಟಿರ್ತಾರೆ". ಅಪ್ಪ ಬರೋದು ಯಾವಾಗ ಅಂತ ಅರ್ಥವಾಗಿ ಪುಟ್ಟ ಚಪ್ಪಾಳೆ ತಟ್ಟಿದ !**

**ನಳಿನಿ ಸೂರ್ಯಪ್ರಕಾಶ್**

# ಸಂಗೀತಗಾರರು – ಹಾಸ್ಯ ಪ್ರಸಂಗಗಳು

● **ಎಸ್. ಶಶಿಧರ್**

ಒಮ್ಮೆ ಅರಿಯಾಕುಡಿ ರಾಮನುಜ ಅಯ್ಯಂಗಾರ್ ಅವರ ಕಛೇರಿಯನ್ನು ಮೈಸೂರಿನಲ್ಲಿ ಏರ್ಪಡಿಸಲಾಗಿತ್ತು. ತಮ್ಮ ಆಪ್ತರಾದ ಮೈಸೂರು ವಾಸುದೇವಾಚಾರ್ಯರ ಮನೆಯಲ್ಲಿಯೇ ಉಳಿದುಕೊಂಡಿದ್ದರು. ಮಧ್ಯಾಹ್ನದ ವೇಳೆ ಅಡುಗೆಮನೆಯಿಂದ ಸಾರಿನ ಗಮಗಮ ವಾಸನೆ ಬರುತ್ತಿತ್ತು. ಅದು ಒಳ್ಳೆ ಪೆರುಂಗಾಯಂನ ಸಾರು. ತಮಿಳಿನಲ್ಲಿ ಪೆರುಂಗಾಯಂ ಅಂದರೆ ಇಂಗು ಎಂದರ್ಥ. ಅರಿಯಾಕುಡಿ ಹಾಗೂ ಆಚಾರ್ಯರು ಸೇರಿದರೆಂದರೆ ಅವರ ಮಾತುಗಳೆಲ್ಲವೂ ಸಂಗೀತದಂತೆಯೇ. ಆಚಾರ್ಯರು ಅಯ್ಯಂಗಾರರನ್ನು ಊಟಕ್ಕೆ ಕರೆದೊಡನೆಯೇ ಅಯ್ಯಂಗಾರರು “ಗಮಗಮ” ಆದ ಮೇಲೆ “ ಸರಿಸರಿ” ಇರಲೇಬೇಕು ಎಂದು ಎದ್ದು ಊಟದ ಮನೆ ಕಡೆ ಹೊರಟರು.

ದೇವಸ್ಥಾನಗಳಲ್ಲಿ ನಡೆಯುವ ಕಛೇರಿಗಳಲ್ಲಿ ಇದು ಸರ್ವೇಸಾಮಾನ್ಯ. ಕಛೇರಿ ಮುಗಿದ ಮೇಲೆ ಕಲಾವಿದರನ್ನು ವೇದಿಕೆಯಿಂದ ಪೂಜಾಸ್ಥಾನಕ್ಕೆ ಕರೆಯುವ ಪರಿ ವಿಶಿಷ್ಟವೆನಿಸುತ್ತದೆ. “ಸಾರ್, ಕಛೇರಿ ಬಹಳ ಚನ್ನಾಗಿತ್ತು, ಬನ್ನಿ ಮಂಗಳಾರತಿ ಮಾಡುತ್ತೇವೆ ಎಂದರೆ ಭಾಗವಹಿಸಿದ ಕಲಾವಿದರಿಗೆ ಹೇಗನಿಸಬೇಡ. ಒಮ್ಮೆ ಇದೇ ಪರಿಯಲ್ಲಿ ಖ್ಯಾತ ಮೃದಂಗ ವಾದಕರಾದ ಶ್ರೀ ಆನೂರು ಅನಂತಕೃಷ್ಣ ಶರ್ಮ ಅವರನ್ನು ಕರೆದಾಗ ತಕ್ಷಣ “ಯಾರಿಗೆ ಸ್ವಾಮಿ ಮಂಗಳಾರತಿ” ಎಂದು ಕೇಳಿದಾಗ ನೆರೆದಿದ್ದ ಸಭಿಕಕರೆಲ್ಲಾ ನಕ್ಕರು.

ಖ್ಯಾತ ಹಿಂದೂಸ್ತಾನಿ ಗಾಯಕಿ ಬೇಗಂ ಪರ್ವಿನ್ ಸುಲ್ತಾನ್ ಅವರ ಮೊಟ್ಟಮೊದಲ ಬಾರಿಗೆ ಮದ್ರಾಸ್‌ನಲ್ಲಿ ಕಛೇರಿ ನೀಡಿದಾಗ ಚಂಬೈ ವೈದ್ಯನಾಥ ಭಾಗವತರ್ ಅವರನ್ನು ಸಮಾರಂಭದ ಅಧ್ಯಕ್ಷತೆ ವಹಿಸಲು ಆಹ್ವಾನಿಸಲಾಗಿತ್ತು. ತಮ್ಮ ಭಾಷಣದಲ್ಲಿ ಚೆಂಬೈ ಅವರು ಹೇಳಿದ್ದು ಒಂದೇ ಸಾಲು. “ಒಂದೇ ಗಾಯಕಿಯಲ್ಲಿ ಶರೀರ ಮತ್ತು ಶಾರೀರ ಎರಡೂ ಮೈಳೈಸುವುದು ಬಹಳ ಅಪರೂಪ. ಆದರೆ ಈಕೆ ಪರ್ವಿನ್ ಸುಲ್ತಾನ ಅವರಿಗೆ ಶರೀರ ಮತ್ತು ಶಾರೀರ ಎರಡೂ ಉತ್ತಮವಾಗಿದೆ ಎಂದಾಗ ನೆರೆದಿದ್ದ ಜನಸ್ತೋಮ ಚಪ್ಪಾಳೆ ತಟ್ಟಿದರು.

ಒಮ್ಮೆ ಟೈಗರ್ ವರದಾಚಾರ್ಯರು ಒಂದು ಪಲ್ಲವಿಯನ್ನು ವಿಸ್ತಾರವಾಗಿ ಹಾಡುತ್ತಿದ್ದರು. ಮಧ್ಯದಲ್ಲಿ ಒಬ್ಬ ಆಜಾನುಬಾಹು ಕರಿಕೋಟ್, ತಲೆಗೆ ರುಮಾಲು, ಕಿವಿಗೆ ವಜ್ರದ ಓಲೆಗಳು ಇತ್ಯಾದಿ ಧರಿಸಿದವ ವೇದಿಕೆಯ ಬಳಿಗೆ ಬಂದ. ಟೈಗರ್‌ರವರು ಹಾಡುವುದನ್ನು ನಿಲ್ಲಿಸಿ ವರುಣುಮ್, ವರುಣುಮ್, ಇಪ್ಪಡಿ ವಾಂಗೋ ಎಂದು ಮುಂದಿನ ಸಾಲಿನತ್ತ ಕರೆದರು. ಕಛೇರಿಯ ನಂತರ ಟೈಗರ್ ಆಪ್ತರಾದ ಶ್ರೀ ಎಸ್.ವೈ.ಕೃಷ್ಣಾಸ್ವಾಮಿಯವರು ಟೈಗರ್ ಅವರನ್ನು ಯಾರು ಆತ, ಕಛೇರಿಯ ಮಧ್ಯದಲ್ಲಿ ಬಂದಾಗ ನೀವು ಹಾಡುವುದನ್ನು ನಿಲ್ಲಿಸಿ ಅಷ್ಟೊಂದು ಆದರದಿಂದ ಬರಮಾಡಿಕೊಂಡಿರಿ. ಅವರೇನು ಸಂಗೀತ ವಿದ್ವಾಂಸರೇ ಅಂತ ಕೇಳಿದರು. ಅದಕ್ಕೆ ಟೈಗರ್ ಅವರು ಅರೆ ಆ ಮನುಷ್ಯನಿಗೆ ಸಂಗೀತದ ಗಂಧವೇ ಇಲ್ಲ, ಆದರೆ ಕಛೇರಿಯ ನಂತರ ಭೋಜನದ ವ್ಯವಸ್ಥೆಯನ್ನು ಮಾಡಿದ್ದಾನೆ. ನೀವುಗಳೋ ಕಛೇರಿಯನ್ನು ಕೇಳಿ ಆಹಾ, ಓಹೋ, ಶಭಾಷ್ ಎಂದೆಲ್ಲಾ ಉದ್ಗರಿಸಿ ಹೊರಟು ಹೋಗುತ್ತೀರಿ, ಆ ಮನುಷ್ಯ ಇಲ್ಲದಿದ್ದರೆ ನಾವೆಲ್ಲಾ ಉಪವಾಸ ಮಲಗಬೇಕಾಗುತ್ತೆ. ಅದಕ್ಕೇ ಆ ಮನುಷ್ಯನಿಗೆ ಈ ಮರ್ಯಾದೆ” ಎಂದರು.

ಅದು 1935ನೇ ಇಸವಿ. ಆಗ ತಾನೇ ಮೈಸೂರು ಆಕಾಶವಾಣಿ ಪ್ರಾರಂಭವಾಗಿದ್ದ ದಿನಗಳು. ಆ ದಿನಗಳಲ್ಲಿ ರೇಡಿಯೋ ಒಂದು ಭೋಗವಸ್ತುವೇ ಆಗಿತ್ತು. ಕೇವಲ ಕೆಲವು ಶ್ರೀಮಂತರೆನಿಸಿಕೊಂಡಿದ್ದವರ ಮನೆಗಳಲ್ಲಿ ಮಾತ್ರ ರೇಡಿಯೋ ಉಪಕರಣವಿತ್ತು. ಇದು ಇಬ್ಬರು ಹೆಂಗಸರ ನಡುವೆ ನಡೆದ ಮಾತುಕತೆ. ಏನ್ರೀ ಅದೇನೋ ಹೊಸ ಮಿಷಿನ್ ಬಂದಿದೆಯಂತಲ್ಲ ಅದರಲ್ಲಿ ಮಾತು, ಹಾಡು, ಸಂಗೀತ ಎಲ್ಲಾ ಕೇಳಿಸುತ್ತಿದೆಯಂತೆ. ನಮ್ಮ ಮನೆಯಲ್ಲಿ ಕುಳಿತು ನಾವು ಅದೆಲ್ಲ ಕೇಳಬಹುದಂತೆ ನೀವು ನೋಡಿದ್ದೀರಾ, ಅದಕ್ಕೆ ರೇಡಿಯೋ ಅಂತ ಏನೋ ಹೆಸರಿದೆಯಂತೆ ಎಂದಾಗ ಇನ್ನೊಬ್ಬಾಕೆ ಹೌದೂರಿ ನಾನು ನೋಡಿದ್ದೇನೆ, ಮೊನ್ನೆ ಬೆಂಗಳೂರಿಗೆ ಹೋಗಿದ್ದಾಗ ನನ್ನ ಬಂಧುಗಳ ಮನೆಯಲ್ಲಿ ನೋಡಿದೆ. ಅಲ್ಲಿ ಚೌಡಯ್ಯನವರ ಪಿಟೀಲಿನ ವಾದನವನ್ನು ಕೇಳಿದೆ ಎಂದರು. ತಕ್ಷಣ ಮೊದಲನೆಯಾಕೆ ನಾನೂ ಕೇಳಿದೆ ಆಗ ಎಷ್ಟು ಸಮಯವಿರಬಹುದು ಎಂದು ಕೇಳಿದಾಗ ಎರಡನೆಯಾಕೆ ಅದು ಸುಮಾರು ಮಧ್ಯಾಹ್ನ 2 ಗಂಟೆ ಅಥವಾ ಎರಡೂವರೆ ಗಂಟೆ ಇರಬಹುದು. ಎಲ್ಲರೂ ಊಟ ಮಾಡಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಕೇಳಿದೆ ಎಂದರು. ಆಗ ಮೊದಲನೆಯಾಕೆ ಅರೇ ನಾನು ಬೆಳಗ್ಗೆ ಸುಮಾರು 10 ಗಂಟೆಗೆ ಚೌಡಯ್ಯನವರ ಪಿಟೀಲನ್ನು ಕೇಳಿದೆನಲ್ಲಾ ಆದರೆ ನೀವು ಮಧ್ಯಾಹ್ನ 2 ಗಂಟೆ ಎನ್ನುತ್ತಿದ್ದೀರ ಎಂದು ಅನುಮಾನ ವ್ಯಕ್ತಪಡಿಸಿದರು. ಆಗ ಎರಡನೆಯಾಕೆ ಹೌದು ನೀವು ಮೈಸೂರಿನಲ್ಲಿ ಬೆಳಗ್ಗೆ 10 ಗಂಟೆಗೆ ಕೇಳಿರಬಹುದು. ಆದರೆ ಅದೇ ವಾದನ ಬೆಂಗಳೂರು ತಲುಪಿರುವುದು 2 ಗಂಟೆಗೆ ಇರಬಹುದು. ರೇಡಿಯೋದಲ್ಲಿ ಕೂಡಾ ವಿಳಂಬವಾಗಬಹುದು. ಏಕೆಂದರೆ ಮೈಸೂರಿನಿಂದ ಬೆಂಗಳೂರಿಗೆ ಬರಲು ಸುಮಾರು 3–4 ಗಂಟೆಗಳಾದರೂ ಬೇಡವೇ ಎಂದು ತಮ್ಮ ವಾದವನ್ನು ಮುಂದಿಟ್ಟರು. ರೇಡಿಯೋ ಎಂದರೆ ಏನು ಎಂದು ತಿಳಿಯದ ಮುಗ್ಧರು ಇದ್ದ ಕಾಲದ ಮಾತು ಚೌಡಯ್ಯನವರ ಗಮನಕ್ಕೆ ಬಂದಾಗ ಅವರಿಗೂ ನಗು ಬಾರದಿರಲಿಲ್ಲ.

ಒಮ್ಮೆ ಹೆಸರಾಂತ ಗಾಯಕರು ಮದರಾಸಿನಲ್ಲಿ ಭವ್ಯವಾದ ಬಂಗಲೆಯನ್ನು ಕಟ್ಟಿ ಅದರ ಗೃಹಪ್ರವೇಶಕ್ಕೆ ಎಲ್ಲಾ ಖ್ಯಾತ ಸಂಗೀತಗಾರರನ್ನು ಆಹ್ವಾನಿಸಿದ್ದರು. ಮೃದಂಗ ವಿದ್ವಾನ್ ಶ್ರೀ ಟಿ.ಕೆ. ಮೂರ್ತಿಯವರು ಕೂಡಾ ಸಮಾರಂಭಕ್ಕೆ ಬಂದಿದ್ದರು. ನೆರೆದಿದ್ದವರೆಲ್ಲಾ ಆ ಗಾಯಕರನ್ನು ಅಭಿನಂದಿಸಿ ತಾವು ತಂದಿದ್ದ ಉಡುಗೊರೆಗಳನ್ನು ನೀಡಿ ಬಂಗಲೆಯನ್ನು ಹಾಗೂ ಅದಕ್ಕಿಟ್ಟಿದ್ದ ಹೆಸರಿಗೆ ಮೆಚ್ಚುಗೆಯನ್ನೂ ಸೂಚಿಸಿ ಭೂರಿ ಭೋಜನವಾದ ನಂತರ ಇನ್ನೇನು ಬೀಳ್ಕೊಡುವ ಸಂದರ್ಭದಲ್ಲಿ ಟಿ.ಕೆ.ಮೂರ್ತಿಯವರು ಆ ಗಾಯಕರನ್ನು ಕರೆದು ಎಲ್ಲರ ಸಮ್ಮುಖದಲ್ಲಿ ಕಣ್ಣಾ ನಿನ್ನ ಮನೆಯ ಬಗ್ಗೆ ಹಾಗೂ ಹೆಸರಿನ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಅದರೆ ನನಗೆ ಅನಿಸುವಮಟ್ಟಿಗೆ ನೀನು ನಿನ್ನ ಮನೆಗೆ ಪಕ್ಕವಾದ್ಯವಿಲಾಸ್ ಎಂದು ನಾಮಕರಣ ಮಾಡಬೇಕಿತ್ತು. ಕಾರಣ ನೀನು ಎಲ್ಲಾ ಕಛೇರಿಗಳಲ್ಲಿ ಪಡೆದ ಸಂಭಾವನೆಯಲ್ಲಿ ಸಿಂಹಪಾಲನ್ನು ನೀನೇ ಇಟ್ಟುಕೊಂಡು ಪಕ್ಕವಾದ್ಯದವರಿಗೆ ಕಡಿಮೆ ಕೊಡುತ್ತಲೇ ಇದ್ದೆ. ಆ ಪಕ್ಕವಾದ್ಯದವರ ಉಳಿದ ಹಣದಿಂದ ನೀನು ಇಷ್ಟು ಭವ್ಯ ಬಂಗಲೆ ಕಟ್ಟಲು ಸಾಧ್ಯವಾಯಿತು ಎಂದಾಗ ಆ ಗಾಯಕ ತಕ್ಷಣ ಅಲ್ಲಿಂದ ನುಣುಚಿಕೊಂಡರು. ■


---

ಇದೇ ರೀತಿಯ ಇನ್ನಷ್ಟು ಮತ್ತಷ್ಟು ಹಾಸ್ಯ ಪ್ರಸಂಗಗಳು ಅಡಕವಾಗಿರುವ ಕೃತಿ:
**ಸಂಗೀತಗಾರರು – ಹಾಸ್ಯ ಪ್ರಸಂಗಗಳು** – ಲೇಖಕರು ಮತ್ತು ಪ್ರಕಾಶಕರು ಎಸ್. ಶಶಿಧರ್
೪೩/೨೨೦, ಈಸ್ಟ್ ಪಾರ್ಕ್, ರಸ್ತೆ ೧೭ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬೆಂಗಳೂರು ೫೬೦ ೦೦೩

ವೃತ್ತಿರಂಗಭೂಮಿಯ ಆಭಾಸಗಳನ್ನು ವಿಡಂಬಿಸುವ

# ನಾಟಕಗಳ ಪಕ್ಷಿನೋಟ

● **ಡಾ. ಎಂ.ಎಸ್.ವಿದ್ಯಾ**




**ವೃತ್ತಿ ರಂಗಭೂಮಿಯಲ್ಲಿ ತೆರೆಯ ಹಿಂದೆ, ತೆರೆಯ ಮೇಲೆ ನಡೆಯುವ ಅನೇಕ ಹಾಸ್ಯ ರಸಪ್ರಸಂಗಗಳನ್ನು ಕುರಿತಾಗಿ ಅಧ್ಯಯನ ನಡೆಸಿ ಪ್ರೌಢಪ್ರಬಂಧ ರಚಿಸಿ ಡಾಕ್ಟರೇಟ್ ಗೌರವ ಪಡೆದ ಡಾ. ಎಂ.ಎಸ್. ವಿದ್ಯಾ ಅವರ ಪ್ರಬಂಧ ಗ್ರಂಥದಿಂದ ಆಯ್ದ ಕೆಲವು ರಸಪ್ರಸಂಗಗಳು. ಇಂಥಾ ಅನೇಕ ರಸಪ್ರಸಂಗಗಳನ್ನು ಮತ್ತು ಅಧ್ಯಯನಶೀಲ ಮಾಹಿತಿಯನ್ನೊಳಗೊಂಡ ಪ್ರಬಂಧ ಕನ್ನಡ ಸಾರಸ್ವತ ಲೋಕಕ್ಕೆ ಬಹುದೊಡ್ಡ ಕೊಡುಗೆಯಾಗಿದೆ**

ಹಾಸ್ಯ ಮನುಷ್ಯನ ಮೂಲ ಪ್ರವೃತ್ತಿಗಳಲ್ಲಿ ಒಂದು. ರಂಗಭೂಮಿಯು ಹಾಸ್ಯರಸದ ಸೃಷ್ಟಿಗೆ ಉತ್ತಮ ವೇದಿಕೆ ಒದಗಿಸಿದೆ. ವಿಲಾಸಿ ರಂಗಭೂಮಿಯಲ್ಲಿ ಪ್ರಮುಖ ನಾಟಕಕಾರರಾದ ಶ್ರೀ ಟಿ.ಪಿ.ಕೈಲಾಸಂ, ಶ್ರೀ ಶಿವರಾಮ ಕಾರಂತ ಹಾಗೂ ಶ್ರೀ ಶ್ರೀರಂಗ ಅವರುಗಳು ತಮ್ಮ ನಾಟಕಗಳ ಮೂಲಕ ವೃತ್ತಿರಂಗಭೂಮಿಯಲ್ಲಿ ನಡೆಯುತ್ತಿದ್ದ ಆಭಾಸಗಳನ್ನು ವಿಡಂಬನೆಯ ದೃಷ್ಟಿಕೋನದಿಂದ ನೋಡಿದ್ದಾರೆ. ಅದರ ಕೆಲವು ನಿದರ್ಶನಗಳು.

ಇಪ್ಪತ್ತನೆ ಶತಮಾನದಲ್ಲಿಕನ್ನಡ ನಾಟಕ ನಡೆಯುತ್ತಿದ್ದ ದಿಕ್ಕನ್ನೇ ಬದಲಾಯಿಸಿ, ಹೊಸ ರೀತಿಯ ರಚನೆಗಳಿಗೆ ಬುನಾದಿ ಹಾಕಿದವರು 'ಕರ್ನಾಟಕ ಪ್ರಹಸನ ಪ್ರಪಿತಾಮಹ' ಶ್ರೀ ಕೈಲಾಸಂ ಅವರು. ಅವರ 'ನಂ ಕಂಪ್ನಿ' ನಾಟಕವು ಬಹಳ ಪ್ರಸಿದ್ಧವಾದುದು. ಅದರಒಂದು ನೋಟ. ಈ ನಾಟಕವು ಆ ಕಾಲದಲ್ಲಿ ಪ್ರಚಲಿತವಾಗಿದ್ದ ವೃತ್ತಿರಂಗಭೂಮಿಯ ಅಣಕಕ್ಕೆ ಮೀಸಲಾದದ್ದು.ವೃತ್ತಿನಾಟಕಗಳು ಹೊಸದಾದ, ಬದಲಾಗುತ್ತಿರುವ ಜೀವನ ಪದ್ಧತಿಗೆ ಒಗ್ಗಿಕೊಳ್ಳದ ಹಳೆಯ ಜಾಡಿನಲ್ಲೇ ಸಾಗುತ್ತಿದ್ದು ಸಮಕಾಲೀನ ಪರಿಸರಕ್ಕೆ ಅಪ್ರಸ್ತುತವೆನಿಸಿದ್ದರಿಂದ ಅದನ್ನು ಲೇವಡಿ ಮಾಡುವುದಕ್ಕೆ ಈ ನಾಟಕದ ಸೃಷ್ಟಿಯಾಯಿತು. ಆ ಕಾಲದ ಸಂಗೀತ ನಾಟಕಗಳಲ್ಲಿ ಸಂಗೀತಕ್ಕೆ ಸಿಕ್ಕ ಪ್ರಾಧಾನ್ಯವನ್ನು ಅದರಿಂದ ಆಗುತ್ತಿದ್ದ ರಸಾಭಾಸಗಳನ್ನು ಅಪಭ್ರಂಶಗಳನ್ನು ಅಸ್ವಾಭಿಕತೆಗಳನ್ನು 'ನಂಕಂಪ್ನಿ' ನಾಟಕದಲ್ಲಿ ಗೇಲಿ ಮಾಡಿದ್ದಾರೆ.ಆ ಕಾಲದ ಪೌರಾಣಿಕ ನಾಟಕಗಳಲ್ಲಿ ಬಹುಮಟ್ಟಿಗೆ ಸಂಗೀತ ನಾಟಕಗಳಿದ್ದವು.ಯಾವ ಭಾಗದಲ್ಲಿ ಅಂದರೆ ಎಲ್ಲೆಂದರೆ ಅಲ್ಲಿ ಹಾಡುಗಳನ್ನು ಬಳಸುತ್ತಿದ್ದರು. ದೇವರುಗಳನ್ನೆಲ್ಲ ರಂಗದ ಮೇಲೆ ಕರೆತರುವ ನೆನಪಾಗಿ ಇರಿಸಿಕೊಂಡು ತಮ್ಮಕಾಲದ ನಾಟಕದ ಎಲ್ಲಾ ವಿಲಕ್ಷಣ ಅಂಶಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ನಂಕಂಪ್ನಿ ನಾಟಕದ ಇನ್ನೊಂದು ಹೆಸರು 'ಶೂರ್ಪನಖಾ ಕುಲವೈಭವ'.

ಪ್ರಾರಂಭ:'ಸಂಸ್ಥೆ–ನಾಟಕವಾಡುವ' 'ಕೂತ್ಕಡೆ–ಕಂಪ್ನಿ' ಸ್ಥಳ–ಥಿಯೇಟರ್. ಮಿಶ್ರಭಾಷೆ, ಕಾಲ–ಆಧುನಿಕ ಓಬಿರಾಯನ ಅಂಕ 9ರಲ್ಲಿ ಬರುವ ಅಧ್ವಾನವನದ ಸೀನ್'.

ಮಂತ್ರಿಯ ಪಾರ್ಟು ಮಾಡುವವನು ಬೈಂಡರ್ ಬುಳ್ಳಣ್ಣ. ಇನ್ನು ಸೇನಾಧಿಪತಿ ಮಾತನಾಡಲು (ಹಾಡಲು) ಹೊರಟು 'ಭೂSSವರ ಲಾಲಿಸು' ಎಂದು ಹಾಡಿದಾಗ ಅವನ ಬಾಯಿಂದ ಬರುವ ಎಂಜಲಿನ ಮುಂಗಾರಲಿ ಹರಿಯ ವರ್ಷವನ್ನು ತಾಳಲಾರದೆ ರಾಜಛತ್ರಿ ಹಿಡಿದು ನಿಂತುಕೊಳ್ಳುತ್ತಾನೆ. ಆ ಸೇನಾಪತಿ ಕತ್ತಿ ಝಳಪಿಸಿ ರಾಜನ ಮುಂದೆ ಹಾರಿದಾಗ ರಾಜ ಗಾಬರಿ! ಇತ್ತ ಸಭಾಸದ ಕಿಟ್ಟಿಯ ಪಕ್ಕದಲ್ಲಿದ್ದವ ಗಾಬರಿ, ಆಗ ಕಿಟ್ಟಿ ಹೇಳುತ್ತಾನೆ– "ಹೆದರಬೇಡ್ವಲೋ, ಹೆಣ್ಣೆಂಗ್ಸೆ! ಕತ್ತಿ ಅಲ್ಲಾ ಕಣೋ ಅದು. ಜಾಕಾಯ್ ಹಟ್ಗ. ಆ ಪ್ರೊಪ್ರೈಟರ್ ಸೇದ್‌ತಾರಲ್ಲಾ! ಆ ಸಿಗರೇಟ್ ಪ್ಯಾಕೆಟ್ಟಿನ ಸಿಲ್ವರ್ ಕಾಗ್ದಾ ಅಂಟಿಸಿರೋದು– ಆ ಆಯುಧಕ್ಕೆ!

ರಾಜನು ಚಿಂತೆಯಿಂದ ಕಾಡಿಗೆ ಹೊರಡುತ್ತಾನೆ. ಈಗ ಪ್ರಜೆಗಳೆಲ್ಲ ಅಳುವ ದೃಶ್ಯ. ಒಬ್ಬ ಸಭಿಕನು ಹಾಡು ಹೇಳುತ್ತಾ ಗಟ್ಟಿಯಾಗಿ,

'ನಾಡ ಬುಡುವುದೇ! ಭೂಪಾ! ನಾಡ ಬುಡುವುದೇ!' ಎನ್ನುತ್ತಾನೆ. ರಂಗದ ಹಿಂದೆ ಸಂಭಾಷಣೆ ನೆನಪಿಸಿಕೊಡುವ ಕಂಡಕ್ಟರ್ 'ಲೋ! ಬೆಪ್ಪ! ಬು ಅಲ್ಲ ಬಿ' ಎನ್ನುತ್ತಾನೆ. ಆಗ ಒಬ್ಬ ತಿದ್ದಕೊಂಡು 'ನಾಡ ಬುಡುವುದೇ ಭೀಪಾ' ಎನ್ನಬೇಕೆ. ರೇಗಿದ ಪ್ರಾಂಪ್ಟರು 'ಆ ಭೂ ಅಲ್ಲಕಣೋ! ಮೊದಲು ಬು ಗೆ ಬಿ ಹಾಕೋ' ಎಂದು ಹೇಳಿಕೊಟ್ಟಾಗ ಆತ ತಿದ್ದಿಕೊಂಡ.

'ನಾಡ ಬಿಡುವುದೇ ಭೀಪಾ ನಾಡ ಬುಡುವುದೇ' ಎನ್ನುತ್ತಾನೆ. ಸರಿಯಾಗಿ ತಾಲೀಮು ಮಾಡದ, ಅಕ್ಷರ ಶುದ್ಧಿಯಿಲ್ಲದ ನಟರುಗಳಿಂದ ಏನೇನು ಅನಾಹುತವಾಗಬಹುದು ಎಂಬುದು ಇಲ್ಲಿ ಸೂಚಿತವಾಗಿದೆ.

ಎರಡನೆಯ ಅಂಕದಲ್ಲಿ 'ಅಧ್ವಾನವನದ ಸೀನ್!' ಮಹಾರಾಣಿ ಮತ್ತು ಆಕೆಯ ವಿವಿಧ ಭಾಷಾ ಪ್ರದೇಶಗಳ ಸಖಿಯರು ವಿವಿಧ ಭಾಷೆಗಳಲ್ಲಿ ಹಾಡುತ್ತಾರೆ. ಕರ್ನಾಟಕ ಸಖಿ, ಹಿಂದೂಸ್ಥಾನಿ ಸಖಿ, ಅಪ್ಟುಡೇಟ್ ಸಖಿ, ಅಯ್ಯಂಗಾರ್ ಸಖಿ, ಕೇರಳ ಸಖಿ. ಅಪ್ಟುಡೇಟ್ ಸಖಿಯ ಹಾಡಂತೂ ನಗೆಯನ್ನು ಉಕ್ಕಿಸುತ್ತದೆ. ಶಾಸ್ತ್ರೀಯ ಧಾಟಿ ಸಾಹಿತ್ಯ ಇಂಗ್ಲೀಷ್ ಮಿಶ್ರಿತ.

ಏನೀ ಗಾರ್ಡನ್‌ಉ ಬಹಳ ಸಿಲ್ಲಿ  
ನೋಡಲು ನಾಟ್ ಎ ರೋಸ್ ಆರ್ ಲಿಲ್ಲಿ  
ವೇಸ್ಟ್ ಆಫ್ ಟೈಮ್ ಇನ್ ವಾಕಿಂಗ್ ಇಲ್ಲೀ  
ರಾಟನ್ ಗಾರ್ಡನ್ ಶ್ಯೂರ್‌ಲೀ  
ಫಾಲೋ ಮಿ ಮೇಡನ್‌ಗಳೆಲ್ಲಾ ವಿಲಾಯ್ತಿಗೇ?  
ಫ್ರಾಸ್ಟ್ ಅಂಡ್ ಸ್ನೋ ಅಂಡ್ ಕೋಲ್ಡ್‌ಅ ತಡೆಯದೆ  
ಫಾಗ್‌ಇನಲ್ಲಿ ಶಿವರ್‌ಉವಾ ॥

ಈ ರೀತಿಎಲ್ಲಾ ಭಾಷೆಯ ಹಾಡುಗಳೆಲ್ಲ ಆದ ಮೇಲೆ ಸಖಿಯರು ಶೋಕಿಸುತ್ತಿರುವ ರಾಣಿಯ ಹತ್ತಿರ ಹೋಗುತ್ತಾರೆ. ರಾಜನಿಲ್ಲದ್ದು ಆಕೆಯ ದುಃಖ. ಅದಕ್ಕೂ ಮತ್ತೆ ವಿವಿಧ ಭಾಷೆಗಳಲ್ಲಿ ಸಮಾಧಾನ ನಡೆಯುತ್ತದೆ.ಅಷ್ಟರಲ್ಲಿರಾಜ ಹಿಂದಕ್ಕೆ ಬಂದ ಸುದ್ಧಿ ತಿಳಿದಾಗ, 'ಈ ಸಂತೋಷದ ವಾರ್ತೆಯನ್ನು ನಾನು ಹೇಗೆ ತಾನೆ ಸಹಿಸಲಿ?' ಎಂದು ಗೋಳಾಡಿ ಸತ್ತೇ ಹೋಗುತ್ತಾಳೆ.

ಮಹಾರಾಣಿಯೂ ಮೂರ್ಛಿಸಿ ಥಟ್ಟನೆ ಬಂದ ಸಂತೋಷ ವಾರ್ತೆಯಿಂದುಂಟಾಗುವ ಹೃದಯ ಸ್ತಂಭನದಿಂದ ಮೃತಳಾಗುವಳು. ಆಗ ಸಖೀ ಕೂಟವು 'ಅಯ್ಯೋ! ನಮ್ಮ ರಾಣಿಯ ಸೇವೆಯು ಇನ್ನು ಲಭ್ಯವಿಲ್ಲದ ಮೇಲೆ ನಾವು

ಬದುಕಿತಾನೇ ಏನು ಪ್ರಯೋಜನ!'ಎಂದು ಕೆಲವರು ಬಾಕಿನಿಂದ ತಿವಿದುಕೊಂಡು ಮತ್ತೆ ಕೆಲವರು ಕುಂಡದ ಕೋಲು ಬಳ್ಳಿಗಳಿಂದ ಕುತ್ತಿಗೆಯನ್ನು ಬಿಗಿದುಕೊಂಡು ಎಲ್ಲರೂ ಮೃತರಾಗಿ ಬೀಳುವರು. ಮಂತ್ರಿ, ಸಭಾಪತಿ–ಒಟ್ಟಿನಲ್ಲಿ ಎಲ್ಲರದೂ 'ಸಾಮೂಹಿಕ ಆತ್ಮಹತ್ಯೆ!'

**ಸುಧಾರಿತ ಸುಭದ್ರೆ:**

ಆಡು ಮುಟ್ಟದ ಸೊಪ್ಪಿಲ್ಲ ಅನ್ನುವಂತೆ 'ಶಿವರಾಮ ಕಾರಂತರು' ಕೈಯ್ಯಾಡಿಸದ ಸಾಹಿತ್ಯ ಪ್ರಕಾರವಿಲ್ಲ. ಇವರು ಹಲವಾರು ವ್ಯಂಗ್ಯ ಪ್ರಧಾನ ನಾಟಕಗಳನ್ನು ರಚಿಸಿದ್ದಾರೆ.

'ನಾಟಕವೆಂಬ ನಾಟಕ' ಇದಕ್ಕೆ ಮತ್ತೊಂದು ಹೆಸರು 'ಸುಧಾರಿತ ಸುಭದ್ರೆ'. ಸುಭದ್ರಾಕಲ್ಯಾಣದ ಮೂಲಕ ವೃತ್ತಿ ನಾಟಕವೊಂದರ ಪ್ರದರ್ಶನವನ್ನು ಹಾಸ್ಯಪರವಾಗಿ ಅನುಕರಿಸಲಾಗಿದೆ. ವೃತ್ತಿರಂಗ ಭೂಮಿಯು ಅಧಃಪತನದತ್ತ ಸಾಗುತ್ತಿದ್ದಾಗ, ಅಲ್ಲಿ ಆಗುತ್ತಿದ್ದ ಆಭಾಸಗಳನ್ನು ಗಮನಿಸಿ ಗೇಲಿ ಮಾಡಿ ಬರೆದ ನಾಟಕವಿದು. ನಾಟಕಕಾರರೇ ಮುನ್ನುಡಿಯಲ್ಲಿ ಹೇಳಿರುವಂತೆ "ಇದು ಹಳೆಯ ವ್ಯವಸಾಯೀ ನಾಟಕ ಮಂಡಳಿಗಳಲ್ಲಿ ಆಡುತ್ತಿದ್ದ 'ಸಾಗ್ರಸಂಗೀತ' ನಾಟಕಗಳ ಮಾದರಿಯದು. ಅಲ್ಲಿ ಕಂಡುಬರುವ ಅನರ್ಥಗಳೆಲ್ಲವೂ ಇದೆ. ಇಲ್ಲಿನ ನಾಟಕ ಪೌರಾಣಿಕ ಕಥಾನಕವೊಂದರ ಅಣಕವಾಡ."

ನಾಟಕವನ್ನು ನೋಡಿದಾಗ ಆಗಲಿ, ಓದಿದಾಗ ಆಗಲಿ ಉತ್ತಮ ಹಾಸ್ಯ ಹೊರಹೊಮ್ಮಿ ಪ್ರೇಕ್ಷಕರನ್ನು ರಂಜಿಸುತ್ತದೆ. ಅರ್ಜುನ ಮಾರುವೇಷದಲ್ಲಿ ಬಂದು ಸುಭದ್ರೆಯನ್ನು ವರಿಸುವ ಸಂದರ್ಭವನ್ನು ನಾಟಕೀಕರಿಸಲಾಗಿದೆ. ನಾಟಕದ ಆರಂಭದಲ್ಲಿಯೇ ಪ್ರವೇಶಿಸುವ ಚಾಕರನು ಕಸಗುಡಿಸುವ ಮುನ್ನ ಕಂದವೊಂದನ್ನು ಹಾಡಿ, ಪರಮಾತ್ಮನಿಗೆ ತನ್ನ ಕೆಲಸದಲ್ಲಿ ನೆರವಾಗಲು ಬೇಡುತ್ತಾನೆ.

ಗುಡಿಸುವೆ ನಾನೂ ನೆಲವನು!
ಅಡಿಯಡೆ ಭಕುತಾವಳಿಯರು ಬರಲಾಸಮಯದೀ॥

ಆಗ ಢಂ ಎಂಬ ಶಬ್ದದೊಡನೆ ಮೇಲಿನಿಂದ ಪೊರಕೆ ಬೀಳುತ್ತದೆ. ಸೂತ್ರಧಾರನು ಈ ನಾಟಕ ಆರಿಸಿಕೊಳ್ಳುವುದಕ್ಕೆ ಕೊಡುವ ಕಾರಣವೂ ವಿನೋದಕರವಾಗಿದೆ.

"ಅದು ಯುಕ್ತವಾದ ವಿವಿಧ ಗಾನ ನರ್ತನ ಟ್ರಾನ್ಸ್‌ಫರುಗಳಿಂದ ಕೂಡಿರುವುದಷ್ಟೆ ಅಲ್ಲ ಇದು ಪೌರಾಣಿಕ ನಾಟಕವೇ, ಇಲ್ಲವೇ ಸಾಮಾಜಿಕವೇ ಎಂಬಷ್ಟು ರಚನಾ ಚಮತ್ಕೃತಿಯುಳ್ಳದ್ದಾಗಿದೆ." ಎನ್ನುವುದರಲ್ಲಿ ಕಂಪನಿ ನಾಟಕಗಳಲ್ಲಿ ಪೌರಾಣಿಕ, ಸಾಮಾಜಿಕ ವಸ್ತುಗಳು ಬೆರಕೆಯಾಗಿರುವ ರೀತಿಯನ್ನು ಗೇಲಿ ಮಾಡುತ್ತಿದೆ. ಇರುವ ಹಾಸ್ಯ ಸಾಲದೆಂಬಂತೆ ವಿದೂಷಕ ಪಾತ್ರವನ್ನೂ ಸೃಷ್ಟಿಸಲಾಗಿದೆ. ಕೊನೆಯ ದೃಶ್ಯದಲ್ಲಿ ಅರ್ಜುನನು, ಬಲರಾಮಕೃಷ್ಣರನ್ನು ಎದುರಿಸಲು ಬಿದಿರುಕೋಲನ್ನೇ ಖಡ್ಗವಾಗಿ ಮಾಡಿಕೊಂಡು ದೂರದಿಂದಲೇ ತಿರುಗಿಸಿ ಎಲ್ಲರನ್ನೂ ಸಾಯಿಸುತ್ತಾನೆ. ಅದನ್ನು ನೋಡಿದ ವಿದೂಷಕನು "ಅಬ್ಬಾ, ನಾನು ಮುಂದಕ್ಕೆ ಹೋಗಲಾರೆ. ಅವನ ಪರಾಕ್ರಮವೇ! ದೂರದಿಂದಲೇ ಸತ್ತು ಬಿಡುವೆನು" ಎಂದು ಸಾಯುತ್ತಾನೆ.

ಬಲರಾಮನ ಮರಣಕ್ಕಾಗಿ ಸುಭದ್ರೆ ಅಳುತ್ತಿದ್ದರೆ, ಅವನೆದ್ದು ತಾನು ಹಾಡನ್ನು ಹೇಳುವವರೆಗೂ ಸಾಯಲಾರೆ ಎಂದು ಹಾಡಿ ಸಾಯುತ್ತಾನೆ. ಮತ್ತೆ ಜನ 'ಒನ್ಸ್ ಮೋರ್' ಎಂದು ಕೂಗಿದಾಗ ಸತ್ತವನು ಎದ್ದು ಹಾಡಿ ಮತ್ತೆ ಸಾಯುತ್ತಾನೆ.

ಇಡೀ ನಾಟಕವು ವೃತ್ತಿ ನಾಟಕಗಳಲ್ಲಿ ಆಗುವ ಅನಾಹುತಗಳನ್ನೇ ಪೋಣಿಸಿ ಹೆಣೆದಂತಿದೆ.

**ಸಂಪುಷ್ಟ ರಾಮಾಯಣ:**

ಅತ್ಯಂತ ಬುದ್ಧಿವಂತ ನಾಟಕಕಾರರೆನಿಸಿಕೊಂಡ, ನಾಟಕದ ವಸ್ತು, ಶೈಲಿಗಳಲ್ಲಿ ವಿಭಿನ್ನತೆಯನ್ನು ಆರಿಸಿಕೊಂಡ 'ಶ್ರೀರಂಗರು' 'ನಗೆಗಾಗಿ ನಗೆ' ಎಂಬ ನಾಟಕಗಳನ್ನು ರಚಿಸಿರುವುದು ಕಡಿಮೆ. ಅವುಗಳಲ್ಲಿ ಒಂದು 'ಸಂಪುಷ್ಟ ರಾಮಾಯಣ'.

ಈ ನಾಟಕವು ನಾಟಕ ಪ್ರದರ್ಶನದ ಮುಂಚೆ ನಡೆಸುವ ತಾಲೀಮಿನ ಪ್ರಸಂಗವೊಂದರ ವಿಡಂಬನೆ. ಕೈಲಾಸಂ ಅವರು ನಂಕಂಪ್ನಿ ನಾಟಕದ ಮೂಲಕ ವೃತ್ತಿ ನಾಟಕ ಪ್ರದರ್ಶನವೊಂದರ ವ್ಯಂಗ್ಯಗಳನ್ನು ಪ್ರೇಕ್ಷಕರ ಮುಂದಿಟ್ಟರೆ, 'ಸಂಪುಷ್ಟ ರಾಮಾಯಣ'ದ ನಾಟಕದ ರಿಹರ್ಸಲ್‌ನಲ್ಲಿ ನಡೆಯುವ ಗೊಂದಲಗಳನ್ನು ಹಾಸ್ಯದ ಮುಖಾಂತರ ಚಿತ್ರಿಸುತ್ತಾರೆ. ಕತೆಗಿಂತ ಸಂದರ್ಭ ಮತ್ತು ಮಾತುಗಳನ್ನು ಅವಲಂಬಿಸಿ ಇಲ್ಲಿನ ಹಾಸ್ಯ ಹೊಮ್ಮಿದೆ. ರಾಮಾಯಣಕ್ಕೆ ಸಂಬಂಧಪಟ್ಟ ಈ ರಿಹರ್ಸಲ್‌ನಲ್ಲಿ ಬರುವಅವಿದ್ಯಾವಂತ ನಟರ ಮೂರ್ಖತನಕ್ಕೂ, ನಾಟಕದ ಪಾಂಡಿತ್ಯಪೂರ್ಣ ಶೈಲಿಗೂ ಇರುವ ವೈರತ್ವನ್ನು ತೋರಿಸಲಾಗಿದೆ. ದಶರಥನ ಪಾತ್ರ ವಹಿಸಿರುವವನಿಗೆ ಮನೆಯ ತಾಪತ್ರಯ. ಮ್ಯಾನೇಜರ್ ಅವನಿಗೆ ದಶರಥನ ಮಾತುಗಳನ್ನು ಅಭ್ಯಾಸ ಮಾಡಲು ಹೇಳುತ್ತಿದ್ದಾರೆ. ಅವನು 'ಮಜ್ವಾವನಹೀಜಾನಾಕೀ ನಹಿ ಆನಾ' ಎಂಬ ಮಾತು ಹಿಂದಿ ಭಾಷೆಯ ಸಂಭಾಷಣೆಯಂತೆ ಹೇಳಿ ಮ್ಯಾನೇಜರನಿಗೆ ಸಿಟ್ಟು ಬರುತ್ತದೆ. ನಂತರ ಪರೀಕ್ಷಿಸಿದಾಗ ಅದು "ಮಜ್ಜೀವನಾಜಾನಕೀ ನಯನ" ಎಂದು ತಿಳಿದುಬರುತ್ತದೆ. ನೀರಿಳಿಯದ ಗಂಟಲಲಿ ಕಡುಬುತುರುಕಿದಂತೆ ಅಶಿಕ್ಷಿತರ ಬಾಯಲ್ಲಿ ಈ ರೀತಿಯ ಪ್ರೌಢ ಸಂಭಾಷಣೆಗಳನ್ನು ಅರ್ಥ ವಿವರಿಸದೆ ಹೇಳಿಸಿದರೆ ಆಗುವ ಪಾಡನ್ನು ಈ ನಾಟಕ ಹಾಸ್ಯಮಯವಾಗಿ ವಿಡಂಬಿಸುತ್ತದೆ. ಕಂಪನಿಯ ಮ್ಯಾನೇಜರನಅಸಹಾಯಕತೆ, ನಟರ ಅಶಿಸ್ತು, ಪ್ರೇಕ್ಷಕರನ್ನು ಕುರಿತ ಅಸಡ್ಡೆ ಇದೆಲ್ಲವನ್ನೂ ಹಾಸ್ಯಮಯವಾಗಿ ವಿಡಂಬಿಸುವ ಈ ಚಿಕ್ಕ ನಾಟಕ ಶ್ರೀರಂಗರ ನಿರ್ದುಷ್ಟ ಹಾಸ್ಯಪರತೆಗೆ ಉತ್ತಮ ನಿದರ್ಶನ. ಈ ಎಲ್ಲ ನಾಟಕಗಳನ್ನು ಓದುವುದಕ್ಕಿಂತ ಪ್ರಯೋಗಿಸಿದರೆ ಅದನ್ನು ರಚಿಸಿರುವುದಕ್ಕೂ ಸಾರ್ಥಕ.

**ಶ್ರೀಕೃಷ್ಣ ಸಂಧಾನ ನಾಟಕದ ಪ್ರಯೋಗ:** ಶ್ರೀ ಅಶ್ವತ್ಥ್ ವಿರಚಿತ ಈ ನಾಟಕವು ದಶಕಗಳಿಂದ ನಾನಾ ಪ್ರದರ್ಶನಗಳನ್ನು ವಿವಿಧ ತಂಡಗಳಿಂದ ಕಂಡಿದೆ. ಪ್ರಸಿದ್ಧವಾದ ಶುದ್ಧ ಹಾಸ್ಯ ನಾಟಕವಿದು. ಅಶಿಕ್ಷಿತ ಹಳ್ಳಿ ಜನಕ್ಕೆ ನಾಟಕದ ಮೇಷ್ಟ್ರು ಪೌರಾಣಿಕ ನಾಟಕವನ್ನಾಡಿಸುವ ವಸ್ತುವನ್ನು ಈ ನಾಟಕವು ಹೊಂದಿದೆ. ಹಳ್ಳಿಯ ಜನ ತಮ್ಮ ಆಂತರಿಕ ಜಗಳಗಳನ್ನು ರಂಗದ ಮೇಲೆ ಪಾತ್ರಗಳ ಮುಖಾಂತರ ತೋರಿಸುವ ರೀತಿ, ಕ್ಲಿಷ್ಟಪದಗಳನ್ನು ಉಚ್ಚರಿಸಲಾಗದೆ, ತಾವು ಆಡುನುಡಿಗಳನ್ನು ಬಳಸುವುದು, ಇರುವ ಒಬ್ಬಳೇ ಸ್ತ್ರೀಪಾತ್ರಧಾರಿಯ ಪಕ್ಕ ಕುಳಿತುಕೊಳ್ಳಲು ಹೆಣಗಾಡುವುದು– ನಾಟಕದ ಮೇಷ್ಟ್ರು ಮಧ್ಯೆ ಅವರನ್ನು ತಿದ್ದುವುದು– ಇವೆಲ್ಲವೂ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸುತ್ತದೆ. ಇತ್ತೀಚೆಗೆ ಬಂದ ಶುದ್ಧಹಾಸ್ಯ ನಾಟಕವಿದು. ಸಾವಿರಾರು ಪ್ರದರ್ಶನಗಳನ್ನು ನೀಡಿರುವ ಉತ್ತಮ ಮನರಂಜನಾತ್ಮಕ ನಾಟಕವಿದು. ಸಾಕ್ಷರತೆಯ ಮಹತ್ವವನ್ನು ಈ ನಾಟಕ ಸಾರುತ್ತದೆ. ಇದೇ ಜಾಡಿನಲ್ಲಿ ಅವರು ರಚಿಸಿರುವ ಮತ್ತೊಂದು ನಾಟಕ 'ಸೀತಾರಾಮ ಪ್ರಾಕ್ಟೀಸ್'. ಅದು ಹಲವಾರು ಪ್ರದರ್ಶನಗಳನ್ನು ಕಂಡಿದೆ.

ಕನ್ನಡ ರಂಗಭೂಮಿ ಅಂದಿನಿಂದಲೂ ಇಂದಿಗೂ ಬಹಳ ಶ್ರೀಮಂತವಾಗಿ ರುವುದು. ಅಲ್ಲಿ ಅನೇಕ ಪ್ರಯೋಗಗಳಂತೆ ಹಾಸ್ಯ ನಾಟಕಗಳ ಪ್ರಯೋಗವೂ ನಡೆದಿದೆ. ಸದೀರ್ಘವಾದ ಪ್ರಬಂಧದಲ್ಲಿ ಡಾ. ವಿದ್ಯಾ ಅವರು ಅವುಗಳನ್ನು ಉಲ್ಲೇಖಿಸಿದ್ದಾರೆ.

■

# ಹೀಂಗ್ ಮರೆತರೆ ಹ್ಯಾಂಗಾ...

**● ಜಿ. ವಿ. ಅರುಣ**

ಮೊನ್ನೆ ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಓಡಾಡುತ್ತಿದ್ದೆ – ಏನೇನು ಕೊಳ್ಳಬೇಕು ಅಂತ ಜ್ಞಾಪಿಸಿಕೊಳ್ಳುತ್ತಾ. "ಮೊಬೈಲ್ನಲ್ಲಿ ಗುರುತು ಹಾಕಿಕೊಂಡ್ ಹೋಗಿ. ಮರೆತು ಬಂದು, ಇನ್ನೊಂದ್ಸಲ ಓಡಬೇಡಿ" ಅಂತ ಮನೆಯಿಂದ ಹೊರಡುವಾಗಲೇ ಅವಳು ಹೇಳಿದ್ದಳು; ಪ್ರತಿ ಬಾರಿ ಹೇಳುವಂತೆ.

ಅದಕ್ಕೆ ನನ್ನ ಸ್ಟ್ಯಾಂಡರ್ಡ್ ಉತ್ತರ 'ತರೋದು ನಾಲ್ಕು ಸಾಮಾನು. ಅದನ್ನೂ ಪಟ್ಟಿ ಮಾಡ್ಕೋಬೇಕಾ ಮೊಬೈಲ್ನಲ್ಲಿ! ಮನಸ್ನಲ್ಲೇ ಇಟ್ಟುಕೊಂಡು, ಜ್ಞಾಪಿಸಿಕೊಂಡರೆ ತಲೆಗೆ ಸ್ವಲ್ಪ ಕೆಲಸ ಕೊಟ್ಟ ಹಾಗೆ ಆಗುತ್ತೆ. ಆಲ್ಜಮೈರ್ಸ್ ಹತ್ತಿರನೂ ಸುಳಿಯೋದಿಲ್ಲ'.

ಇವತ್ತು ಈ ಸಂಭಾಷಣೆಗಳು ಮತ್ತೆ ನಡೆದವು. ನನ್ನ ಉತ್ತರ ಕೇಳಿ ಪ್ರತಿ ಸಲದಂತೆ ಅವಳ ಮುಖದಲ್ಲಿ ಒಂದು ಬಗೆಯ ವ್ಯಂಗ್ಯದ ನಗು ಬಂದು ಮಾಯವಾಯಿತು. ಅದರ ಅರ್ಥವನ್ನು ಈವರೆಗೂ ಡಿಸೈಫರ್ ಮಾಡೋಕ್ಕೆ ನನಗೆ ಆಗಿಲ್ಲ. ಅದಕ್ಕೆ ಒಂದು ಹೆಚ್ಚು ಮಾತು ಆಡಿಬಿಟ್ಟೆ!

'ಈ ಸಲಾನೂ ಮಾರ್ಕೆಟ್ಟಿಂದ ಏನಾದರೂ ಮರೆತು ಬಂದ್ರೆ, ನಾಳೆಯಿಂದ ಖಂಡಿತ ಮೊಬೈಲ್ನಲ್ಲಿ ಬರೆದುಕೊಂಡು ಹೋಗ್ತೀನಿ! ಆಯ್ತಾ!'

ಇದನ್ನು ಕೇಳಿದ ತಕ್ಷಣ ಖುಷಿಯಿಂದ ಅವಳ ಮುಖ ಇಷ್ಟಗಲ ಆಯ್ತು.

'ಯಾಕೆ ಇಷ್ಟೊಂದು ಖುಷಿ' ಅಂತ ಕೇಳಿದೆ.

ಅವಳು "ನಾಳೆಯಿಂದ ಜಾಸ್ತಿ ಸಾಮಾನುಗಳನ್ನು ತರೋಕ್ಕೆ ಹೇಳಬಹುದು. ಅದಕ್ಕೆ ಖುಷಿಯಾಯಿತು".

'ಅಲ್ಲ ಸಾಮಾನ್ಯವಾಗಿ ನೀನು ಹೇಳೋದು ಮೂರೋ ನಾಲ್ಕೋ ಐಟಂಗಳಲ್ವ' ಅಂದೆ.

."ಹೌದು. ಅದಕ್ಕಿಂತ ಹೆಚ್ಚು ಹೇಳಿದರೆ ನೀವು ಖಂಡಿತ ಕೆಲವನ್ನು ಮರೀತೀರಿ, ಇಲ್ಲವೇ ಇನ್ನೇನೋ ತರ್ತೀರಿ. ಅದಕ್ಕೆ ಜಾಸ್ತಿ ಹೇಳೋದಿಲ್ಲ' ಅಂದಳು.

'ಹಾಗೇನಿಲ್ಲ, ಈ ಸಲಿ ಬೇಕಾದ್ರೆ ಐದು ಸಾಮಾನುಗಳನ್ನೂ ತರ್ತೀನಿ, ನೋಡು ಬೇಕಾದ್ರೆ' ಅಂದೆ.

ಆಶ್ಚರ್ಯದಿಂದ ಬಿಟ್ಟು ಬಾಯಿಂದ ಹಾಗೇ ಸ್ವಲ್ಪ ಹೊತ್ತು ನನ್ನ ನೋಡಿ "ಹುಷಾರಾಗಿದೀರಿ ತಾನೇ..." ಅಂತ ಮುಗುಳು ನಕ್ಕಳು.

ಆ ನಗು ಸಾಕು! ಅದಕ್ಕೋಸ್ಕರ ನಾನು ಏನು ಬೇಕಾದರೂ ಮಾಡಲು ತಯಾರಾಗಿದ್ದೆ. ಬಹುಶಃ ಸೀಸರ್, ಅಂಟನಿ ಇವರೆಲ್ಲರೂ ಕ್ಲಿಯೋಪಾತ್ರಳ ಇಂಥ ಮುಗುಳ್ನಗೆಗೆ ಹಾಗೆ ಮಾಡ್ತಾಇದ್ದರೋ ಏನೋ!

ಅವಳು ಹೇಳಿದ ಐದು ಸಾಮಾನುಗಳನ್ನೂ ಅವುಗಳನ್ನು ಎಷ್ಟು ತರಬೇಕು ಎನ್ನುವುದನ್ನೂ ನಾನು ಗಿಣಿಪಾಠ ಒಪ್ಪಿಸಿದೆ. ಅವಳಿಗೆ ಖುಷಿಯಾಯಿತು. ಬಟ್ಟೆ ಚೀಲ ಕೊಡುತ್ತಾ "ಬೇಗ ಬಂದುಬಿಡಿ" ಅಂತ ಒಳಗಡೆ ಹೋದಳು.

ನಾನು ಬೇಗ ಬೇಗ ಹೆಜ್ಜೆ ಹಾಕುತ್ತಾ, ರಸ್ತೆ ತಿರುವಿನ ನಂತರ ನಿಂತು, ಜೇಬಿನಿಂದ ಮೊಬೈಲ್ ತೆಗೆದೆ. ಅದರಲ್ಲಿ ನೋಟ್ಸ್ ತೆರೆದು, 'ದಿನಸಿ' ಅಂತ ಶೀರ್ಷಿಕೆ ಹಾಕಿದೆ. ಅದರಡಿ ಅವಳು ಹೇಳಿದ ಅರ್ಧ ಕೆಜಿ ..., ಒಂದು ಕೆಜಿ ... ಇತ್ಯಾದಿ ಟೈಪ್ ಮಾಡಿದೆ. ಆದರೆ ಐದನೇ ಸಾಮಾನು ನೆನಪಿಗೆ ಬರಲಿಲ್ಲ! ಹಾಗೆ ಮೊಬೈಲ್ ಹಿಡಿದುಕೊಂಡೆ ಮೆಲ್ಲಗೆ ಹೆಜ್ಜೆ ಹಾಕಿದೆ.

ಅಂಗಡಿ ಹತ್ತಿರ ಬರುತ್ತಿದ್ದ ಹಾಗೆ ಏನೋ ಹೊಳೆಯಿತು.'ಸಾ... "ಸಂಥಿಂಗ್" ಸಣ್ಣದು'. ಸರಿ, ಅದನ್ನೇ ಮೊಬೈಲ್ ಪಟ್ಟಿಯಲ್ಲಿ ಬರೆದುಕೊಂಡೆ.

ಅಂಗಡಿಯೊಳಕ್ಕೆ ಹೋಗಿ, ಮೊಬೈಲ್ ತೆಗೆದು ನಿಧಾನವಾಗಿ ಒಂದೊಂದೇ ಓದಲು ತೊಡಗಿದೆ.ಅಂಗಡಿ ಯಜಮಾನರು "ಪಟ್ಟಿ ಕೊಡಿ ಸರ್ ಇಲ್ಲಿ" ಅಂತ ನನ್ನ ಫೋನ್ ಇಸ್ಕೊಂಡು, ಅಲ್ಲ ಕಿತ್ತುಕೊಂಡು, ಪಟಪಟ ಅಂತ ಹುಡುಗನಿಗೆ ಸಾಮಾನು ತೆಗೆದಿಡಲು ಹೇಳಿದ.

"ಇದೇನು ಸಾರ್, ಸಾ... ಸಣ್ಣದು" ಅಂತ ಕೇಳಿದ. ನಾನು ತಲೆ ಕೆರೆದುಕೊಂಡು "ಅದೂ..." ಅನ್ನುವಷ್ಟರಲ್ಲಿ, ಅಂಗಡಿಯ ಹುಡುಗ "ಸಾಸುವೆ ಸಣ್ಣದು" ಅಂದ. ಅಂಗಡಿ ಯಜಮಾನರು ನನ್ನ ಮುಖ ನೋಡಿದ. ನನಗೆ ಖುಷಿಯೋ ಖುಷಿ! "ಹೌದು ಹೌದು" ಅಂದೆ.

ಅಂಗಡಿ ಹುಡುಗ "ಎಷ್ಟು ಕೊಡಲಿ ಸಾರ್"ಅಂತ ಕೇಳಿದ.

"ಐನೂರು ಗ್ರಾಂ ಕೊಡಪ್ಪ" ಅಂದೆ.

"ಐನೂರಾ! 50 ಗ್ರಾಂ ಇರಬೇಕು ಸಾರ್. ನೂರು ಗ್ರಾಂ ಪ್ಯಾಕೆಟ್ಟೇ ಲಾಸ್ಟು" ಅಂತ ಹೇಳಿ, ನನ್ನ ಉತ್ತರಕ್ಕೂ ಕಾಯದೆ, ಅದನ್ನು ತೆಗೆದು ಜೋಡಿಸಿಕೊಂಡ.

ಅಷ್ಟರಲ್ಲಿ ಅಂಗಡಿಯ ಯಜಮಾನರು "ಸಾರ್, ಒಟ್ಟು ... ಆಯ್ತು. ಕ್ಯಾಶೋ, ಕಾರ್ಡೋ..." ಅಂದರು.

"ಕಾರ್ಡು..." ಅಂತ ತೆಗೆದು ಕೊಟ್ಟೆ. ಅವರು ಒತ್ತಿ ಕೊಟ್ಟ ಮಿಷಿನ್ನಲ್ಲಿ ನನ್ನ ಪಿನ್ ಹಾಕಿ ಹಿಂದಕ್ಕೆ ಕೊಟ್ಟೆ.

"ಇವತ್ತು ಇಂಟರ್ನೆಟ್ ತುಂಬಾ ನಿಧಾನವಾಗಿದೆ..." ಎಂದು ಅದನ್ನು ತಮ್ಮ ಟೇಬಲ್ ಮೇಲೆ ಇಟ್ಟುಕೊಂಡರು.

ನಾನು ಐದೂ ಸಾಮಾನುಗಳನ್ನು ಚೀಲಕ್ಕೆ ಹಾಕಿಸಿಕೊಂಡು ಬೇಗಬೇಗ ಮನೆ ಕಡೆ ಹೆಜ್ಜೆ ಹಾಕಿದೆ. ನಾನು ಮಾಡಿದ ಸೂಪರ್ ಪ್ಲಾನ್ ಎಷ್ಟು ಚೆನ್ನಾಗಿತ್ತು. ಇವಳು ನಾಳೆಯಿಂದ ಪಟ್ಟಿ, ನೋಟ್ಸು ಅಂತ ಹೇಳಲೇ ಬಾರದು ಹಾಗೆ ಮಾಡಿದೀನಿ ಅಂತ ಸಂತೋಷದಿಂದ ಹೆಜ್ಜೆ ಹಾಕಿದೆ.

ಆಶ್ಚರ್ಯ, ಮನೆ ಮುಂದೆ ನನ್ನ ಮಂದಸ್ಮಿತ ಮುಖಾರವಿಂದದ ಹೆಂಡತಿ ನನಗೆ ಕಾಯುತ್ತಾ ನಿಂತಿದ್ದಾಳೆ!

"ಎಲ್ಲ ಸಾಮಾನೂ ಮರೀದೆ ತಂದ್ರಾ...?"

"ಹೂಂ ಕಣೆ. ಎಲ್ಲಾ ಐದು ಸಾಮಾನುಗಳು ಚೀಲದಲ್ಲಿದೆ ನೋಡು. ಏನನ್ನೂ ಮರ್ತಿಲ್ಲ. ನೀನು ಸುಮ್ಮನೆ ಪಟ್ಟಿ ಬರೆದುಕೊಳ್ಳಿ, ಮೊಬೈಲ್ನಲ್ಲಿ ನೋಟ್ಸ್ ಹಾಕಿಕೊಳ್ಳಿ

ಅಂತ ಹೇಳ್ತಿದ್ದೆ"  ಎಂದು ಹುಸಿ ಮುನಿಸು ತೋರಿದೆ.

"ಒಳ್ಳೆದಾಯ್ತು, ಕೂತ್ಕೊಳ್ಳಿ, ಬಿಸಿಬಿಸಿ ಕಾಫಿ ತರ್ತೀನಿ" ಅಂತ ಒಳಗೆ ಹೋಗಿ ಕಾಫಿ ತಂದು ಕೊಟ್ಟಳು.

ಅವಳಿಗೆ ನಿಜವಾಗಿ ಖುಷಿಯಾಗಿದೆ ಅನ್ನುವುದು ನನಗೆ ಗ್ಯಾರೆಂಟಿ ಆಯ್ತು.

"ನಾಳೆಯಿಂದ ಅಂಗಡಿಗೆ ಹೋಗುವಾಗ ನಾನೂ ನಿಮ್ಮ ಜೊತೆ ಬರ್ತೀನಿ" ಅಂದಳು.

"ಯಾಕೆ ಇದ್ದಕ್ಕಿದ್ದ ಹಾಗೆ ಈ ನಿರ್ಧಾರ?"  ಅಂದೆ.

"ಯಾಕೂ ಇಲ್ಲ, ಕಾಫಿ ಕುಡಿದ ಮೇಲೆ ವಾಪಸ್ ಅಂಗಡಿಗೆ ಹೋಗಿ. ಅಂಗಡಿ ಯಜಮಾನರು ಫೋನ್ ಮಾಡಿದ್ರು. ನಿಮ್ಮ ಮೊಬೈಲು, ಕಾರ್ಡು ಎರಡು ಅವರ ಹತ್ರಾನೆ ಇದೆಯಂತೆ. ಹೋಗಿ  ತೆಗೆದುಕೊಂಡು ಬನ್ನಿ."  ಎಂದು ನಗುತ್ತಲೇ ಹೇಳಿದಳು. ಜೊತೆಗೆ "ಹಾಗೆ ಐದನೇ ಐಟಂ ಸಾಸಿವೆ ... ಸಣ್ಣದು ಹಿಂದಕ್ಕೆ ಕೊಟ್ಟು ಅರ್ಧ ಕೆಜಿ ಸಣ್ಣ ಸಾಬುದಾನ ತೆಗೆದು ಕೊಂಡು ಬನ್ನಿ, ಪಾಯಸಕ್ಕೆ." ಎಂದು ಮುಗುಳು ನಕ್ಕಳು.

ಏನೇ ಹೇಳಿ, ನನ್ನ ಹೆಂಡತಿ ತುಂಬಾ ಒಳ್ಳೆಯವಳು. ಸ್ವಲ್ಪಾನು ಕೋಪ ಮಾಡಿಕೊಳ್ಳುವುದಿಲ್ಲ.  ನಾನು ಮರೆತು ತಪ್ಪು ಮಾಡಿದಾಗ ಅವಳ ಕಣ್ಣಲ್ಲಿ ಮಿಂಚಿ, ಮುಖದ ಮೇಲೆ ಮೂಡುತ್ತಲ್ಲ ಆ ಮುಗುಳ್ನಗು, ಅದಕ್ಕೋಸ್ಕರ ನಾನು ಕೆಲವು ಸಲ ಬೇಕು ಅಂತಾನೆ ಮರೆತ ಹಾಗೆ ನಟನೆ ಮಾಡ್ತೀನಿ. ಅನೇಕ ಸಲ ನಿಜವಾಗಲೂ ಮರ್ತಿರ್ತೀನಿ! ■

---

## ಅವಸರ ಯಾರಿಗೆ?

ಪುಟ್ಟಿ ಓಡಿದಾಗಲೆಲ್ಲಾ, ಮಗಳೆಲ್ಲಿ ಬಿದ್ದುಬಿಟ್ಟಾಳೋ ಅಂತ ಅಪ್ಪ ಎಚ್ಚರಿಸ್ತಿದ್ದ, "ನಿಧಾನವಾಗಿ ಓಡಾಡಮ್ಮಾ, ಏನವಸರ?". ಅವತ್ತು ಪುಟ್ಟಿ ಅಪ್ಪನ ಜೊತೆ ಮನೆಯ ಹತ್ತಿರವಿದ್ದ ಪಾರ್ಕಿಗೆ ಹೋಗಿದ್ದಳು. ಆಟವಾಡ್ತಾ ಪುಟ್ಟಿಯ ಚಪ್ಪಲಿ ಕಿತ್ತುಹೋಯ್ತು. ಜಾರು ಬಂಡೆ, ಉಯ್ಯಾಲೆ ಎಲ್ಲಾ ಮುಗಿದಮೇಲೆ, ಸುಮಾರು ಒಂದು ಕಿ.ಮೀ ದೂರವಿರುವ ಮನೆಗೆ ಮುದ್ದಿನ ಮಗಳನ್ನು ಬರಿಗಾಲಿನಲ್ಲಿ ನಡೆಸಿಕೊಂಡು ಹೋಗಲು ಮನಸ್ಸಾಗದೇ, ಅಪ್ಪ ತನ್ನ ಐದು ವರ್ಷದ, ಇಪ್ಪತ್ತು ಕೆ.ಜಿ. ತೂಕದ ಪುಟ್ಟಿಯನ್ನ ಹೊತ್ಕೊಂಡು ಮನೆಕಡೆಗೆ ಬಿರಬಿರನ ದಾಪುಗಾಲು ಹಾಕತೊಡಗಿದ. ಪುಟ್ಟಿ ಅಪ್ಪನಿಗೆ ತಿರುಗುಬಾಣ ಬಿಟ್ಟು, "ನಿಧಾನವಾಗಿ ಹೋಗಪ್ಪಾ, ಏನವಸರ?" !

**ನಳಿನಿ ಸೂರ್ಯಪ್ರಕಾಶ್**

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ | ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|---|---|---|
| ರೇಡಿಯೋ ನಾಟಕಗಳು | ಬೀಚಿ | 70 | ಲೇವಡಿ ಟ್ವಿಸ್ಟ್ | ಬೀಚಿ | 100 |
| ಮಾತ್ರೆಗಳು | ಬೀಚಿ | 125 | ಬೆಳ್ಳಿ ಪತ್ರಗಳು | ಬೀಚಿ | 100 |
| ತಿಂಮನ ತಲೆ | ಬೀಚಿ | 70 | ಮಹಾಯುದ್ಧ | ಬೀಚಿ | 100 |
| ಹುಚ್ಚು ಹುರುಳು | ಬೀಚಿ | 50 | ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಸತೀ ಸೂಳೆ | ಬೀಚಿ | 110 | ಕತ್ತಲಲ್ಲಿ ಬಂದವಳು | ಬೀಚಿ | 90 |
| ಖಾದಿ ಸೀರೆ | ಬೀಚಿ | 170 | ಮಾತನಾಡುವ ದೇವರುಗಳು | ಬೀಚಿ | 75 |
| ಸತ್ತವನು ಎದ್ದು ಬಂದಾಗ | ಬೀಚಿ | 60 | ಮನೆತನದ ಗೌರವ | ಬೀಚಿ | 100 |
| ಕಾಣದ ಸುಂದರಿ | ಬೀಚಿ | 150 | ಗರತಿಯ ಗುಟ್ಟು | ಬೀಚಿ | 60 |
| ಕಲ್ಲು ಹೇಳಿತು | ಬೀಚಿ | 150 | ನಂಬರ್ ಐವತ್ತೈದು | ಬೀಚಿ | 60 |
| ತಿಂಮ ರಸಾಯನ | ಬೀಚಿ | 120 | ಉತ್ತರ ಭೂಪ | ಬೀಚಿ | 250 |
| ದೇವನ ಹೆಂಡ | ಬೀಚಿ | 170 | ನರಪ್ರಾಣಿ | ಬೀಚಿ | 75 |
| ಮೇಡಮ್ಮನ ಗಂಡ | ಬೀಚಿ | 110 | ನನ್ನ ಭಯಾಗ್ರಫಿ | ಬೀಚಿ | 270 |
| ಟೆಂಟ್ ಸಿನಿಮಾ | ಬೀಚಿ | 100 | ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 | ಅಂದನಾ ತಿಂಮ | ಬೀಚಿ | 125 |
| ಮುರಿದ ಬೊಂಬೆ | ಬೀಚಿ | 100 | ಹೆಂಡತಿ ನಕ್ಕಾಗ | ಬೀಚಿ | 125 |
| ಸೀತೂ ಮದುವೆ | ಬೀಚಿ | 80 | ಕಮಲಮ್ಮನ ಕುಂಕುಮ ಬಲ | ಬೀಚಿ | 125 |

| | | |
|---|---|---|
| ಬೀchi ಬುಲ್ಲೆಟಿನ್ | ಕೇಶವ ರಾವ್ | 200 |
| ಬೀchi ತೋಚಿದ್ದು ಗೀಚಿದ್ದು | ಸ್ವಾಮಿ ರಾವ್ ಕುಲ್ಕರ್ಣಿ | 120 |
| ಬೊಂಬಾಟ್ ಬೀಚಿ | ಬೇಲೂರು ರಾಮಮೂರ್ತಿ | 60 |
| ವಾಗ್ಬಾಣಗಳು | ಗಂಗಾವತಿ ಪ್ರಾಣೇಶ್ | 50 |
| ನಗಿಸುವವನ ನೋವುಗಳು | ಗಂಗಾವತಿ ಪ್ರಾಣೇಶ್ | 50 |
| ಪೊಲೀಸ್ ಎನಕೌಂಟರ್ | Dr..ಡಿ.ವಿ.ಗುರುಪ್ರಸಾದ್ IPS | 200 |
| ಪೊಲೀಸ್ ಜೀವನದಲ್ಲಿ ಹಾಸ್ಯ | Dr.ಡಿ.ವಿ.ಗುರುಪ್ರಸಾದ್ IPS | 200 |
| ವಿಶ್ವಪರ್ಯಟನೆ | Dr.ಡಿ.ವಿ.ಗುರುಪ್ರಸಾದ್ IPS | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | Dr.ಡಿ.ವಿ.ಗುರುಪ್ರಸಾದ್ IPS | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**